# ದ್ರೌಪದಿಯ ಶ್ರೀಮುಡಿ

**“ಆ ಮಹೀಶಕ್ರತುವರದೊಳುದ್ದಾಮ ಮುನಿಜನರಚಿತ ಮಂತ್ರ**
**ಸ್ತೋಮ ಪುಷ್ಕರಪೂತ ಪುಣ್ಯ ಜಲಾಭಿಷೇಚನದ**
**ಶ್ರೀಮುಡಿಗೆ ಕೈಯಿಕ್ಕಿದನು; ವರಕಾಮಿನೀ ನಿಕುರುಂಬವಕಟಕ**
**ಟಾ ಮಹಾಸತಿ ಶಿವಶಿವಾಯೆಂದೊದಱೆತಲ್ಲಲ್ಲಿ.”**
**– ನಾರಾಣಪ್ಪ**

**“ಇದಱೊಳ್ ಶ್ವೇತಾತಪತ್ರಸ್ಥಗಿತ ದಶದಿಶಾ ಮಂಡಲಂ ರಾಜಚಕ್ರಂ**
**ಪುದಿದಱ್ಕಾಡಿತ್ತಡಂಗಿತ್ತಿದಱೊಳೆ ಕುರುರಾಜಾನ್ವಯಂ ಮತ್ಪ್ರತಾಪ**
**ಕ್ಕಿದಱೆಂದಂ ನೋಡಗುರ್ವುರ್ವಿದುದಿದುವೆ ಮಹಾಭಾರತಕ್ಕಾದಿಯಾಯ್ತು**
**ಬ್ದದಳಕ್ಕೀ ಪೇೞ ಸಾಮಾನ್ಯಮೆ ಬಗೆಯೆ ಭವತ್ಕೇಶ ಪಾಶ ಪ್ರಪಂಚಂ”**
**– ಪಂಪ**

**“ದ್ರೌಪದಿಯ ತುರುಬಿಗೆ ಈ ಆಡಂಬರವೇಕೆ?.... ಕನ್ನಡ ಶಾರದೆಯ**
**ಮೂರಂಗುಲದ ಮೂಗಿಗೆ ಮೊಳದುದ್ದದ ಈ ಸಂಸ್ಕೃತ ಮೂಗುತಿಯೇಕೆ?”**
**– ಒಂದು ವಿಮರ್ಶೆ**

೧

ಕನ್ನಡ ಸಾಹಿತ್ಯರಂಗದಲ್ಲಿ ದ್ರೌಪದಿಯ ಶ್ರೀಮುಡಿಗೆ ಕೈಯಿಟ್ಟ ನಾಲ್ವರು ಸಮರ್ಥರಲ್ಲಿ ಇಬ್ಬರು ಮಹಾಕಲಿಗಳು, ಇನ್ನಿಬ್ಬರು ಮಹಾಕವಿಗಳು: ಭೀಮ ದುಶ್ಯಾಸನ; ಪಂಪ, ನಾರಣಪ್ಪ. ಒಬ್ಬ ಮುಡಿ ಬಿಚ್ಚಿದ ಕಲಿ, ಇನ್ನೊಬ್ಬ ಕಟ್ಟಿದ ಕಲಿ. ದ್ರೌಪದಿಯ ಮುಡಿ ಬಿಚ್ಚಿದ ಸಂದರ್ಭದಲ್ಲಿ ಪಂಪ ತನ್ನ ‘ಹಿತಮಿತ ಮೃದುವಚನ’ತೆ ಅತಿ ಕಾರ್ಪಣ್ಯವಾಗುವಷ್ಟರ ಮಟ್ಟಿಗೆ ಸಂಕ್ಷೇಪವಾಗಿ ವರ್ಣಿಸಿಬಿಟ್ಟು ಮುಂದಿನ ರುದ್ರಭಯಂಕರ ಸನ್ನಿವೇಶಕ್ಕೆ ಧಾವಿಸಿದ್ದಾನೆ. ಅವನ ಪ್ರತಿಭೆಯ ದೃಷ್ಟಿಯಲ್ಲಿ ಆ ಸಂದರ್ಭ ಛಂದಸ್ಸಿನ ಗೌರವಕ್ಕೂ ಪಾತ್ರವಾಗಿಲ್ಲವೆಂಬಂತೆ ತೋರುತ್ತದೆ. ನಾರಣಪ್ಪ ಸುಮಾರು ಐವತ್ತು ಷಟ್ಪದಿಗಳಲ್ಲಿ ವಿಸ್ತಾರವಾಗಿ ವಿವರವಾಗಿ ಹೇಳುವುದನ್ನೆಲ್ಲ ಪಂಪ ಹತ್ತು ಹನ್ನೆರಡು ಗದ್ಯದ ಮತ್ತು ನಾಲ್ಕೇನಾಲ್ಕು ಪದ್ಯದ ಪಂಕ್ತಿಗಳಲ್ಲಿ ವರ್ಣಿಸಿ ಪೂರೈಸುತ್ತಾನೆ, ನಾರಣಪ್ಪ ಹೇಳಿರುವ ಯಾವುದನ್ನೂ ಬಿಡದೆ.

“ಅಂತು ದುರ್ಯೋಧನನ್ ಅಜಾತಶತ್ರುವಿನ ಸರ್ವಸ್ವಮೆಲ್ಲಮಂ ಗೆಲ್ದು, ‘ಗೆಲ್ದ ಕಸವರಮೆಲ್ಲಂ ಬಂದುದು ಪಾಂಚಾಲ ರಾಜತನೂಜೆಯೊರ್ವಳ್ ಬಂದಿಳಿಲ್ಲ; ಆಕೆಯಂ ತನ್ನಿಂ’ ಎಂದು, ಯುಧಿಷ್ಠಿರಂ ಕೊಟ್ಟ ನನ್ನಿಯ ಬಲದೊಳ್ ತನಗೆ ಲಯಮಿಲ್ಲದುದನ್ ಅಱೆದು, ಮೇಗಿಲ್ಲದ ಗೊಡ್ಡಾಟಮಾಡಲ್ ಬಗೆದು, ಕರ್ಣನ ಲೆಂಕಂ ಪ್ರಾತಿಕಾಮಿಯೆಂಬುಮಂ ತನ್ನ ತಮ್ಮಂ ದುಶ್ಯಾಸನನುಮಂ ಪೇೞ್ದೊಡೆ ಅವಂದಿರಾಗಳೆ ಬೀಡಿಂಗೆವರಿದು, ‘ರಜಸ್ವಲೆಯಾಗಿರ್ದೆಂ ಮುಟ್ಟಲಾಗದು’ ಎನೆಯಂ ಒತ್ತಂಬದಿಂದೊಳಗಂ ಪೊಕ್ಕು, ಪಾಂಚಾಲಿಯಂ ಕಣ್ಣೆಡೆ ಜಡಿದು, ಮುಡಿಯಂ ಪಡಿದು ತನ್ಮಧ್ಯದಿಂ ಸುಯೋಧನನ ಸಭಾಮಧ್ಯಕ್ಕೆ ತಂದು-

*"ಮನದೊಳ್ ನೊಂದಮರಾಪಗಾಸುತ ಕೃಪ ದ್ರೋಣಾದಿಗಳ್ ಬೇಡವೇ*
*ಡೆನೆಯುಂ ಮಾಣದೆ ತೊಟ್ಟಿ ತೊಟ್ಟುವೆಸಕೆಯ್ ಪೋ ಪೋಗು ನೀನೆಂದು ಬ*
*ಯ್ದನಿತಾನುಂ ತೆಱದಿಂದಮುಟ್ಟುದುವರಂ ಕೆಯ್ವಂದು ದುಶ್ಶಾಸನಂ*
*ತನಗಂ ಮೆಲ್ಲಗೆ ಮೃತ್ಯು ಸಾರೆ ತೆಗೆದಂ ಧಮ್ಮಿಲ್ಲಮಂ ಕೃಷ್ಣೆಯಾ"*

ಪಂಪನಿಗೆ ಕೃಷ್ಣೆಯ ಕೃಷ್ಣಕಬರೀಭಾರ ನಾರಣಪ್ಪನಿಗೆ ತೋರುವಂತೆ 'ಶ್ರೀಮುಡಿ' ಆಗಿಲ್ಲ. ಅದಕ್ಕೆ ರಾಜಸೂಯಯಾಗದ ಸಮಯದಲ್ಲಿ ತೀರ್ಥ ಜಲಾಭಿಷೇಕ ಆಗಿಲ್ಲ. ಮುನಿವರ್ಯರ ಮಂತ್ರಘೋಷದಿಂದ ಪವಿತ್ರವೂ ಆಗಿಲ್ಲ. ದುಶ್ಶಾಸನನು ಅದನ್ನು ಹಿಡಿದಾಗ ಅದರಿಂದ ಮುಂದೆ ಒದಗುವ ಕೇಡನ್ನೇನೊ ಸೂಚಿಸುತ್ತಾನೆ. ಆ ಕೇಡು ಲೌಕಿಕ ಅಪರಾಧಕ್ಕೆ ಒದಗುವ ಶಿಕ್ಷೆಯ ರೂಪದ್ದೇ ಹೊರತು ಪಾಪರೂಪದ ಮಹಾಪಾತಕಕ್ಕೆ ಒದಗುವ ಉಗ್ರತಮ ಧರ್ಮದಂಡನೆ ಅಲ್ಲ. "ಕೃಷ್ಣೋರಗನಂ ಪಿಡಿದ ಬೆಳ್ಳಾಳಂತುಮ್ಮನೆ ಬೆಮರುತ್ತುಮಿರ್ದ" ಎಂಬುದು ಅವನ ಆಗಿನ ದುಶ್ಶಾಸನನ ವರ್ಣನೆ.

ಇಲ್ಲಿಯವರೆಗೆ ಒಳ್ಳೆಯಂತಿದ್ದ ಪಂಪನ ಪ್ರತಿಭಾಗ್ನಿ ಮುಂದೆ ತೆಕ್ಕನೆ ಕಾಳಿಂಗನಂತೆ ಹೆಡೆಯೆತ್ತಿ ಭಯಂಕರವಾಗುವುದನ್ನು ಕಾಣುತ್ತೇವೆ: ರಿಪುಗಳಗ್ರಹ ಮಾದ ಭೀಮಸೇನನ ರೌದ್ರಸ್ಥಿತಿ; ಮೇರುವಂ ಪಿಡಿದು ಕೀಳ್ವ ಗಾಂಡೀವಿಯ ಕೋಪಾಗ್ನಿ; ಕಾಲಾಗ್ನಿರೂಪವಾದ ನಕುಲ ಸಹದೇವರ ಭೀಷಣಭ್ರೂಭಂಗ:

*ಕೋಪದ ಪೆರ್ಚಿನೊಳ್ ನಡುಗುವೂರುಯುಗಂ ಕಡುಪಿಂದರಲ್ವ ನಾ*
*ಸಾಪುಟಮೆಕ್ಕೆಯಿಂ ಪೊಡರ್ವ ಪುರ್ವು ಪೊದೞ್ದ ಲಯಾಂತತ್ರಿಶೂ*
*ಲೋಪಮ ಭೀಷಣಭ್ರುಕುಟಿ ಮುನ್ನಮೆ ರೌದ್ರಗದಾಯುಧಂಬರಂ*
*ಪೋಪ ಭುಜಾರ್ಗಳಂ ರಿಪುಗಳಗ್ರಹಮದುದು ಭೀಮಸೇನನಾ.*
*ನೆಲನಂ ನುಂಗುವ ಮೇರುವಂ ಪಿಡಿದು ಕೀೞ್ವಾಶಾ ಗಜೇಂದ್ರಂಗಳಂ*
*ಚಲದಿಂ ಕಟ್ಟುವ ಸಪ್ತ ಸಪ್ತಿಯನಿಳಾ ಭಾಗಕ್ಕೆ ತರ್ಪೊಂದು ತೋ*
*ಳ್ವಲಮುಂ ಗರ್ವಮುಮುಣ್ಮೆ ಪೋನ್ಮೆ ಮನದೊಳ್ ಕೋಪಾಗ್ನಿ ಕೆಯ್ಗಣ್ಮೆ ಕ*
*ಣ್ಮಲರೊಳ್ ಬಂದಿರೆ ನೋಡಿದಂ ಕಲುಷದಿಂ ಗಾಂಡೀವಿ ಗಾಂಡೀವಮಂ.*

*ಪ್ರಕುಪಿತ ಮೃಗಪತಿ ಶಿಶು ಸ*
*ನ್ನಿಕಾಶರತಿ ವಿಕಟ ಭೀಷಣ ಭ್ರೂಭಂಗರ*
*ನಕುಲ ಸಹದೇವರಿರ್ವರು*
*ಮಕಾಲ ಕಾಲಾಗ್ನಿ ರೂಪಮಂ ಕೆಯ್ಕೊಂಡರ್.*

ಸಭೆಯಲ್ಲಿ ಅವಮಾನಿತೆಯಾದ ದ್ರೌಪದಿ "ಮುಡಿಯಂ ಪಿಡಿದೆೞೆದವನಂ ಮಡಿಯಿಸಿ, ಮತ್ತವನ ಕರುಳ ಪಿಣಿಲಿಂದೆನ್ನಂ ಮುಡಿಯಿಸುಗೆ! ಆ ಮುಡಿಯಂದಲ್ ಮುಡಿಯೆಂ ಗಳಮೀಗಳ್ ಅಂತೆ ಎನ್ನಿಯ ಮುಡಿಯಂ" ಎಂದು ಪೂಣ್ದುದನ್ನು ಆಲಿಸಿ "ಮರುಳ್ಗೆ ಧೂಪಮಂ ತೋರಿದ ಮಾೞ್ಕೆಯಿಂ" ಮರುತ್ಸುತನು ಇಂತು ಪ್ರತಿಜ್ಞಾಬದ್ಧನಾಗಿ ಉತ್ತರ ಕೊಡುತ್ತಾನೆ:

*"ಮುಳಿಸಿಂದಂ ನುಡಿದೊಂದು ನಿನ್ನ ನುಡಿ ಸಲ್ಗೆ!*
*ಆರಾಗದೆಂಬರ್*

*ಮಹಾ ಪ್ರಳಯೋಲ್ಕೋಪಮ ಮದ್ಗದಾಹತಿಯಿನ್ ಅತ್ಯುಗ್ರಾಜಿಯೊಳ್*
*ಮುನ್ನಂ ಈ ಖಳ ದುಶ್ಶಾಸನನಂ ಪೊರಳ್ಚಿ,*
*ಬಸಿಱಂ ಪೋೞ್ದೆೞ್ಕೆ, ಬಂಬಲ್ಗರುಳಿನ್*
*ಅನಲ್ತೆ ವಿಳಾಸದಿಂ ಮುಡಿಯಿಪೆಂ, ಪಂದೇಜ ಪತ್ರೇಕ್ಷಣೇ."*

## ೨

ಪಂಪನ ಸಂಗ್ರಹಶೀಲೆಯಾದ ಸಂಸ್ಕೃತಕಲೆ ಹೀಗೆ ಚಿತ್ರಿಸಿರುವುದನ್ನು ನಿಸರ್ಗ ಸಹಜವಾದ ನಾರಣಪ್ಪನ ಗ್ರಾಮೀಣ ದೈತ್ಯಕಲೆ ಬೇರೊಂದು ಅದ್ಭುತ ರೀತಿಯಲ್ಲಿ ಚಿತ್ರಿಸುತ್ತದೆ. ಗದುಗಿನ ಭಾರತದಲ್ಲಿ ಬರುವ ಸನ್ನಿವೇಶಗಳಲ್ಲಿಯಾಗಲಿ ಪಾತ್ರಗಳಲ್ಲಿಯಾಗಲಿ ವರ್ಣನೆಗಳಲ್ಲಿಯಾಗಲಿ ಪಂಪಭಾರತದ ನವುರು ನಯಗಳನ್ನು ನಾವು ಕಾಣುವುದಿಲ್ಲ. ಅಲ್ಲಿ ಅದಮ್ಯವಾದ ಪ್ರಕೃತಿ ಸಹಜಶಕ್ತಿ ಯಾವ ಕೃತಕತೆಯ ನಾಗರಿಕ ಬಂಧನಗಳಿಗೂ ಅಡಿಯಾಳಾಗದೆ ಸ್ವತಂತ್ರವಾಗಿ ಸ್ವಚ್ಛಂದವಾಗಿ ಸ್ಥೂಲವಾಗಿ ಪ್ರವರ್ತಿಸುವುದನ್ನು ಕಾಣುತ್ತೇವೆ. ಪಂಪನಿಗೆ ಯಾವುದು ಕಲಾ ಮಾತ್ರವಾದ ಲೌಕಿಕಕಾವ್ಯವೊ ಅದು ನಾರಣಪ್ಪನಿಗೆ ಜೀವನೋದ್ದೇಶ ಸರ್ವಸ್ವಕ್ಕೂ ಮಾರ್ಗವಾದ ಪವಿತ್ರಸಾಧನೆ. ಪಂಪನಂತೆ ನಾರಣಪ್ಪ ತನ್ನ ಮಹೋನ್ನತಿಯನ್ನು ಇಬ್ಬಗಿ ಮಾಡಿಕೊಂಡು ಲೌಕಿಕ ಆಗಮಿಕವೆಂದು ಎರಡು ಕಾವ್ಯಗಳಲ್ಲಿ ಅದನ್ನು ಹಂಚಿ, ಪ್ರಕೃತಿಸಹಜವಾದ ಔನ್ನತ್ಯವನ್ನು ಕುಬ್ಜತರವನ್ನಾಗಿ ಮಾಡಿಕೊಂಡಿಲ್ಲ. ನಾರಣಪ್ಪನಿಗೆ ತನ್ನ ಕೃತಿ ಲೌಕಿಕ, ಆಗಮಿಕ, ವ್ಯಾವಹಾರಿಕ, ಪಾರಮಾರ್ಥಿಕ ಎಲ್ಲವನ್ನು ಒಳಕೊಂಡ ಅಖಂಡಕೃತಿ. ಕಾವ್ಯರಸಾಸ್ವಾದನೆ ಮಾತ್ರವಲ್ಲ ದೈವೋಪಾಸನೆಯೂ ಅಲ್ಲಿಯ ಅವಿಭಕ್ತ ಉದ್ದೇಶ. ಅವನು ದ್ರೌಪದಿಯ ಮುಡಿಯನ್ನು 'ಸಿರಿಮುಡಿ'ಎಂದ ವಿಶೇಷಣದಿಂದ ಕರೆಯುವುದಕ್ಕೆ ಬದಲಾಗಿ 'ಶ್ರೀಮುಡಿ' ಎಂಬ ವಿಶೇಷಣವನ್ನೊಡ್ಡಿ ಧ್ವನಿಯಿಂದ ಅದನ್ನು ಪವಿತ್ರತರವನ್ನಾಗಿ ಮಾಡಿದ್ದಾನೆ. ದುಶ್ಶಾಸನನ ಕೃತ್ಯ ಅಪರಾಧ ಮಾತ್ರವಲ್ಲ. ಮಹಾಪಾತಕ ಎಂಬುದನ್ನು ಸೂಚಿಸುತ್ತಾನೆ. ಆ ಮುಡಿ ಬರಿ ಹೆಂಗಸಿನ ಕೂದಲಲ್ಲ.

ವಿದುರನ ಹಿತಬೋಧೆಯನ್ನು ಧಿಕ್ಕರಿಸಿ ದುರ್ಯೋಧನನು "ಇವನವರ ಬಹಿರಂಗಜೀವ ವ್ಯವಹರಣೆಯಾತನು; ವೃಥಾ ನಾನಿವನ ಕೆಣಕಿದೆನ್ ಅಕಟ ಬೋಧಭ್ರಾಂತ ಬಾಹಿರನ. ಇವನಿರಲಿ, ಬಾ. ಪ್ರಾತಿಕಾಮಿಕ, ಯುವತಿಯನು ಕರೆ, ಹೋಗು!" ಎಂದು ಆಜ್ಞಾಪಿಸುತ್ತಾನೆ. ಪ್ರಾತಿಕಾಮಿಕ ದ್ರೌಪದಿಯ ಸತೀಸಭೆಗೆ ಬಂದಾಗ ಅಲ್ಲಿ ಅವನು ರಾಜಸಭೆಯ ಸ್ಥಿತಿಗೆ ಸಂಪೂರ್ಣ ವ್ಯತ್ಯಸ್ತವಾದ ಸುಖದ, ಸೌಂದರ್ಯದ, ರಮಣೀಯತೆಯ, ಸನ್ನಿವೇಶವನ್ನು ಕಾಣುತ್ತಾನೆ. "ಎಳೆನಗೆಯ ಸುಲಿಪಲ್ಲ ಮುಕ್ತಾವಳಿಯ ನಖಕಾಂತಿಗಳ ಬೆಳಗಿ ಬಳಗವೆನೆ ಬಾಲಿಕೆಯರಿರ್ದರು ಸತಿಯ ಬಳಸಿನಲಿ."

*"ಗಿಳಿಯ ಮೆಲ್ನುಡಿಗಳ ವಿನೋದದಿ ಕೆಲರು, ವೀಣಾರವದ ರಹಿಯಲಿ*
*ಕೆಲರು, ಸರಸ ಸುಸಂಗ ಸಂಗೀತದ ಸಮಾಧಿಯಲಿ*
*ಕೆಲರು, ಎತ್ತದಲಮಳ ಮುಕ್ತಾವಳಿಯ ಚೆನ್ನೆಯ ಚದುರೆಯರು ಕಂ*
*ಗೊಳಿಸತಬಲೆಯ ಮಣಿಯ ಮಂಚ ಸುತ್ತುವಳಯದಲಿ."*

ನಾರಣಪ್ಪನ ಕಣ್ಣಿಗೆ ಅಥವಾ ಪ್ರಾತಿಕಾಮಿಯ ದೃಷ್ಟಿಗೆ, 'ಚಕಿತ ಬಾಲ ಮೃಗಾಕ್ಷಿ' ದ್ರೌಪದಿ ಆ ಯುವತಿಯರ ಮಧ್ಯದಲ್ಲಿ ಹೇಗೆ ಕಾಣುತ್ತಾಳೆ? ಸಕಳ ಶಕ್ತಿಪರೀತ ವಿಮಳಾಂಬಿಕೆಯವೋಲ್! ವರಮಂತ್ರ ದೇವೀಪ್ರಕರ ಮಧ್ಯದಿ ಶೋಭಿಸುವ ಸಾವಿತ್ರಿಯಂದದಲಿ! ಪ್ರಾತಿಕಾಮಿ ಆ 'ಪತಿವ್ರತೆಯರ ಶಿರೋ ಮಣಿಯ ಹತ್ತಿರೈತರಲಂಜಿದನು. ತನ್ನುತ್ತಮಾಂಗಕ್ಕೆ ಕರಯುಗವ ಚಾಚುತ್ತ'

ಪಾಂಚಾಲನಂದನೆಗೆ ಬಿನ್ನಹ ಮಾಡುತ್ತಾನೆ. ದ್ರೌಪದಿಯ ರಾಜ್ಞೀಭಾವಕ್ಕೆ, ಪವಿತ್ರತೆಗೆ, ಆಕೆಯ ವ್ಯಕ್ತಿತ್ವದ ಶ್ರೀಗೆ ಪ್ರಾತಿಕಾಮಿ ಕೈಮುಗಿದು ಗೌರವ ತೋರುತ್ತಾನೆ:

*"ತಾಯೆ, ಬಿನ್ನಹ: ಇಂದು ನಿಮ್ಮಯ ರಾಯ ಸೋತನು ಜೂಜಿನಲಿ; ಕುರು*
*ರಾಯ ಗೆಲಿದನು, ಕೋಶವಂ ಕರಿ ತುರುಗ ರಥಸಹಿತ."*

ಮುಂದೆ ಹೇಳುವುದನ್ನು ಪ್ರಾತಿಕಾಮಿ ಸಂಕಟವುಕ್ಕಿ ಹೇಳುತ್ತಾನೆ. ಬಹುಶಃ ತೊದಲಿ ತೊದಲಿ ತಡೆದು ತಡೆದೂ ಹೇಳುತ್ತಾನೆ:

*"ನೋಯಲಾಗದು, ಹಲವು ಮಾತೇನ್? ಆ ಯುಧಿಷ್ಠಿರ ನೃಪತಿ... ಸೋತನು*
*ತಾಯೆ... ಭೀಮಾರ್ಜುನ... ನಕುಲಸಹದೇವ... ನೀವ್‌ಸಹಿತ!"*

ಆ ಸತಿಯರ ಸಭೆಯ ಸುಗ್ಗಿಯ ಸಿರಿಗೆ ಮಂಜಿನ ಸರಿ ಬೀಳುತ್ತದೆ. ಮೌನಮಯ ಜಲದ ಮುಸುಗುತ್ತದೆ. ಇದು ಮುಂದಿನ ದ್ರೌಪದಿಯ ಮಾತು:

*"ದೂತ ಹೇಳಯ್, ತಂದೆ, ಜೂಜನ್ ಅಜಾತರಿಪುವಾಡಿದನೆ?*
*ಸೋತನೆ?*
*ಕೈತವದ ಬಲೆಗಾರರವದಿರು ಶಕುನಿ ಕೌರವರು:*
*ದ್ಯೂತದಲಿ ಮುನ್ನೇನನ್ ಒಡ್ಡಿಯೆ ಸೋತನ್ ಎನ್ನನು?*
*ಶಿವಶಿವಾ ನಿರ್ಧೂತಕಿಲ್ಬಿಷನ್ ಅರಸನ್!"*

ಪ್ರಾತಿಕಾಮಿ ನಡೆದ ಸಂಗತಿಯನ್ನು ವಿವರಿಸುತ್ತಾನೆ: ಯುಧಿಷ್ಠಿರನು ಮೊದಲು ತನ್ನನ್ನು ಸೋತ ಬಳಿಕ ದ್ರೌಪದಿಯನ್ನು ಸೋತನೆಂದು. ಆ ಅವಿವೇಕದ ಆಡಳಿತದಲ್ಲಿ ತರ್ಕ ತನ್ನನ್ನು ರಕ್ಷಿಸುತ್ತದೆಂದು ಭ್ರಮಿಸುತ್ತಾಳೆ ದ್ರೌಪದಿ. ಯುಧಿಷ್ಠಿರನು ಮೊದಲು ತನ್ನನ್ನು ಸೋತು ಆಮೇಲೆ ದ್ರೌಪದಿಯನ್ನು ಸೋತುದರಲ್ಲಿ ದೈವದ ರಕ್ಷಾಹಸ್ತವಿದೆಯೆಂದು ಆಸೆಬುರುಕಿಯಾಗುತ್ತಾಳೆ. "ವಿಹಿತವಿದು ಮಾನುಷವೆ? ದೈವದ ಕುಹಕವ್ಯಸಲೆ, ಮಗ! ತಾನೇ ಬಹೆನು. ನೀ ಹೋಗೊಮ್ಮೆ ಹೇಳೀ ಮಾತನಾ ಸಭೆಗೆ."

*"ಮುನ್ನ ತನ್ನನು ಸೋತ ಬಳಿಕಿನೊಳೆನ್ನ ಸೋತರೆ ಸಲುವುದೇ ಸಂ*
*ಪನ್ನ ವಿಮಳಜ್ಞಾನರಱಿದೀ ಪ್ರಶ್ನೆಗುತ್ತರವ*
*ಎನ್ನ ಮೆಚ್ಚಿಸಿಕೊಡಲಿ. ತಾ ಬಹೆನು."*

ಪ್ರಾತಿಕಾಮಿ ಹಿಂದಿರುಗುತ್ತಾನೆ. ನಡೆದುದನ್ನು ಹೇಳುತ್ತಾನೆ. ಅದಕ್ಕೆ ದುರ್ಯೋಧನನ ಒರಟುನುಡಿ "ವಾಯುಸುತ ಅಂಜಿಸುವನೆಂದ ಈ ನಾಯಿ ಬೆದರಿದನಕಟ!" ಎಂದು ಬಯ್ಯುತ್ತದೆ. ಮತ್ತೆ ತಮ್ಮನಿಗೆ ಆಜ್ಞಾಪಿಸುತ್ತಾನೆ: "ಹಿಡಿದೆಳೆದು ತಾ! ನರಪರೆಮ್ಮ ಕಿಂಕರರ್. ಐವರವವರಿದ್ದೇನ ಮಾಡುವರು? ತಮ್ಮ ಕರ್ಮವಿಪಾಕಗತಿ ತಮತಮ್ಮನೆ ಕಾಡುವುದು ಧರ್ಮದೊಳು, ಎಮ್ಮ ಕಾರಣವಲ್ಲ, ನೀ ಹೋಗು" ಸುಸಂಸ್ಕೃತನೂ ಯೋಗ್ಯನೂ ದಾಕ್ಷಿಣ್ಯಪರನೂ ಆದ ಪ್ರಾತಿಕಾಮಿ ಸಾಧಿಸಲಾರದ್ದನ್ನು ಸಾಧಿಸಿಯೆ ಬಿಡುವ ದೃಢಹಠಗರ್ವದಿಂದ ಜಗದೂಳಿಗದ ದುರುದುಂಬಿ ದುಶ್ಯಾಸನನು ಬಿಡುದಲೆ ವೆರಸಿ ಸತಿಯ ಅರಮನೆಯ ಬಾಗಿಲಿಗೆ ಧಾವಿಸುತ್ತಾನೆ. ಚರರು ತಡೆದರೆ ಮೆಟ್ಟಿದನು; ತಿವಿದನು ಕಠಾರಿಯಲಿ. ಯಾವ ಇಂತಹ ಖೂಳ ವಿಪತ್ತನ್ನೂ ನಿರೀಕ್ಷಿಸದೆ ತಮ್ಮ ಸೊಗಸಿನಲ್ಲಿದ್ದ ಹೆಣ್ಣುಮಕ್ಕಳು

ಈ ರಾಹುರೂಪನನ್ನು ಕಂಡು ಚಂದ್ರಮುಖಿ ದ್ರೌಪದಿಯ ಮರೆಹೋಗಲು ಓಡುತ್ತಾರೆ ದುಶ್ಯಾಸನನು ನೆಟ್ಟಗೆ ದ್ರೌಪದಿಯ ಇದಿರಿಗೆ ಹೋಗಿ ನಿಂದು ಅತ್ಯಂತ ಗ್ರಾಮ್ಯವಾಗಿ ಗಜರುತ್ತಾನೆ: :ಎಲೆಗೆ, ಗರುವತನವಿದು ಹಿಂದೆ ಸಲುವುದು. ಸಲ್ಲದಿದು ಕುರುರಾಜ ಭವನದಲಿ. ಇಂದು ಮೆರೆವರೆ, ನಮ್ಮ ತೊತ್ತಿರ ಮುಂದೆ ಮೆರೆ, ನಡೆ, ಮಂಚದಿಂದಿಳಿ." ಅದಕ್ಕೆ ಸತಿ ನಣ್ಪಿನಕ್ಕರೆಯಿಂದ "ಜನಪನನುಜನು ನೀನು. ಎನಗೆ ಮೈದಯನಲಾ! ತಪ್ಪೇನು? ಯಮ ನಂದನನು ಸೋಲಲಿ; ತನ್ನ ಪ್ರಶ್ನೆಗೆ ಕೊಡಲಿ ಮರುಮಾತ. ಅನುಜ, ಕೇಳ್ಳೈ, ಪುಷ್ಪವತಿಯಾ, ಎನಗೆ ರಾಜಸಭಾ ಪ್ರವೇಶನವು ಅನುಚಿತವಲೇ ಹೇಳು?" ಎಂದುದಕ್ಕೆ ಖಳರಾಯ ಖತಿಗೊಂಡು "ಎಲ್ಲಿಯದು ದುಷ್ಪ್ರಶ್ನೆ? ಮರುಮಾತೆಲ್ಲಿಯದು? ನೀ ಪುಷ್ಪವತಿಯಾಗು; ಅಲ್ಲಿ ಫಲವತಿಯಾಗು ನಡೆ ಕುರುರಾಜಭವನದಲಿ" ಎಂದು ಕಿರಾತರೂ ನಾಚುವಂತೆ ನುಡಿದು ಭಾರತ ಸಂಗ್ರಾಮವಲ್ಮೀಕ ರೂಪಿಣಿಯಾದ ಕೃಷ್ಣೆಯ ಮುಡಿಯ ಕೃಷ್ಣೋರಗಕ್ಕೆ ಕೈ ತುಡುಕುತ್ತಾನೆ. ಇಲ್ಲಿ ನಾರಣಪ್ಪನ ಭಾಷೆ ಅನಿವಾರ್ಯವಾಗಿ ಸಂಸ್ಕೃತಮಯವಾಗುತ್ತದೆ; ಆ ಸಂದರ್ಭವನ್ನು ಅತ್ಯಂತ ಧ್ವನಿಪೂರ್ಣವನ್ನಾಗಿ ಮಾಡುತ್ತದೆ. ದುಶ್ಯಾಸನನ ಕೃತ್ಯದ ದೌಷ್ಟ್ಯವನ್ನೂ ಅನರ್ಥವನ್ನೂ ಅದರ ಭಯಂಕರ ಪರಿಣಾಮವನ್ನೂ ವಸ್ತುಧ್ವನಿಯನ್ನಾಗಿ ಮಾಡಿ ನಮ್ಮ ರಸಜಿಹ್ವೆಯ ಮೇಲಿಡುತ್ತದೆ. ಇದೇ ಆ ಮಹಾ ಷಟ್ಪದಿಯ ಝೇಂಕೃತಿ:

*"ಆ ಮಹೀಶಕ್ರತುವರದೊಳುದ್ದಾಮ ಮುನಿಜನರಚಿತ ಮಂತ್ರ*
*ಸ್ತೋಮ ಪುಷ್ಕರಪೂತ ಪುಣ್ಯ ಜಲಾಭಿಷೇಚನದ"*
*ಶ್ರೀಮುಡಿಗೆ ಕೈಯಿಕ್ಕಿದನು ವರಕಾಮಿನೀ ನಕುರುಂಬವಕಟಕ*
*ಟಾ ಮಹಾಸತಿ ಶಿವಶಿವಾಯೆಂದೊದಱೆತಲ್ಲಲ್ಲಿ !"*

ಆ ಮುಡಿ ಬರಿಯ ಕೂದಲುಂಡೆಯಲ್ಲ. ಆ ಕೂದಲು ಯಃಕಶ್ಚಿತ ಸ್ತ್ರೀಯೊಬ್ಬಳದ್ದಲ್ಲ. ಅದು ಸಿರಿಮುಡಿ ಮಾತ್ರವಲ್ಲ, ಶ್ರೀಮುಡಿಯೂ ಅಹುದು. ಅನೇಕ ರಾಜರು ಸೇರಿದ್ದ ಅತ್ಯಂತ ಶ್ರೇಷ್ಠವಾದ ರಾಜಸೂಯ ಯಾಗದಲ್ಲಿ ಉದ್ದಾಮರಾದ ಋಷಿಮಹರ್ಷಿಗಳು ಮಂತ್ರಘೋಷ ಮಾಡುತ್ತಿರಲು ಅಂಥವರ ಹಸ್ತದಿಂದ ಪವಿತ್ರವಾದ ಪುಣ್ಯೋದಕದಿಂದ ಅಭಿಷೇಚನೆ ಮಾಡಿಸಿಕೊಂಡ ಮೂರ್ಧಕ್ಕೆ ಸೇರಿದ ಗೌರವವಸ್ತು. ಪೂಜಿಸಬೇಕಾದ ಅಂತಹ ವಸ್ತುವಿಗೆ ಧೂರ್ತಬುದ್ಧಿಯಿಂದ ಕೈಯಿಕ್ಕುವುದೆಂದರೆ ಅದರಿಂದೊದಗುವುದು ಸಾಮಾನ್ಯ ಹಾನಿಯಲ್ಲ. ಅದೇನು ಎಂಬುದನ್ನು ಪಂಪನ ಭೀಮನು ಆ ಮುಡಿಯನ್ನು ಕಟ್ಟುವಾಗ ಲೋಕ ಲೋಕಗಳಿಗೆ ರಸರೋಮಾಂಚನವಾಗುವಂತೆ ವರ್ಣಿಸಿ ಘೋಷಿಸಿದ್ದಾನೆ: ಯಾವ ಮುಡಿಯ ಹೆಗ್ಗಡಲಿನಲ್ಲಿ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ ಪುದಿದಳ್ಕಾಡಿತ್ತೊ, ಯಾವುದರಲ್ಲಿ ಕುರು ರಾಜಾನ್ವಯವೆ ಅಡಂಗಿತ್ತೊ, ಯಾವುದು ಮಹಾಭಾರತಕ್ಕಾದಿಯಾಯ್ತೊ ಆ ಕೇಶಪಾಶ, ಬಗೆಯೆ ಪೇಳ, ಸಾಮಾನ್ಯವೆ! ಅದೇನು ಒಂದು ಮುಷ್ಟಿ ಕೂದಲೆ? ಅದು ನಿಜವಾಗಿಯೂ ಶ್ರೀಮುಡಿ! ಈ ಎಲ್ಲ ವಸ್ತು ರಸ ಧ್ವನಿಯನ್ನೂ ಸಹೃದಯನ ಹೃದಯದಲ್ಲಿ ಒಮ್ಮೆಗೆ ಆಸ್ಫೋಟಿಸುವ ಸಲುವಾಗಿಯೆ ಕವಿಪ್ರತಿಭೆ ತನ್ನ ಗೌಡೀರೀತಿಯ ವಿಚಿತ್ರಮಾರ್ಗದ ಈ ಮಹಾ ಶೈಲಿಯನ್ನು ಆಶ್ರಯಿಸಿದೆ. ಅದರ ಆ ವ್ಯಂಗ್ಯಾರ್ಥ, ಆ ಧ್ವನಿ, ನಮಗೆ ತಟಕ್ಕನೆ ಸ್ಫುರಿಸದಿದ್ದರೆ ಈ ಶೈಲಿ ಬರಿಯ ಶಬ್ದಾಡಂಬರವಾಗಿ ತೋರುವುದರಲ್ಲಿ ಸಂದೇಹವಿಲ್ಲ. ಆಗಲೆ ನಮಗನ್ನಿಸುವುದು "ಕನ್ನಡ ಶಾರದೆಯ ಮೂರಂಗುಲದ ಮೂಗಿಗೆ ಮೊಳದುದ್ದದ ಈ ಸಂಸ್ಕೃತ ಮೂಗುತಿಯೇಕೆ?" ಎಂದು. ಪಂಪನ ಭೀಮನನ್ನು ಯಾರಾದರೂ ಪ್ರಶ್ನಿಸಿದ್ದರೆ 'ದ್ರೌಪದಿಯ ತುರುಬಿಗೆ ಈ ಆಡಂಬರ ಏಕೆ' ಎಂದು, ಏನುತ್ತರ ಲಭಿಸುತ್ತಿತ್ತು?

ಶ್ರೇಷ್ಠ ವಿಮರ್ಶಕರೊಬ್ಬರು ಅದಕ್ಕೆ ಉತ್ತರ ಕೊಟ್ಟಿದ್ದಾರೆ:

"ನಾರಣಪ್ಪನಲ್ಲಿ ಪದಾಧಿಕ್ಯವನ್ನು ಆರೋಪಿಸುವಾಗ ನಾವು ಎಚ್ಚರದಿಂದಿರಬೇಕು, ಸೂಕ್ಷ್ಮಗ್ರಾಹಿಗಳಾಗಬೇಕು. ತಾರತಮ್ಯವಿಚಕ್ಷಣೆಯನ್ನು ಗಳಿಸಬೇಕು. ವಾಚಾಳಿಯಂತೆ ಕಾಣಿಸಿಕೊಂಡರೂ ವಸ್ತುತಃ ಅವನು ವಾಗ್ಮಿ. ಕವಿತೆಯ ಹೊದಿಕೆ ಹೆಚ್ಚು ಹೆಚ್ಚು ಮಡಿಕೆಗಳನ್ನು ಪ್ರಕಟಿಸಿದರೂ ಕಾವ್ಯ ಪುರುಷನ ಭವ್ಯದೇಹಕ್ಕೆ ಅವೆಲ್ಲವೂ ಹೇಗೋ ಹೊಂದಿಕೊಂಡುಬಿಟ್ಟಿವೆ. ನಾರಣಪ್ಪನ ಭಾಷಾಪದ್ಧತಿ ಬಹು ಸ್ವತಂತ್ರವಾದದ್ದು; ಆದರೆ ಎಲ್ಲಿಯೂ ಅತಂತ್ರವಾಗಿಲ್ಲ ಅದು; ಕುತಂತ್ರವಂತೂ ಅದಕ್ಕೆ ತೀರ ಹೊರಗು. ಸಂಧ್ಯಾಮಯ ಪಶ್ಚಿಮ ದಿಕ್ಕಿನಲ್ಲಿ ಬಣ್ಣಗಳ ಹರವು ವಿಪರೀತ; ಸಾಗರದಲ್ಲಿ ನೀಲ ವರ್ಣದ ನೀರಿನ ರಾಶಿ ವಿಪರೀತ; ವೈಶಾಖದಲ್ಲಿ ಅರಳಿಯ ಮರಕ್ಕೆ ಹಸುರು ಎಲೆಗಳ ಸಮೃದ್ಧಿ ವಿಪರೀತ; ಹಾಗೆ ನಾರಣಪ್ಪನಲ್ಲಿ ವಚನವೈಭವ ವಿಪರೀತ."

[1]
ಗೌಡೀರೀತಿಯ, ವಿಚಿತ್ರಮಾರ್ಗದ ಈ ದೀರ್ಘಸಂಸ್ಕೃತಪದ ಭೂಯಿಷ್ಠ ಸಮಾಸವನ್ನು ಔಚಿತ್ಯವರಿತೆ ಕವಿ ಪ್ರಯೋಗಿಸಿದ್ದಾನೆ ಎಂಬುದು ಅನತಿದೂರ ಮುಂದುವರಿಯುವುದರಲ್ಲಿಯೆ ಸಹೃದಯನಿಗೆ ಗೋಚರವಾಗುತ್ತದೆ. ದುಶ್ಯಾಸನ ದ್ರೌಪದಿಯ ಮುಡಿವಿಡಿದು ಅವಳನ್ನು ಸಭೆಗೆ ಎಳೆತಂದ ಸಂದರ್ಭದಲ್ಲಿ ಅದನ್ನು ಕಂಡ ಸಭಾಸದರ ಸಂಕಟಪೂರ್ಣ ಕ್ರೋಧ ಈ ರೀತಿ ವ್ಯಕ್ತವಾಗುತ್ತದೆ:

*"ಅಹಹ ಪಾಂಡವರಾಯ ಪಟ್ಟದ ಮಹಿಳೆಗಿದು ವಿಧಿಯೆ?*
*ಮಹಾಕ್ರತುವಿಹಿತ ಮಂತ್ರ ಜಲಾಭಿಷಿಕ್ತ ಕಚಾಗ್ರೆಗಿದು ವಿಧಿಯೆ?*
*ಮಿಹಿರ ಬಿಂಬವ ಕಾಣದಾ ನೃಪಮಹಿಳೆಗಿದು ವಿಧಿಯೇ?*
*ವಿಧಾತ್ರನ ಕುಹಕವ್ಯಸಲೆ ಶಿವಶಿವಾ ಎಂದರು ಸಭಾಸದರು"*

ಹಿಂದಣ ಪದ್ಯದಲ್ಲಿ ಕವಿ ಉಪಯೋಗಿಸಿದ ಪದಪ್ರಯೋಗವನ್ನೆ ಸಭಾಸದರೂ ಮತ್ತೆ ಪ್ರಯೋಗಿಸುತ್ತಾರೆ. ದ್ರೌಪದಿಯ ಮುಡಿಯ ಅಸಾಮಾನ್ಯತೆಯನ್ನೂ ಲೋಕೋತ್ತರತೆಯನ್ನೂ ಅತಿಶಯತೆಯನ್ನೂ ಅಭಿವ್ಯಕ್ತಗೊಳಿಸಬೇಕಾದರೆ, ಅದು ಬರಿಯ ಸಾಮಾನ್ಯ ಸ್ತ್ರೀಯ ತುರುಬು ಮಾತ್ರವಲ್ಲ, ಪಾಂಡವರ ಪಟ್ಟದ ಮಹಿಳೆಯ ಶ್ರೀಮುಡಿ ಎಂಬ ಮಹಿಮೆಯನ್ನು ಪ್ರಕಟಿಸಬೇಕಾದರೆ ಇಂತಹ ವಿಶಿಷ್ಟ ಪದ ಸಂಘಟನೆಯಿಂದಲ್ಲದೆ ಅನ್ಯಥಾ ಸಾಧ್ಯವಿಲ್ಲ. ಇಲ್ಲಿ ಕವಿಯ ವಿದಗ್ಧ ಪದ ಸಂಘಟನೆಯಿಂದಲ್ಲದೆ ಅನ್ಯಥಾ ಸಾಧ್ಯವಿಲ್ಲ. ಇಲ್ಲಿ ಕವಿಯ ವಿದಗ್ಧ ಪದ ಮಹಾಶೈಲಿ ಖಡ್ಗಧಾರಾಪಥದಲ್ಲಿ ಸಂಚರಿಸುವ ಸುಭಟರ ಮನೋರಥದಂತೆ ತನ್ನ ಲಕ್ಷ್ಯಕ್ಕೆ ಧಾವಿಸುತ್ತಿರುವುದನ್ನು ನಾವು ಅನುಭವಿಸುತ್ತೇವೆ.**[2]**

ಹೆಣ್ಣಿನ ಮುಡಿಯ ಮನೋಹರತೆಯ ವರ್ಣನೆಗೆ ಈ ವೀರರಸದ್ಯೋತಕವಾದ ಪದಸಂಘಟನೆ ಅನುಚಿತವೆಂಬುದು ನಿಜವಾಗುತ್ತಿತ್ತು. ಸಂದರ್ಭ ಬೇರೆಯಾಗಿದ್ದರೆ. ಕವಿ ಸ್ವಯಂವರಕ್ಕೆ ಸಿದ್ಧಳಾಗುತ್ತಿರುವ ತರುಣಿ ದ್ರೌಪದಿಯ ಮುಡಿಯನ್ನು ಕುರಿತು ಬಣ್ಣಿಸುತ್ತಿದ್ದರೆ ಅದಕ್ಕೆ ಉಚಿತವಾದ ಶೃಂಗಾರ ರಸದ್ಯೋತಕವಾದ ಸುಕುಮಾರ ಮಾರ್ಗವನ್ನೆ ಪ್ರಯೋಗಿಸಬೇಕಾಗುತ್ತಿತ್ತು. ಆಗ ಪದಪಂಕ್ತಿ ಖಡ್ಗವಿಡಿದ ಸುಭಟರಂತೆ ಧಾವಿಸುವುದಕ್ಕೆ ಬದಲಾಗಿ ಉತ್ಫುಲ್ಲ ಕುಸುಮ ಕಾನನದಲ್ಲಿ ಹಾರಾಡುವ ಅಳಿಗಳಂತೆ ನಲಿದಾಡಬೇಕಾಗುತ್ತಿತ್ತು.**[3]**

ಹೀಗೆ ಒಂದು ಮಹಾಸಮಾಸದ ಪ್ರಯೋಗದಿಂದ ಅದ್ಭುತವಾದ ಧ್ವನಿಯನ್ನು ಸಹೃದಯ ಹೃದಯದಲ್ಲಿ ಮಿಡಿದು ಕುಮಾರವ್ಯಾಸ ಅದು ಹೇಗೆ ಸಫಲ ಸಾರ್ಥಕವಾಗುತ್ತದೆಯೋ ಅದನ್ನು ಹಾಡಹೊರಡುತ್ತಾನೆ. ಅಂತೂ ದ್ರೌಪದಿಯ ತುರುಬು ಶ್ರೀ ಮುಡಿಯಾಗಿ, ಮಹಾಭಾರತಕ್ಕೆ ಆದಿಯಾಗಿ, ಕೇಶಪಾಶ ಪ್ರಪಂಚವೆ ಆಗುತ್ತದೆ. ಮುಂದೆ ಸಭೆಯಲ್ಲಿ ನಡೆದ ಘಟನಾಪರಂಪರೆಗಳನ್ನು-ದುರ್ಯೋಧನನ ಕ್ರೂರವಚನ, ದ್ರೌಪದಿಯ ಪ್ರಾರ್ಥನೆ, ಭೀಷ್ಮರ ಹಿತಬೋಧೆ, ಭೀಮ ಕೋಪ, ಯುಧಿಷ್ಠಿರನ ಸಮಾಧಾನ, ದ್ರೌಪದಿಯ ವಸ್ತ್ರಾಪಹರಣ, ಆಕೆಯ ಕೃಷ್ಣಭಕ್ತಿ, ಕೃಷ್ಣನ ವರದಿಂದ ಸೀರೆ ಅಕ್ಷಯವಾಗುವುದು ಇತ್ಯಾದಿ-ನಾರಾಣಪ್ಪ ಸ್ವಲ್ಪ ಆಧಿಕ್ಯದೋಷವಿದ್ದರೂ ಅದನ್ನೆಲ್ಲ ಓದುಗರು ಮರೆಯುವಂತೆ ನಿರ್ವಹಿಸಿ ಆ ಪ್ರಸಂಗದ ಕೊನೆಯ ಘಟ್ಟಕ್ಕೆ ಬರುತ್ತಾನೆ.

ಸಹನೆಗೂ ಮಿತಿಯುಂಟು; ವಿಧೇಯತೆಗೂ ಎಲ್ಲೆಯುಂಟು. ಅಣ್ಣನ ಮಾತಿಗೆ ಕಟ್ಟುಬಿದ್ದು ತುಟಿಗಚ್ಚಿ ಕುಳಿತಿದ್ದ ಭೀಮನ ಸ್ಥೈರಣೆ ಪರ್ವತಶಿಖರದ ಸ್ಥೈರಣೆ ತನ್ನ ಗರ್ಭಾಗ್ನಿಯ ಉತ್ಕಟಪ್ರಕೋಪಕ್ಕೆ ಸೋತು ಅಗ್ನಿಯನ್ನು ಓಕರಿಸುವಂತಾಯಿತು. ದುರ್ಯೋಧನನು 'ಎಲೆಗೆ, ನಿನ್ನವರೇನುಮಾಡುವರ್? ಒಲೆಯೊಳಡಗಿದ ಕೆಂಡವಿವರಗ್ಗಳಿಕೆ: ನಂದಿದುದು!' ಎನ್ನುತ್ತ ಮುಂಜೆರಗೆತ್ತಿ ಮಾನಿನಿಯಾದ ದ್ರೌಪದಿಗೆ ತನ್ನ ತೊಡೆಯನ್ನು ತೋರಿಸುವ ಅಶ್ಲೀಲತೆಗೆ ಮುಂದುವರಿದಾಗ ದ್ರೌಪದಿ 'ನಿನ್ನಳಿವು ತೊಡೆಯಲಿ ಘಟಿಸಲಿ' ಎಂದು ಶಪಿಸುತ್ತಾಳೆ. ಆಗ

*"ಕಡಲ ತೆರೆಗಳ ತರುಬಿ ತುರುಗುವ*
*ವಡಬನಂತಿರೆ ಸಭೆಯನಡಹಾಯ್ದು*
*ಕುಡಿ ಕುಠಾರ ರಕುತವನು, ತಡೆಗಡಿ ಸುಯೋಧನನೂರುಗಳನ್*
*ಇಮ್ಮಡಿಸಿ ಮುನಿಯಲಿ*
*ಧರ್ಮಸುತನ್ ಎಂದೆದ್ದನಾ ಭೀಮ"*

ದುಶ್ಯಾಸನನು ಒಡೆಯ ಐತರಲು ಇಕ್ಷುತೋಟದ ಬಡನರಿಗಳು ಓಡುವಂತೆ ದುರ್ಯೋಧನನ ಬಳಿಗೆ ಓಡುತ್ತಾನೆ!

'ನುಡಿ, ತರುಣಿ, ತನ್ನಾಣೆ! ಭೀತಿಯ ಬಿಸಿಸಿದೆನಲಾ! ರಾಯನಾಜ್ಞೆಯ ತಡಿಕೆವಲೆ ನುಗ್ಗಾಯ್ತು ಹೋಗಿನ್ನು: ಮುಡಿಯ ನೀ ಕಟ್ಟು, ಎಲಗೆ ಸತಿ' ಎಂದ ತನ್ನ ಕಾಂತನಿಗೆ ಪಾಂಚಾಲಿ 'ಮುಡಿಯ ಕಟ್ಟುವ ಕಾಲ ಈ ದುಶ್ಯಾಸನ ಶಿರವ ಕೆಡಹಿ, ಶಾಕಿನಿಯರಿಗೆ ರಕುತವ ಕುಡಿಸಿ ತಣಿಯಲು ಕರುಳುದಂಡೆಯ ಮುಡಿವ ವ್ರತ ಎನಗಿಹುದು. ನೀ ಹೇಳಿದಕೆ ನಿರ್ವಾಹ' ಎಂಬ ತನ್ನ ಹೂಣಿಕೆಯ ನಿಧಿಯನ್ನು ಭೀಮನಿಗೆ ಕೈಯೆಡೆಯಾಗಿ ನೀಡುತ್ತಾಳೆ. ಆಗ ಭೀಮನ ಬಾಯಿಂದ ಮಹಾಭಾರತದ ಭಯಂಕರ ಪ್ರತಿಜ್ಞೆಯೊಂದು ಭುವನಕಂಪನಕಾರಿಯಾಗಿ ಹೊರ ಹೊಮ್ಮುತ್ತದೆ;

*"ಐಸಲೇ!*
*ಈ ವ್ರತದ ನಿನ್ನಯ ಭಾಷೆ ನಮ್ಮದು. ಸತಿಯೆ;*
*ಈ ದುಶ್ಯಾಸನನ ಹೊಡೆಗಡಿದು ಶಾಕಿನಿಯರಿಗೆ ರಕುತವನು ಸೂಸುತೆರೆವೆನು,ತರುಣಿ;*
*ಸೊಕ್ಕಿದ ದೂಷಕನ ನೆರೆ ಸೀಳಿ ನಿನ್ನಯ ಕೇಶವನು ಕಟ್ಟಿಸಿಯೆ ಮುಡಿಸುವೆ ಕರುಳ ದಂಡೆಗಳ!"*

ಈ ಸಂದರ್ಭದಲ್ಲಿ ಕುಮಾರವ್ಯಾಸ ಜಲಪಾತಘೋಷ ಸದೃಶವಾದ ವಾಣಿ ಪಂಪನ ಪ್ರಳಯತಾಂಡವ ಧೂರ್ಜಟಿಯ ಡಮರುಧ್ವಾನಸದೃಶವಾದ ಘೋಷದ ಮುಂದೆ ಕುನಿದುಬಿಡುತ್ತದೆ:

*ಕುಡಿವೆಂ ದುಶ್ಯಾಸನೋರಸ್ಥಳಮನಗಲೆ ಪೋೞ್ದುರ್ಯೋಧನನ ಕೆನ್ನೆತ್ತರಂ ಪೊ*
*ಕ್ಕುಡಿವೆಂ ಪಿಂಗಾಕ್ಷನೂರು ದ್ವಯಮನುರು ಗದಾಘಾತದಿಂ ನುಚ್ಚುನೂರಾ*
*ಗೊಡೆವೆಂ ತದ್ರತ್ ರಶ್ಮಿ ಪ್ರಕಟ ಮಕುಟಮಂ ನಂಬು ನಂಬೆನ್ನ ಕಣ್ಣಿಂ*
*ಕಿಡಿಯುಂ ಕೆಂಡಂಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ.*

*ಸುರಸಿಂಧು ಪ್ರಿಯಪುತ್ರ ಕೇಳ್ ಕಳಶಜಾ ನೀಂ ಕೇಳ್ ಕೃಪಾ ಕೇಳ ಮಂ*
*ದರದಿಂದಂಬುಧಿಯಂ ಕಲಂಕಿದಸುರಪ್ರಧ್ವಂಸಿವೋಲ್ ಬಾಹು ಮಂ*
*ದರದಿಂ ವೈರಿ ಬಲಾಬ್ಧಿ ಘೂರ್ಣಿಸೆ ಬಿಗುರ್ತೀ ಕೌರವರ್ ಕೂಡೆ ನೂ*
*ರ್ವರುಮಂ ಕೊಲ್ವೆನಿದೆನ್ನ ಪೂಣ್ಕೆ ನುಡಿದೆಂ ನಿಮ್ಮೀ ಸಭಾಮಧ್ಯದೊಳ್*

೩

ಮಹಾಭಾರತವನ್ನು ದ್ರೌಪದಿಯ ಮುಡಿಬಿಚ್ಚಿ ಮುಡಿಕಟ್ಟಿದ ಪ್ರಸಂಗದ ಕಥೆ ಎಂದು ವರ್ಣಿಸಿದರೆ ಹೆಚ್ಚೇನೂ ಸತ್ಯದೂರವಾಗಲಾರದು. ಆ ಮುಡಿ ಕಟ್ಟಿದ ಭಯಂಕರ ಸನ್ನಿವೇಶವನ್ನು ನಮ್ಮ ಮಹಾಕವಿಗಳಿಬ್ಬರೂ ಅದ್ಭುತವಾಗಿಯೆ ವರ್ಣಿಸಿದ್ದಾರೆ: ನಾರಾಣಪ್ಪ ಗ್ರಾಮೀಣಸಹಜವಾದ ವಿಸ್ತಾರ ವಿವರರೀತಿಯಲ್ಲಿ; ಪಂಪ ಮಹಾಕವಿ ಕೌಶಲ ಸಹಜವಾದ ವರಪ್ರಸಾದೋತ್ಪನ್ನ ಪ್ರಸನ್ನ ಗಂಭೀರ ಚತುರ ರೀತಿಯಲ್ಲಿ.

ಭೀಮದುಶ್ಯಾಸನರ ಯುದ್ಧಸನ್ನಿವೇಶ ಕರ್ಣಪರ್ವದೊಂದು ಶಿಖರಘಟ್ಟ. ಬಿಲ್ಲು ಕಣೆ ಕಠಾರಿ ಮೊದಲಾದ ಆಯುಧಗಳ ಯುದ್ಧ ಸ್ವಲ್ಪದೂರ ಮುಂದುವರಿದ ಮೇಲೆ ಆ ಇಬ್ಬರು ಮಲ್ಲಗಾಳೆಗದ ಕಲಿಗಳೂ ಪರಸ್ಪರಾನುಮತಿಯಿಂದ ದ್ವಂದ್ವಯುದ್ಧವನ್ನು ನಿಶ್ಚಯಿಸುತ್ತಾರೆ. 'ನೋಡುತಿರಲೀ ಬಲವೆರಡು' 'ನಿರಾ ಕುಳದಲೆಚ್ಚಾಡುವೆವು ನಿಲ್' ಎಂದ ಭೀಮನ ಕರೆಗೆ ದುಶ್ಯಾಸನನು 'ತೊಲಗಿರೈ ಪರಿವಾರ' 'ಬಾಳೆಯ ತಳಿಯ ಮುರಿವ ಅತಿಸಹಸಿ ಗಡ! ಕುಟ್ಮಳಿತ ಕೇತಕಿ ತೀಕ್ಷ್ಣ ಗಡ! ನೀವಳವಿಗೊಡದಿರಿ' ಎಂದು ತನ್ನ ಸೇನೆಗೆ ಪ್ರೇಕ್ಷಕತ್ವದ ಕಟ್ಟಾಜ್ಞೆಯನ್ನು ನೀಡಿ ಭೀಮನ ಮೇಲ್ವಾಯುತ್ತಾನೆ. ಇಬ್ಬರೂ ಧನುರ್ಯುದ್ಧದಲ್ಲಿ ತೊಡಗಿ ಸ್ವಲ್ಪ ಹೊತ್ತಿನಲ್ಲಿಯೆ ತಮಗೆ ಪ್ರಕೃತಿಸಹಜವಾದ ಮಲ್ಲಯುದ್ಧಕ್ಕೆ ಆಶಿಸುತ್ತಾರೆ. 'ಸಾಕಿದೇತಕೆ? ಮಲ್ಲಶ್ರಮದಲಿ ನೂಕಿ ನೋಡುವೆವಿನ್ನು, ಕೈದು ಗಳೇಕೆ ದೃಢಮುಷ್ಟಿ ಪ್ರಹಾರ ಸತ್ತ್ವರಿಗೆ? ನಿಯುದ್ಧ ವ್ಯಾಕರಣ ಪಾಂಡಿತ್ಯ ಎಮಗುಂಟು ಎಂದನಾ ಭೀಮ.' ಅಂತು ಕೊನೆಗೆ ಭೀಮ ದುಶ್ಯಾಸನರ ಯುದ್ಧ ನಿಯುದ್ಧಕ್ಕೆ[4]ತಿರುಗುತ್ತದೆ.

*"ಸೂಳವಿಸಿದರು ಭುಜಿಖರನಿಸ್ಸಾಳವನು, ನೆಲ ಕುಣಿಯೆ, ದಿಕ್ಕಿನ*
*ಮೂಲೆ ಬಿರಿಯೆ,ಪಯೋಧಿಗಳಲಿ ಪಯೋಧಿ ಪಲ್ಲಟಿಸೆ* **।**

*ಘೀಳಿಡಲು ಕಿವಿಗಳಲಿ ಸೇನಾ ಜಾಳವೆರಡರೊಳ್ ಉಭಯದಿಗು ಶುಂ*
*ಡಾಲ ಕೈಯಿಕ್ಕುವವೊಲಿವರೊತ್ತಿದರು ತೋಳ್ಗಳಲಿ* **।"**

ಕೊನೆಗೆ 'ಹರಿ ಮದೋತ್ಕಟದಂತಿಯನು ಬಕ್ಕರಿಸಿ ರಾವರಿಸುವೋಲ್, ಆ ನರಹರಿ ಹಿರಣ್ಯಕಶಿಪುವನಂಕದ ಮೇಲೆ ತೆಗೆವಂತೆ...ನಿಯುದ್ಧದಕ್ಕಡನಾದನಾಭೀಮ.' ಮುಂದೆ ನಡೆದ ರೌದ್ರ ಬೀಭತ್ಸಭಯಾನಕ ರಸಗಳ ರಕ್ತರಣದೌತಣವನ್ನು ಪರಿಭಾವಿಸಿದರೆ ಕುಮಾರವ್ಯಾಸನ ಈ

ಸಂದರ್ಭದ ರಾಕ್ಷಸಪ್ರತಿಭೆ ದುಶ್ಯಾಸನನ ರಕ್ತದೋಕುಳಿಯಾಡುವ ಭೀಮನೊಡನೆ ಪ್ರತಿಸ್ಪರ್ಧಿಸುವಂತಿದೆ.[5] ಈ ರಿಂಗಣಗುಣಿದಾಟದಲ್ಲಿ ಪರಿತೋಷಗೊಂಡ ಹಿಡಿಂಬಾಪ್ರಿಯನು 'ತನ್ನ ಒಲವಿನ ಅಹವವಾದುದು; ಐತಹುದು' ಎಂದು ದ್ರೌಪದಿಗೆ ಹೇಳಿಕಳುಹಿಸುತ್ತಾನೆ. ಆಕೆ ನಲವೇರಿ ನೇವುರದ ಎಳಮೊಳಗು ಮನಮೋಹಿಸುವಂತೆ ಆ ಎಡೆಗೆ ಬರುತ್ತಾಳೆ. ಆದರೆ ಅಗ್ನಿಪುತ್ರಿ ಕೂಡ ಆಗಿನ ಆ ಭೀಮಸೇನನ ಧುರಪರಾಕ್ರಮವಹ್ನಿ ಭುಗಿಲೆಂದರಿ ಭಯಂಕರ ರೌದ್ರ ರೂಪಿನೊಳಿರಲು ಅವನ ಬಳಿಗೆ ಬರಲು ಅಂಜಿ ಹಿಂದಿರುಗುತ್ತಾಳೆ. ಪವನಸುತನೆ ಆ ಪಂಕರುಹಮುಖಿಯನ್ನು ಬಳಿಗೆ ಕರೆದು 'ನಿನ್ನ ಬಯಕೆ ಪೂರೈಸಿತೆ ನೋಡು' ಎಂದು ನುಗ್ಗುನುರಿಯಾಗಿದ್ದ ದುಶ್ಯಾಸನನ ಮಹಾ ಹೆಣವನ್ನು ತೋರಿಸುತ್ತಾನೆ. ಅಜ್ಜಿಗುಜ್ಜಾದ ಆ ಕಳೇಬರವನ್ನು ಗುರುತಿಸಲಾರದೆ ದ್ರೌಪದಿ ಕೇಳುತ್ತಾಳೆ:

'ಆರಿವನು?'

'ನೀ ಕೊಟ್ಟ ಭಾಷೆಯ ಕಾರಣಿಕ!'ಭೀಮನ ಉತ್ತರ.

'ಖಳರೊಳಗಿದಾವನು?' ದುಶ್ಯಾಸನನೆ ದುರ್ಯೋಧನನೆ ಶಕುನಿಯೆ ಇತರ ದುಷ್ಟರೆ ಎಂಬ ವಿಚಾರದಲ್ಲಿ ಸಂಶಯಗ್ರಸ್ತೆಯಾದ ದ್ರೌಪದಿಯ ಪುನಃ ಪ್ರಶ್ನೆ.

'ವೀರ ದುಶ್ಯಾಸನ ಕಣಾ' ಎಂಬುದು ಭೀಮನ ಉತ್ತರ.

'ಅಂತಾದಡಾಯ್ತು!' ಎಂದು ಸಂತೃಪ್ತೆಯಾದ ಪಂಚವಲ್ಲಭೆ ಭರ್ತಾರನ ಬಳಿ ಸಾರಿ ನಸುನಗುತ್ತ ತನ್ನ ಚರಣದ ಚಾರುನೇವುರ ಉಲಿಯುವಂತೆ ಖಳನ ಮಸ್ತಕವನ್ನು ಒದೆಯುತ್ತಾಳೆ. 'ನುಡಿದ ಭಾಷೆಯ ಕಡೆತಕ ಪೂರೈಸಿ ಮಾಡುವ ಕಡುಗಲಿಗಳಾರುಂಟು ಜಗದೊಳು ನಿನ್ನ ಹೋಲುವರು' ಎಂದು ಗಂಡನನ್ನು ಮೆಚ್ಚುತ್ತಾಳೆ.

'ತರುಣಿ, ಕುಳ್ಳಿರು. ಸ್ವಾಮಿ ದ್ರೋಹಿಯ ಕರುಳ ಮುಡಿ, ಬಾ. ನಿನ್ನ ಖಾತಿಯ ಪರಿಹರಿಸುವೆನು. ಖಳನ ರುಧಿರಸ್ನಾನಕೆಳಸುವರೆ ಕೊಳ್' ಎಂದು ಖಳದುಶ್ಯಾಸನನ ಉರವನ್ನು ಇಬ್ಬಗಿಮಾಡಿ ಕುಡಿತೆಯಲಿ ಕೆನ್ನೀರನ್ನು ಮೊಗೆದ. ತನ್ನ ಮಾನಿನಿಯ 'ವೇಣಿಯನು ನಾದಿದನು. ದಂತಶ್ರೇಣಿಯಲಿ ಬಾಚಿದನು, ಬೈತಲೆ ತೆಗೆದು ಚೆಲುವಿನಲಿ.' ಮುಂದೆ ಭೀಮ ದ್ರೌಪದಿಯರ ಅಮಾನುಷವಾದ ರಕ್ತಶೃಂಗಾರದ ವರ್ಣನೆ ಭಯಂಕರವಾಗಿ ಸಾಗುತ್ತದೆ. ಅಂತೂ ಬಿಚ್ಚಿದ ಮುಡಿ ಕಟ್ಟುತ್ತದೆ. ಅದನ್ನು ಶ್ರೀಮುಡಿ ಎಂದು ಕರೆಯುವುದಕ್ಕೂ ಈಗ ಹೆದರಿಕೆಯಾಗುತ್ತದೆ. ಏಕೆಂದರೆ ಅಂದು ಯಾವ ಮುಡಿ ಕರತುವರದಲ್ಲಿ ಉದ್ದಾಮ ಮುನಿ ಜನರಿಂದ ರಚಿತವಾದ ಮಂತ್ರಪುಷ್ಕಲಗಳಿಂದ ಪೂತವಾದ ಪುಣ್ಯಜಲಾಭಿಷೇಚನದಿಂದ ಶ್ರೀಯುವಾಗಿದ್ದಿತೊ ಅದು ಇಂದು ನೀಚನೊಬ್ಬ ನೆತ್ತರು ನೆಣ ಕರುಳು ಮಾಂಸಾದಿ ಭಯಂಕರ ಅಸಹ್ಯತೆಯಿಂದ ಲಿಪ್ತವಾಗಿ ಅಶ್ರೀಯುತವಾಗಿದೆ ಅಥವಾ ರೌದ್ರಬೀಭತ್ಸ ಭಯಾನಕ ರಸಶ್ರೀಯುತವಾಗಿದೆ.

ಪಂಪಮಹಾಕವಿ ಇದೇ ಭಯಂಕರ ಚಿತ್ರವನ್ನು ಇದಕ್ಕಿಂತಲೂ ಹೆಚ್ಚು ಕಲಾಮಯವಾಗಿ ಕಲಾಭಿರುಚಿಗೆ ಸಮ್ಮತವಾಗುವಂತೆ ಹನ್ನೆರಡನೆಯ ಆಶ್ವಾಸದ ೧೫೦, ೧೫೧ ನೆಯ ಪದ್ಯಗಳಲ್ಲಿ ವರ್ಣಿಸಿರುವುದನ್ನು ನಾವು ಕಾಣುತ್ತೇವೆ. ದ್ರೌಪದಿಯೂ ಅದನ್ನು ಕಂಡಾಗ ಅವಳ ಅರಣ್ಯಾವಾಸದ ಮತ್ತು ಪರಿಭವದ ಕುದಿಹವೆಲ್ಲ ನೀಗಿ ಆಕೆಯ ಹೃದಯ ಸುಖವಾಸಮನೆಯ್ದಿದುದು. ಪಂಪನ ಭೀಮನೂ ಬಿಚ್ಚಿದ ಮುಡಿಯನ್ನು ಶತ್ರುವಿನ ರಕ್ತತೈಲದಿಂದ ನಾದು, ಅವನ ಹಲ್ಲ ಹಣಿಗೆಯಿಂದ ಆ ಕೂದಲನ್ನು ಬಾಚಿ, ಆ ಒಸಗೆಗೆ 'ಕರುಳ್ಗಳೆ ಪೊಸವಾಸಿಗಮಾಗೆ ಕೃಷ್ಣೆಯಂ ಮುಡಿಯಿಸಿದಂ.' ಅಲ್ಲದೆ

ಆ ಕಟ್ಟಿದ ಶ್ರೀಮುಡಿಗೆ ಚೂಡಾಮಣಿಯಿಡುವಂತೆ, ಅದರ ಅಸಾಮ್ಯತೆ, ಅತಿಶಯತೆ, ಶಕ್ತಿ, ಪವಿತ್ರತೆ ಇವು ಮಿಡಿಯುವಂತೆ. ಮಹಸ್ರಗ್ಧರೆಯ ಮಹರುದ್ರ ವೀಣೆಯ ಭವ್ಯಧ್ವನಿಯೊಂದನ್ನು ಮೀಂಟಿದ್ದಾನೆ:

*ಇದಱಿಂ ಶ್ವೇತಾತಪತ್ರ ಸ್ಥಗಿತ ದಶದಿಶಾಮಂಡಲಂ ರಾಕಚಕ್ರಂ*
*ಪುದಿದಱ್ಕಾಡೊತ್ತಡಂಗಿತ್ತಿದಱಿಂ ಕುರುರಾಜಾನ್ವಯಂ ಮತ್ಪ್ರತಾಪ*
*ಕ್ಕಿದಱಿಂದಂ ನೋಡಗುರ್ವುರ್ವಿದುದಿದುವೆ ಮಹಾಭಾತಕ್ಕಾದಿಯಾಯ್ತು*
*ಬ್ಬದಳಾಕ್ಷೀ ಪೇಟಿ ಸಾಮಾನ್ಯಮೆ ಬಗೆಯೆ ಭವತ್ಕೇಶ ಪಾಶ ಪ್ರಪಂಚಂ.*

ಇದನ್ನು ಆಲಿಸಿದ ಯಾರೆ ಆಗಲಿ ದ್ರೌಪದಿಯ ಶ್ರೀಮುಡಿಯನ್ನು ಬರಿಯ ತುರುಬು ಎಂದು ಹೇಳಲು ಸಾಧ್ಯವೆ? ಅದನ್ನು ಬಣ್ಣಿಸುವ ರೀತಿಯನ್ನು ಕುರಿತು 'ಮೊಳದುದ್ದದ ಮೂಗುತಿ'ಎಂದು ಕವಿವಾಣಿಯನ್ನು ಮೂದಲಿಸಲು ಸಾಧ್ಯವೆ?

---

[1] ಶೈಲಿ-ಶ್ರೀ ಎಸ್.ವಿ.ರಂಗಣ್ಣ.
[2] ಸೋsತಿ ದುಸ್ಸಂಚರೋ ಯೇನ ವಿದಗ್ಧ ಕವಯೋ ಗತಾಃ ಖಡ್ಗಧಾರಾ ಪಥೇನ್ನೈವ ಸುಭಟಾನಾಂ ಮನೋರಥಾಃ-ಕುಂತಕ
[3] ಸುಕುಮಾರಾಭಿಧಸ್ಸೋsಯಂ ಯೇನ ಸತ್ಕವಯೋ ಗತಾಃ ಮಾರ್ಗೇಣೋತ್ಫುಲ್ಲ ಕುಸುಮಕಾನನೇನ್ನೈವ ಷಟ್ಪದಾಃ-ಕುಂತಕ
[4] Free style wrestling
[5] ಕರ್ಣಪರ್ವ-ಸಂಧಿ ೧೯ ಪದ್ಯ ೫ ರಿಂದ ೭೩ರ ವರೆಗೆ

# 'ಯಶೋಧರ ಚರಿತೆ'ಯಲ್ಲಿ ಕಾಮವಿಕಾರ ನಿರೂಪಣೆಯ ಉದ್ದೇಶ

ಭಾರತೀಯ ಕಾವ್ಯಮೀಮಾಂಸೆಯಲ್ಲಿ ನಾಟ್ಯ ಮತ್ತು ಕಾವ್ಯದ ಪರಮ ಪ್ರಯೋಜನ 'ರಸ' ಎಂದು ಸಿದ್ಧಾಂತವಾಗಿದೆ. ಸಾಮಾನ್ಯವಾಗಿ ನಮ್ಮ ಕವಿಗಳೆಲ್ಲರೂ ಗ್ರಂಥದ ಆದಿಯಲ್ಲಿ ತಮ್ಮ ಕಾವ್ಯವನ್ನು ಕುರಿತು ಏನಾದರೂ ನಾಲ್ಕು ಮಾತುಗಳನ್ನು ಹೇಳಿಕೊಂಡಿರುವುದು ಕಾಣಬರುತ್ತದೆ. ಆದರೆ ಯಾರೊಬ್ಬರು ತಮ್ಮ ಕಾವ್ಯದ ಪರಮ ಪ್ರಯೋಜನ 'ರಸ' ಎಂದು ಮಾತ್ರ ಒಡೆದು ಹೇಳಿಲ್ಲ. ಅದಕ್ಕೆ ಬದಲಾಗಿ, ತಮ್ಮ ತಮ್ಮ ಆಧ್ಯಾತ್ಮಿಕ ದೃಷ್ಟಿಗಳಿಗನುಸಾರವಾಗಿ, ತಮ್ಮ ತಮ್ಮ ಮತಧರ್ಮಗಳ

ದೃಷ್ಟಿಗನುಸಾರವಾಗಿ, ಬದುಕಿನ ಪರಮ ಪ್ರಯೋಜನವಾಗುವುದೋ ಅದನ್ನೇ ಕಾವ್ಯಪ್ರಯೋಜನ ಎಂಬ ಅರ್ಥ ಬರುವಂತೆ ಹೇಳಿದ್ದಾರೆ. 'ಕಲೆಗಾಗಿ ಕಲೆ', 'ರಸಕ್ಕಾಗಿ ರಸ' ಎನ್ನುವಂತಹ ಮಾತು ಯಾರೊಬ್ಬರಲ್ಲಿಯೂ ಬಂದಿಲ್ಲ.

ಜನ್ನ ಕವಿ ತನ್ನ 'ಯಶೋಧರ ಚರಿತೆ'ಯ ಆದಿಭಾಗದಲ್ಲಿ ತನ್ನ ಕಾವ್ಯದ ಉದ್ದೇಶವನ್ನು ಕುರಿತು ಹೀಗೆ ಹೇಳಿಕೊಂಡಿದ್ದಾನೆ:

*ಶ್ರಾವಕಜನದುಪವಾಸಂ*
*ಜೀವದಯಾಷ್ಟಮಿಯೊಳಾಗೆ ಪಾರಣೆ ಕಿವಿಗ*
*ಳ್ಗೀ ವಸ್ತು ಕಥನದಿಂದು*
*ದ್ಭಾವಿಸೆ ಕವಿಭಾಳಲೋಚನಂ ವಿರಚಿಸಿದಂ*

ಯಾವುದೊ ಒಂದು ಧಾರ್ಮಿಕ ದಿನದಂದು ಕೈಕೊಳ್ಳುವ ವ್ರತದ ಅಂಗವಾಗಿ ನಡೆಸುವ ಪಾರಣೆಯ ವಸ್ತು ಈ ಕಾವ್ಯ; ಇದೊಂದು ಪರಮ ಪುರುಷಾರ್ಥ ಸಾಧನೆಯ ಆಧ್ಯಾತ್ಮಿಕ ಪ್ರಯೋಜನವುಳ್ಳದ್ದು ಎಂಬುದು ಅವನ ಸೂಚನೆ. ಒಟ್ಟಿನಲ್ಲಿ ಇದೇ ಮುಖ್ಯವಾಗಿ ಅವನ ದೃಷ್ಟಿ. ಆದರೆ ಮುಂದೆ, 'ರಸಾನ್ವಿತಮಾಗಿರೆ ಕಥೆ ಬುಧಸಂತತಿಗಕ್ಷಯ ಸುಖ ಮನೀವುದೊಂದಚ್ಚರಿಯೇ' ಎನ್ನುವಲ್ಲಿ ಆತ 'ಕಥೆ ರಸಾನ್ವಿತವಾಗಿರಬೇಕು'ಎಂಬುದನ್ನು ಒಪ್ಪಿಕೊಂಡಿದ್ದರೂ 'ರಸವೇ ಪರಮ ಪ್ರಯೋಜನ' ಎಂದು ಮಾತ್ರ ಹೇಳಿಲ್ಲ. ಎಂದರೆ ಈ ದೃಷ್ಟಿಯಲ್ಲಿ, 'ಕಲೆಯೆಲ್ಲ ಬದುಕಿನ ಒಂದು ಅಂಗ; ಬದುಕು ಕಲೆಗಿಂತ ದೊಡ್ಡದು; ಬದುಕು ಸಾಧಿಸಬೇಕಾದ ಪರಮ ಗುರಿಯೊಂದಿದೆ.' ಆ ಗುರಿಯನ್ನು ಸಾಧಿಸಲು ಕಲೆ ಒಂದು ಮಾರ್ಗ; ವಿಶಾಲವಾದ ಜನಪ್ರಿಯವಾದ ರಾಜಮಾರ್ಗ. ನಮ್ಮವರು ಸರಸ್ವತಿಯನ್ನು 'ಮೋಕ್ಷವೇ,' 'ಮೋಕ್ಷಮಾರ್ಗೇ'ಎಂಬುದಾಗಿ ಸಂಬೋಧಿಸಿರುವುದನ್ನು ಇಲ್ಲಿ ಗಮನಿಸಬಹುದು. ಜನ್ನನೇ ಹೇಳುವ 'ಪೊರೆಯೇಱುವುದಮಳದೃಷ್ಟಿಕುವಳಯವನಮಾಚರಿಪ ಜನಕ್ಕೆ.... ಕಥಾಶ್ರವಣಮೆಂಬ ಚಂದ್ರೋದಯದೊಳ್' ಎಂಬ ಮಾತು ಈ ದೃಷ್ಟಿಯನ್ನು ಸ್ಪಷ್ಟಪಡಿಸುತ್ತದೆ.

ಈ ಯಶೋಧರ ಚರಿತೆಯ'ಸತ್ಕಥೆ'ಗೆ ಪೀಠಿಕಾಪ್ರಾಯವಾಗಿ ಆರಂಭದಲ್ಲಿ ಒಂದು ಕಥನವೇದಿಕೆ ಸಿದ್ಧವಾಗುತ್ತದೆ. ಈ ಕಥೆಯಲ್ಲಿ ಯಾರು ಪಾತ್ರಧಾರಿಗಳೋ ಅವರಿಂದಲೇ ಕಥೆಯನ್ನು ಹೇಳಿಸುವ ಪ್ರಸಂಗವನ್ನು-ಭವ್ಯ ಪ್ರಸಂಗವನ್ನು-ಕವಿ ಮುಂದೊಡ್ಡಿದ್ದಾನೆ:

*ತಾಳುಗೆಯನುರ್ಚಿ ನೆತ್ತಿಯ*
*ಗಾಳಂ ಗಗದೊಳೆಱಿಲ್ವ ವಾರಿಯ ಬೀರರ್*
*ಪಾಳಿಯೊಳೆಸೆದರ್ ಪಾಪದ*
*ಜೋಳದ ಬೆಳಸಿಂಗೆ ಬೆಚುಗಟ್ಟಿದ ತೆರದಿಂ*

*ಆಡು ಕುಱಿ ಕೋೞಿ ಕೋಣನ*
*ಕೂಡಿದ ಪಿಂಡೊಳಱಿ ಪೆಳಱಿ ಮಾರ್ದನಿಯಿಂದಂ*
*ಕೂಡ ಬನಮೞ್ತುದುರ್ವರೆ*
*ಬೀಡೆಯಿನೆರ್ದಯೊಡೆದುವಱ ಕೋಟಲೆಗಾಗಳ್*

*ದೆಸೆದೆಸೆಗೆ ನರಶಿರಂ ತೆ*
*ತ್ತಿಸೆ ಮೆಱೆದುವು ಮದಿಲೊಳಬ್ಬೆ ಪೇರಡಗಿನ ಪೆ*
*ರ್ಚಿಸನದೆ ಪೋಱಗಣ ಜೀವ*
*ಪ್ರಸರಮುಮಂ ಪಲವು ಮುಖದಿನವಳೋಕಿಪವೊಲ್*

ಇಂತಹ ಭಯಂಕರ ಸನ್ನಿವೇಶವೊಂದನ್ನು ಸೃಷ್ಟಿಸಿ, 'ಭೈರವನ ಜವನ ಮಾರಿಯ ಮೂರಿಯವೊಲ್ ನಿಂದ' ಮಾರಿದತ್ತ ರಾಜ ಚಿತ್ರವನ್ನು ಕೊಟ್ಟು, ಅ ಸನ್ನಿವೇಶದಲ್ಲಿ ಸ್ವಲ್ಪವೂ ವಿಚಲಿತರಾಗದೆ ಸ್ಥೈರ್ಯದಿಂದ ಶಾಂತಿಯನ್ನು ಬೋಧಿಸುವ ಮಕ್ಕಳಿರ್ವರ ಭವ್ಯನೋಟವನ್ನು ಆರಂಭದಲ್ಲಿಯೆ ಕೊಟ್ಟಿದ್ದಾನೆ. ಆಗ 'ಧನಮಂ ಕಂಡ ದರಿದ್ರನ ಮನದವೊಲೆಱಗಿದುವು ಪರಿಜನಂಗಳ ನೊಸಲ್', 'ಭಲರೆ ನೃಪೇಂದ್ರಾ ದಯೆಯೊಳ್ ನೆಲೆಗೊಳಿಸಿದೆ ಮನಮನ್', 'ನೀನ್ ಕೇಳ್ವುದು ಸತ್ಫಲಮಾಯ್ತು' ಎನುವಲ್ಲಿ, ಈ ಕಥನ 'ಸತ್ಕಥನ' ಎನುವಲ್ಲಿ ನಿಜವಾದ ಕಾವ್ಯದ ಉದ್ದೇಶ ವ್ಯಕ್ತವಾಗಿದೆ. ಮಾರಿದತ್ತಂ ಕಲಿಯಂ ಮೂದಲಿಸಿದಂತೆ ದೇವನೆ ಆದಂ' ಎಂದು ಹೇಳುವ ಮಾತಾದರೂ ಮೇಲಿನ ದೃಷ್ಟಿಯನ್ನೆ ಧ್ವನಿಸುತ್ತದೆ.

ಎಲ್ಲರೂ ಕೃತಿ ರಸಾನ್ವಿತವಾಗಿರಬೇಕೆಂಬುದನ್ನು ಒಪ್ಪಿಕೊಂಡು ಕೃತಿಯ ಪರಮ ಪ್ರಯೋಜನ ಧರ್ಮಾರ್ಥಕಾಮಮೋಕ್ಷಗಳಾದ ಪುರುಷಾರ್ಥಗಳು ಮತ್ತು ಪರಮಪುರುಷಾರ್ಥ ಎಂದು ಹೇಳುತ್ತಾರೆ. ಕಾವ್ಯಪ್ರಯೋಜನ ಆಧ್ಯಾತ್ಮಿಕವಾದುದು, ಮೋಕ್ಷದಾಯಕವಾದುದು ಎನ್ನುವ ಉದ್ದೇಶದಲ್ಲಿಯೇ ಅದು ರಸಾತ್ಮಕವಾದುದೆಂಬುದರ ಸೂಚನೆಯೂ ಇದೆ. ಕಾರಣ, ಲೌಕಿಕವಾದ ಭಾವರಸವಾಗಿ ಪರಿವರ್ತಿತವಾಗಲು ನಿಸ್ಸಂಗತೆ ಅಥವಾ ಸಂಗದೂರತ್ವ ಅವಶ್ಯಕ. ಎಲ್ಲ ರಸಾನುಭವದ ಪರ್ಯವಸನ ಶಾಂತದಲ್ಲಿಯೆ. ಇದನ್ನೆ ಜನ್ನನಾದರೂ ಪೀಠಿಕೆಯಲ್ಲಿ ಪ್ರತಿಪಾದಿಸಿರುವುದು.

ಈ ಕಾವ್ಯದ ಸನ್ನಿವೇಶಗಳನ್ನಾಗಲಿ ಅಥವಾ ಪಾತ್ರಗಳನ್ನಾಗಲಿ ಸಮಾಲೋಚಿಸುವಾಗ ನಾವು ಕವಿಯ ದೃಷ್ಟಿಯನ್ನು ಅನುಸರಿಸಿಯೆ ಹೊರಡುವುದು ಅತ್ಯಗತ್ಯ. ಏಕೆಂದರೆ 'ಅಪಾರೇ ಕಾವ್ಯಸಂಸಾರೇ ಕವರೇವ ಪ್ರಜಾಪತಿಃ'; ಕವಿ ಕಾವ್ಯದ ಬ್ರಹ್ಮ. ಅವನ ಕೃತಿಯಲ್ಲಿ ಅವನ ದರ್ಶನ ಪ್ರತಿಧ್ವನಿತವಾಗಿರುವುದೆ ಇಲ್ಲವೆ ಎಂಬುದನ್ನು ಮಾತ್ರ ನಾವು ಸಮಾಲೋಚಿಸಬಹುದು.

'ಯಶೋಧರ ಚರಿತೆ'ಯ ಒಂದು ಪ್ರಸಂಗದತ್ತ ವಿಮರ್ಶಕರನೇಕರ ದೃಷ್ಟಿ ಬಿದ್ದಿದೆ. ಯಶೋಧರ ಅಮೃತಮತಿಯರ ದಾಂಪತ್ಯಜೀವನದ ನಡುವೆ ಬಂದ ಒಂದು ಅಪಪ್ರಸಂಗ ಅದು: ಅಮೃತಮತಿ ಕಾಲುಜಾರಿ ಬೀಳುವ ವಿಚಿತ್ರ ಪ್ರಸಂಗ. ಹೀಗೆ ಕಾಲುಜಾರಿ ಬೀಳುವ ಒಂದು ವ್ಯಕ್ತಿಯ ಬಗೆಗೆ ಸಹಾನುಭೂತಿ ತೋರಿಸುವುದು ಮನುಷ್ಯನ ಲಕ್ಷಣ. ಪಾಶ್ಚಾತ್ಯ ವಿಮರ್ಶ ವಿಧಾನವನ್ನು ಅಭ್ಯಾಸಮಾಡಿರುವ ಈಚಿನ ವಿಮರ್ಶಕರಲ್ಲಿ ಓದುಗರಲ್ಲಿ ಪತಿತ ಪಾತ್ರ ವಿಚಾರದಲ್ಲಿ ಸಹಾನುಭೂತಿ ಅನುಕಂಪಗಳನ್ನು ತೋರಿಸುವ ದೃಷ್ಟಿ ಮನೋಭಾವಗಳು ಬೆಳೆದುಬಂದಿವೆ. ವಿಧಿಯ ವಜ್ರನಿಯತಿಯನ್ನು ಕುರಿತು ಭಯಮಿಶ್ರಿತವಾದ ಗೌರವವುಂಟಾಗುವುದೂ ಪತಿತಪಾತ್ರದಲ್ಲಿ ಮರುಕ ಹುಟ್ಟುವುದೂ ಈ ದೃಷ್ಟಿಗೆ ಸಹಜ. ಷೇಕ್ಸ್‌ಪಿಯರ್ ಕವಿಯ ಹ್ಯಾಮ್ಲೆಟ್, ಮ್ಯಾಕ್‌ಬೆತ್ ಮೊದಲಾದ ಪಾತ್ರಗಳಲ್ಲಿ ಇಂತಹ ದೃಷ್ಟಿಯಿಂದ ನಾವು ರಸಾನಂದವನ್ನು ಪಡೆಯುತ್ತೇವೆ. ಆದರೆ ಪತಿತ ಪಾತ್ರಗಳಿಗೆಲ್ಲ ಒಂದೇ ಸಮನಾಗಿ ಅನುಕಂಪ ತೋರಿಸುವುದು ಸಾಧ್ಯವೆ, ಯುಕ್ತವೆ ಎಂದು ವಿಚಾರಮಾಡುವುದು ಅಗತ್ಯ. ಕಾಲುಜಾರಿ ಕುಸಿಯುವ ವ್ಯಕ್ತಿ 'ಮಹಾನುಭಾವ' ಲಕ್ಷಣಗಳನ್ನು ಹೊಂದಿದವನಾಗಿದ್ದು, ತನ್ನಲ್ಲಿರುವ ಯಾವುದೋ ಒಂದು ಕುಂದಿನಿಂದ ಅಥವಾ ವಿಧಿಯ ವಜ್ರನಿಯತಿಗೆ ಅನಿವಾರ್ಯವಾಗಿ ಅಹುತಿಯಾಗಿ ದುರಂತತೆಯನ್ನು ಪಡೆದರೆ ಆತನಿಗೆ ನಾವು

ಅನುಕಂಪ ತೋರಿಸಬಹುದು. ಆದರೆ ತಾನೇ ಇಚ್ಛಿಸಿ ಅಧಃಪತನಕ್ಕೆ ಇಳಿಯುತ್ತಿರುವಾಗ, ತನ್ನ ಅಧಃಪತನವನ್ನು ಅರಿತಿದ್ದೂ ಅದನ್ನು ತಡೆಯಲು ಪ್ರಯತ್ನಿಸದೆ ಅತ್ತಲೇ ರುಚಿವೇಗದಿಂದ ಸಂತೋಷದಿಂದ ಜಾರುತ್ತಿರುವಾಗ ನಾವು ಅನುಕಂಪ ತೋರಿಸಲಾದೀತೆ? ತೋರಿಸುವುದು ಯುಕ್ತವೆ? ಯುದ್ಧರಂಗದಲ್ಲಿ ಭೀಮನ ಗದಾಪ್ರಹಾರಕ್ಕೆ ಗುರಿಯಾಗಿ ಮೂರ್ಛಿತನಾಗಿ ಬಿದ್ದಿರುವ ವೀರನೂ ಶೂರನೂ ಆದ ದುರ್ಯೋಧನನ್ನು ಕಂಡು ನಾವು ಅನುಕಂಪೆ ತೋರಿಸಬಹುದು. ಆದರೆ ಮಹಾಭಾರತದ ಬುಡದಿಂದ ಕೊನೆಯವರೆಗೆ ಬಗೆಬಗೆಯ ಮಜಲುಗಳಲ್ಲಿ ಬರುವ ದುರ್ಯೋಧನನ ಸಮಗ್ರಪಾತ್ರವನ್ನು ಕುರಿತಾಗ ನಾವು ಅನುಕಂಪೆ ತೋರಿಸಿದರೆ ಅದು ಅನುಕಂಪೆಯಲ್ಲ, ಒಂದು ತೆರನಾದ ಹೃದಯದೌರ್ಬಲ್ಯವಾಗುತ್ತದೆ. ಹೀಗೆ ಇಂತಹ ಪಾತ್ರಗಳ ವಿಚಾರದಲ್ಲಿ ಅಪಾತ್ರದಲ್ಲಿ ಆಸ್ಥಾನದಲ್ಲಿ ತೋರಿಸುವ ಅನುಕಂಪ 'ಬಾಲಿಶಾನುಕಂಪೆ'. ಈ 'ಬಾಲಿಶಾನುಕಂಪೆ' ಜೀವನದಲ್ಲೆಂತೋ ಅಂತೆಯೆ ಸಾಹಿತ್ಯದಲ್ಲಿಯಾದರೂ ನಮ್ಮ ಉದ್ಧಾರಮಾರ್ಗಕ್ಕೆ ಒಂದು ಕಂಟಕವಾಗುತ್ತದೆ.

ಈಗ ಅಮೃತಮತಿ ಮತ್ತು ಯಶೋಧರರಿಗೆ ಸಂಬಂಧಿಸಿದ ಕಾಲುಜಾರುವ ಪ್ರಸಂಗವನ್ನು ವಿವೇಚಿಸಬಹುದು. ಇದಕ್ಕೆ ಮೊದಲು ನಾವು ಈ ಪ್ರಸಂಗ ಒಟ್ಟಿನ ಕಥೆಯಲ್ಲಿ ಗೌಣವೂ ಪ್ರಾಸಂಗಿಕವೂ ಆಗಿರುವುದೆಂಬುದನ್ನು ಗಮನಿಸಬೇಕಾದುದು ಅಗತ್ಯ. ಯಶೋಧರ ಮತತು ಅಮೃತಮತಿ-ಈ ಎರಡು ವ್ಯಕ್ತಿಗಳ ಚೇತನಗಳಲ್ಲಿ ಒಂದು ಊರ್ಧ್ವಗಾಮಿ,ಇನ್ನೊಂದು ಅಧೋಗಾಮಿ. ಕವಿಯ ವಿಶೇಷವಾದ ಪ್ರಜ್ಞೆ ಊರ್ಧ್ವಗಾಮಿಯಾದ ಚೇತನದ ಕಡೆಗೆ, ಆ ಚೇತನದ ಪುಷ್ಟಿಗಾಗಿ ಪೋಷಣೆಗಾಗಿ ಮಾತ್ರ ಕವಿ ಮತ್ತೊಂದು ಚೇತನದ ಕಥೆಯನ್ನೂ ಕೊಡುತ್ತಾನೆ. ಇದನ್ನು ಒಂದು ಪ್ರಣಯಕಥೆ ಎಂದು ಕರೆದರೆ ಅದು ಕಾವ್ಯದ ದೃಷ್ಟಿಯಿಂದ ಸತ್ಯವಾಗುವುದಿಲ್ಲ. ಅಮೃತಮತಿ ಕಾಲುಜಾರಿ ಬೀಳುವುದನ್ನು 'ಹೃದಯ ದೌರ್ಬಲ್ಯ'ವೆಂದು ಹೆಸರಿಸುವುದೂ ತಪ್ಪಾಗುತ್ತದೆ. ಏಕೆಂದರೆ ಅದು ದೌರ್ಬಲ್ಯರೂಪವಲ್ಲ. ರೋಗರೂಪ: ವಿಕಾರರೂಪ. 'ದೌರ್ಬಲ್ಯ' ಎನ್ನುವುದಾದರೆ 'ಬಲ' ಎಂಬುದೊಂದಿರಬೇಕಲ್ಲ! ವಾಸ್ತವಜೀವನದಲ್ಲಿ ಇಂತಹದು ಅಸಂಭವನೀಯವಾದ ಅಥವಾ ಅತ್ಯಂತ ಅಪೂರ್ವವಾದ ಪ್ರಸಂಗ 'ವೈಪರೀತ್ಯ ಮನಶ್ಯಾಸ್ತ್ರ'ದಲ್ಲಿ ಇಂತಹ ಅತಿ ವಿರಳವಾದ ಘಟನೆಗಳನ್ನು ನಾವು ಕಾಣಬಹುದೇನೋ! ಆದರೆ ಅದೊಂದು ಮಾನಸಿಕ ಜಾಟಿಲ್ಯ. ಅಂತಹ ಅತಿವಿರಳ ಅಸಂಭವನೀಯ ಅಪೂರ್ವ ವಿಕಾರವೊಂದನ್ನು ಧರ್ಮವೇದಿಕೆಯ ಮೇಲಕ್ಕೆಳೆದು ತಂದು ಅದರ ಧರ್ಮಾಧರ್ಮಗಳನ್ನು ತೂಗಲೆಳಸುವುದು ತರ್ಕಬಾಹಿರ.

ಯಶೋಧರ ಅಮೃತಮತಿಯನ್ನು

[1] ಮದುವೆಯಾಗುತ್ತಾನೆ. ಆದರೆ ಅದಕ್ಕೆ ಹಿಂದಿನ ಯಾವ ಒಂದು ಘಟಯನ್ನಾದರೂ ಕವಿ ವರ್ಣಿಸಿಲ್ಲ. ಯಶೋಧರನ ರೂಪವೋ:
*ನೋಡುವ ಕಣ್ಗಳ ಸಿರಿ, ಮಾ*
*ತಾಡುವ ಬಾಯ್ಗಳ ರಸಾಯಣಂ, ಸಂತಸದಿಂ*
*ಕೂಡುವ ತೋಳ್ಗಳ ಪುಣ್ಯಂ*
*ನಾಡಾಡಿಯೆ ರೂಪು ಕುವರ ವಿದ್ಯಾಧರನಾ?*

ಇನ್ನು ಅಮೃತಮತಿಯೋ 'ಗಡ ಯಶೋಧರನ ಮನಃಪ್ರಿಯೆ' ಕವಿ ಹೇಳುವ ಈ ಮಾತುಗಳಿಂದಲೇ ನಾವು ಅವರ ದಾಂಪತ್ಯವನ್ನು ಚಿತ್ರಿಸಿಕೊಳ್ಳುವುದಾದರೆ ಅದೊಂದು ಆದರ್ಶ ದಾಂಪತ್ಯ. ಇಬ್ಬರೂ ಸ್ಫುರದ್ರೂಪಿಗಳು. ಅಲ್ಲಿ ಯಾವ ಬಗೆಯ ಊನಕ್ಕೂ ಆದರ್ಶ ದಾಂಪತ್ಯ. ಇಬ್ಬರೂ ಸ್ಫುರದ್ರೂಪಿಗಳು.

ಅಲ್ಲಿ ಯಾವ ಬಗೆಯ ಊನಕ್ಕೂ ಎಡೆಯಿಲ್ಲ. ಅವರ ನಡುವೆ ಯಾವ ಬಗೆಯ ವಿರಸವುಂಟಾಗುವುದೂ ದುಸ್ಸಾಧ್ಯವೆಂಬಂತೆ ಚಿತ್ರಿತವಾಗಿದೆ. ಹೀಗಿರುವಾಗ ಅಮೃತಮತಿ ಜಾರಬಹುದಾದ ಸೂಚನೆಯಾದರೂ ಎಲ್ಲಿ? ಆದರೂ ಆಕೆ ಜಾರಿದಳು. ಜಾರಲು ಕಾರಣ, ಆಕೆ ನೆಟ್ಟಿರುಳಿನಲ್ಲಿ ಕೇಳಿದ ನುಣ್ದನಿಯೆ? ನಿಜವಾಗಿ ಅದು ಕಾರಣವಲ್ಲ; ಅದೊಂದು ನೆವ, ನೆವಮಾತ್ರ. ಸೋಮದೇವ ಸೂರಿಯ 'ಯಶಸ್ತಿಲಕ ಚಂಪು'ವಿನಲ್ಲಿ ಅಮೃತಮತಿಗೆ ಗಂಡನನ್ನು ಕುರಿತು ಪ್ರೀತಿಯೆ ಇರಲಿಲ್ಲವೆಂಬ ಮಾತಾದರೂ ಬರುತ್ತದೆ. ಆದರೆ ಜನ್ನನ 'ಯಶೋಧರ ಚರಿತೆ'ಯಲ್ಲಿ ಆ ಬಗೆಯ ಒಂದೂ ಸೂಚನೆ ಕೂಡ ಇಲ್ಲವಾಗಿದೆ, ಘಟನೆ ಸಂಭವಿಸುವ ಮುನ್ನ.

*ಅವನಿಪನೊರ್ಮೆ ಸಭಾಮಣಿ*
*ಭವನದಿನಂಬರತರಂಗಿಣೀ ಪುಳಿನಮನೆ*
*ಱುವ ಹಂಸನಂತೆ ಶಯ್ಯಾ*
*ಧವಳ ಪ್ರಾಸಾದತಳಮನೇಱಿದನ್...*

*ಪರಿಮಳದ ತೂಂಬನೆತ್ತಿದ*
*ನರಲಂಬಂ ಜನಮನೋವನಕ್ಕೆನೆ ಕಾಳಾ*
*ಗರುಧೂಮಲತಿಕೆ ಜಾಲಾಂ*
*ದರದಿಂದೊಗೆದುದು ಕಪೋತಪಕ್ಷಚ್ಛುರಿತಂ*

*ಎಳದುಂಬಿ ಸುಳಿದು ಸುಟ್ಟುರೆ*
*ಗೊಳಿಸುವ ಕತ್ತುರಿಯ ಕಪ್ಪುರಂಗಳ ರಜಮುಚ್ಚಳಿಸಿದುವು ನೀಲ ಮುತ್ತಿನ*
*ಬೆಳಗಿನ ಕುಡಿ ರಾಗರಸದಿನಂಕುರಿಸುವವೋಲ್*

*ಇಂತಹ ಒಂದು ಭೋಗನಿವಾಸದಲ್ಲಿ,*

*ಸುರಚಾಪಚ್ಛವಿ ಸುತ್ತಿದ*
*ಶರದಭ್ರದೊಳೆಸೆವ ಖಚರದಂಪತಿಗಳವೋಲ್*

ಅವರಿಬ್ಬರು ಎಸೆಯುತ್ತಿದ್ದಾರೆ. ಇರ್ವರೂ ಭೋಗಸಾಮ್ರಾಜ್ಯದ ಚಕ್ರವರ್ತಿ ದಂಪತಿಗಳು; ಮನಃಪ್ರಿಯರು. ಅವರಿಬ್ಬರಲ್ಲಿ ಯಾರೋಬ್ಬರಿಗೂ ಭೋಗಕ್ಕಾಗಲಿ ಸುಖಕ್ಕಾಗಲಿ ಒಲವಿಗಾಗಲಿ ಕೊರತೆಯಿಲ್ಲ. ಮುಂದೆ ನಡೆಯಲಿರುವ ಘಟನೆಗೆ ಪೂರ್ವಭಾವಿಯಾಗಿ ಯಾವ ಸೂಚನೆಯಾಗಲಿ ಕಾರಣವಾಗಲಿ ಇಲ್ಲಿ ಕಾಣಿಸದು. ಆ ಘಟನೆ ನಡೆಯದೆ ಇದ್ದುದಾಗಿದ್ದರೇ ಸಹಜವಾಗಿರುತ್ತಿತ್ತು ಎನ್ನುವಂತಹ ಸನ್ನಿವೇಶ. ಆ ಘಟನೆ ನಡೆದುದು ಒಂದು ವಿಸ್ಮಯ; ಪವಾಡ! ಇಳಿಜಾರಿನಲ್ಲಿ ಜಾರಿದಂತೆ ಕೂಡ ಅಲ್ಲ, ಪ್ರಪಾತಕ್ಕೆ ಕಾಲುತಪ್ಪಿ ಉರುಳಿದಂತೆ!

ಅವರಿಬ್ಬರೂ ಹೀಗೆ 'ಮನೋಜನಾಡಿಸುವ ಜಂತ್ರ'ದಂತೆ ನೆರೆದಿದ್ದಾರೆ. ದೈಹಿಕವಾಗಿಯೂ ಪ್ರಣಯಸುಖದ ಪರಾಕಾಷ್ಠೆಯನ್ನು ಸವಿದು ತಣಿದು ದಣಿದರೆಂದು ಜನ್ನ ಚಿತ್ರಿಸುತ್ತಾನೆ**[2]**

*ಹೃದಯಪ್ರಿಯರಂತೊಱಗಿದ*
*ಪದದೊಳ್ ಗರಟೆಗೆಯ ಜವದುಕ್ಕಡದುಲಿ ಮ*

*ಟ್ಟಿದ ಪೊತ್ತು ಸೂಟಿ್ಗೆ ಕರುಮಾ*
*ಡದ ಪಕ್ಕದೊಳಿರ್ದ ಪಟ್ಟದಾನೆಯ ಬದಗಂ*

*ಬಿನದಕೆ ಪಾಡುತ್ತಿರೆ ನು*
*ಣ್ಪುನಿ ನಿದ್ರೆಗೆ ಕತಕಬೀಜಮಾಯ್ತನೆ ಮೃಗಲೋ*
*ಚನೆ ತಿಳಿದಾಲಿಸಿ ಮುಟ್ಟಿದ*
*ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್*

ಇದೇ ವಿಸ್ಮಯ; ಪವಾಡ! ಏಕೆ ‘ತೊಟ್ಟನೆ ಪಸಾಯದಾನಂಗೊಟ್ಟಳ್?’ ಎಂದು ಕೇಳಿದರೆ ಉತ್ತರ ಹೇಳುವಂತಿಲ್ಲ. ಅದಕ್ಕೊಂದು ಕಾರ್ಯಕಾರಣ ಸಂಬಂಧ ಕಾಣಿಸದು. ‘ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್’-ಅಷ್ಟೇ ಅಲ್ಲ.

*ಅಂತೆಸೆಯೆ ಪಾಡುತಿರೆ ತ*
*ದ್ದಂತಿಪನತಿನೂತ್ನಗೀತ ಪಾತನವಿಕಲ*
*ಸ್ವಾಂತೆಗೆ ನೋಡುವ ಕೂಡುವ*
*ಚಿಂತೆ ಕಡಲ್ವರಿದುದಂದು ಬೆಳಗಪ್ಪಿನೆಗಂ*

ಕಡಿದಾದ ಜಾಗದಲ್ಲಿ ನಡೆದ ಜಾರಿಕೆಯಲ್ಲ ಇದು. ವಿಷಬಿಂದುವಿನ ಪ್ರವೇಶಕ್ಕೂ ಎಡೆಯಿಲ್ಲದ ಅಮೃತಸಮಾನವಾದ ದಾಂಪತ್ಯಸುಖದ ನಡುವೆ ಹೇಗೋ ನಡೆಯಿತು ಈ ಪವಾಡ, ಈ ವಿಸ್ಮಯ, ಈ ವಿಧಿವಿಳಸನ! ಅತ್ಯಂತ ದೈಹಿಕ ತೃಷಾರೂಪವಾದ ಕಾಮಾಗ್ನಿಗೂ ಅಸಹಜವಾದ ಪ್ರಸಂಗ ಇದು. ದಾಂಪತ್ಯದಲ್ಲಿ ವಿರಸವೆ? ಇಲ್ಲ. ಒಲಿದ ಜೀವಗಳ ಅನಿವಾರ್ಯ ವಿರಹ ಸನ್ನಿವೇಶವೆ? ಅಲ್ಲ. ಇದು ತಿರ್ಯಕ್ ಸಹಜವಾದುದು ಸಹ ಅಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಇದು ಅತ್ಯಂತ ವಿಪರೀತವಾದ ಒಂದು ಮನೋವಿಕಾರ. ಇಂತಹ ವಿಕಾರಪರವೃತ್ತಿಗಳಲ್ಲಿ ಯಾವುದು ನಡೆದೀತು ಯಾವುದು ನಡೆಯಲಾರದು ಎಂದು ಹೇಳುವುದೇ ಕಷ್ಟ. ಜೈನದರ್ಶನಕ್ಕೆ ಸಹಜವಾದ ಪೂರ್ವಜನ್ಮದ ಕಾರಣವೊಂದನ್ನಾದರೂ ಕವಿ ಇದಕ್ಕೆ ಒದಗಿಸಬಹುದಾಗಿದ್ದಿತು. ಆದರೆ ಅಮೃತಮತಿಯ ಈ ರೂಪವಾದ ಹೃದಯವಿಶ್ಲೇಷಣ ವಿಚಾರದಲ್ಲಿ ಕವಿ ಸ್ವಲ್ಪವೂ ಆಸಕ್ತನಾಗಿಲ್ಲ. ಆ ಪಾತ್ರದ ಬಗೆಗೆ ಕವಿ ಹೇಳುವ ಎರಡು ಮಾತುಗಳಾದರೂ ಯಶೋಧರನ ಪಾತ್ರ ಪರಿಪುಷ್ಟಿಗಾಗಿಯೆ; ಒಂದು ಊರ್ಧ್ವ ಗಮನಶೀಲವಾದ ಚೇತನದ ಉದ್ಧಾರಮಾರ್ಗವನ್ನು ಚಿತ್ರಿಸುವ ಸಂದರ್ಭ ಕಾರಣಕ್ಕಾಗಿಯೆ.

ಈ ಘಟನೆಯ ಅನಂತರ ಮುಂದೆ ನಡೆಯುವ ಒಂದೊಂದು ಘಟನೆಯೂ ಅಸಂಭವನೀಯವಾಗಿದೆ; ವಿಸ್ಮಯಕಾರಕವಾಗಿದೆ. ‘ಪ್ರಣಯನಿರೂಪಣೆ’ಯಂತೂ ಕವಿಯ ಇಚ್ಚೆ ಅಲ್ಲವೇ ಅಲ್ಲ. ‘ಕಾಮವಿಕಾರ ನಿರೂಪಣೆ’ಎಂದರೂ ‘ಕಾಮವಿಕಾರ ನಿರೂಪಣೆಗಾಗಿಯೆ’ ನಿರೂಪಣೆಯಲ್ಲ. ‘ದುರ್ಘಟನೆಗಳಿಂದ ತಪ್ಪಿಸಿಕೊಳ್ಳುವುದು ಮನುಷ್ಯ ಪ್ರಯತ್ನದಿಂದ ಸಾಧ್ಯವಿಲ್ಲ. ವಿಧಿ ಮುನಿದರೆ ಏನೂ ಆಗದು. ಈ ಸಂಸಾರ ನಿಸ್ಸಾರ; ವೈರಾಗ್ಯವೇ ಜೀವನದ ಪರಮ ಮಾರ್ಗ’ ಎಂಬುದನ್ನು ಹೆಜ್ಜೆ ಹೆಜ್ಜೆಗೂ ಒತ್ತಿ ಹೇಳುವದೆ ಕವಿಯ ಉದ್ದೇಶ.

‘ಕೂಡುವ ಚಿಂತೆ ಕಡಲ್ವರಿದುದು’, ದಿಟ-ಆದರೆ ಆ ಅಷ್ಟಾವಂಕನಿಗಿಂತ ಹೆಚ್ಚಿನ ಸಹ್ಯವಾದ ವ್ಯಕ್ತಿಯನ್ನಾದರೂ ಕೂಡಬಹುದಿತ್ತಲ್ಲ. ಅವನ ರೂಪೋ, ಅಮೃತಮತಿಯ ದಾಸಿಗೂ ಭಯಂಕರವಾಗಿ ತೋರುತ್ತದೆ.

*ಅಮೃತಮತಿಯೆತ್ತ ರೂಪಾ*
*ಧಮನಷ್ಟಾವಂನೆತ್ತ ಚಿತ್ರಮಪಾತ್ರೇ*
*ರಮತೇ ನಾರೀ ಎಂಬುದು*
*ಸಮನಿಸಿದುದು ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ*

ಎಂದು ಆಕೆ ಕೂಡ ನೊಂದುಕೊಳ್ಳುತ್ತಾಳೆ.

'ಚಿತ್ರಂ! ಅಪಾತ್ರೇ ರಮೇ ನಾರೀ!' - ಕವಿಗೆ ಮುಖ್ಯವಾಗಿ ಇದನ್ನು ಹೇಳಬೇಕಾಗಿದೆ. ಜೀವನದಲ್ಲಿ ಯಾವುದು ಭೋಗದ ತವರೋ, ಯಾವುದನ್ನು ಸುಖವೆಂದೂ ಸ್ವಾರಸ್ಯವೆಂದೂ ನಾವು ಕೊಂಡಾಡುತ್ತೇವೆಯೋ ಅದೇ ಇಷ್ಟು ಅಸಹ್ಯ ಎಂಬುದನ್ನು ತೋರಿಸಿ, ಯಶೋಧರನ ವೈರಾಗ್ಯಕ್ಕೆ ಅಣಿಮಾಡಿ ಕೊಡುವುದು, ಸಹೃದಯಹೃದಯದಲ್ಲಿ ವೈರಾಗ್ಯಭಾವವನ್ನು ಹುಟ್ಟಿಸುವುದು ಕವಿಯ ಏಕಮಾತ್ರ ಆಶಯ.

ಆ ದೂದಿ

*...ಬಂದು ವಿಷಣ್ಣಾ*
*ನನೆಯಂ ಮಾರ್ಗಾವಲಗ್ನನೆತ್ರಯನುಚ್ಛ್ವಾ*
*ಸ ನಿತಪ್ರಾಧರರುಚಿಯಂ*
*ನುಜೇಂದ್ರಾಂಗನೆಯನೆಯ್ದಿ ಕಂಡಿಂತಂದಳ್*

ಇಲ್ಲಿ 'ಮನುಜೇಂದ್ರಾಂಗನೆ'ಎಂಬ ಪದಕ್ಕಿರುವ ಧ್ವನಿಶಕ್ತಿಯನ್ನು ಗಮನಿಸಬೇಕು.

ಆ ದೂದಿ 'ನೀನಂತಪ್ಪ ಕಾಮದೇವಂಗೆಂತಾಯ್ದಬಿಸಿ ಕೂರ್ತೆ' ಎಂದು ಅತಿಯಾದ ವ್ಯಂಗ್ಯದಿಂದ ಮೂದಲಿಸಿ ಹೇಳುವಾಗ ಅಮೃತಮತಿ ಆ ವ್ಯಂಗ್ಯದ ಪರಜ್ಞಾನವಿಲ್ಲದೆ 'ಪೇರ್ ಕಾದಲನಂತಿರೆ ಚೆಲ್ವನೆ; ದೂದವಿ ನೀನೆನ್ನ ಕೊಂದೆ' ಎನ್ನುತ್ತಾಳೆ. ಆದರೆ ಆಕೆ ತನ್ನ ಜಾರನಲ್ಲಿ ರೂಪನ್ನು ಬಯಸಿದ್ದಳೆಂದಲ್ಲ. ಆಕೆ ರೂಪಿಗಾಗಿ ಒಲಿದವಳಲ್ಲ. ಹಾಗಿದ್ದರೆ ಯಶೋಧರನ ರೂಪೇನು 'ನಾಡಾಡಿಯೆ?' ಅವನ ರೂಪಿನ ಮುಂದೆ ಇನ್ನಾವ ರೂಪ ಬೇಕು? ಅಮೃತಮತಿ ರೂಪನ್ನು ಬಯಸಲಿಲ್ಲ. ದೂದಿ ಅವನು ಕಾದೇನಂತಿದ್ದಾನೆ. ಎಂದಾಗ, 'ಓಹೋ! ಹಾಗೇನು? ಅದು ಇನ್ನೂ ಒಳಿತಾಯಿತು' ಎನ್ನುವಂತೆ, 'ರೂಪು ಬೇಕು? ಅಮೃತಮತಿ ರೂಪನ್ನು ಬಯಸಲಿಲ್ಲ. ದೂದಿ ಅವನು ಕಾಮದೇವನಂತಿದ್ದಾನೆ. ಎಂದಾಗ, 'ಓಹೋ! ಹಾಗೇನು? ಅದು ಇನ್ನೂ ಒಳಿತಾಯಿತು'ಎನ್ನುವಂತೆ ಮಾತನಾಡುತ್ತಾಳೆ ಆಕೆ ಬಯಸಿದ್ದು ಜಾರುವುದನ್ನು ಮಾತ್ರವಲ್ಲದೆ ಜಾರಲು ಕಾರಣವನ್ನು ಸಹ ಅಲ್ಲ. ಇಂತಹ ಪಾತ್ರವನ್ನು ಕುರಿತು ನಮ್ಮಲ್ಲಿ ಅನುಕಂಪ ಹುಟ್ಟುವುದಿಲ್ಲ; ಅಸಹ್ಯ ಜುಗುಪ್ಸೆಗಳು ಹುಟ್ಟುತ್ತವೆ. ಇಲ್ಲಿ ದುರಂತಪಾತ್ರದ ಹೆಸರನ್ನೆತ್ತುವುದೂ ಅಪರಾಧವಾದೀತು.

ಅಷ್ಟಾವಂಕನ ಅಸಹ್ಯವರ್ಣನೆ ಮಾಡುವ ದೂದಿ ತುಸು ಉತ್ಪ್ರೇಕ್ಷೆ ಮಾಡಿರಬಹುದಾದರೂ ಸಹಜ. ಏಕೆಂದರೆ ಆಕೆ ತನ್ನ ಒಡತಿಯ ವಿಕೃತ ಮನಸ್ಸು ಎಂತಾದರೂ ಬದಲಾಗಲೆಂದು ಯೋಚಿಸರಬಹುದು. ಅದನ್ನು ಕೇಳಿ ಅಮೃತಮತಿ ಹೇಳುವ ಮಾತು:

*ಕರಿದಾದೊಡೆ ಕತ್ತುರಿಯಂ*
*ಮುರಾಡಾದೊಡೆ ಮಲಯಜಂಗಳಮ ಕೊಂಕಿದೊಡೇಂ*

*ಸ್ಮರಚಾಪಮನಿಳಿಕಯ್ವರೆ*
*ಮರುಳೇ ಪೊಲ್ಲಮೆಯ ಲೇಸು ನಲ್ಲರ ಮೆಯ್ಯೊಳ್*

'ಪೊಲ್ಲಮೆಯ ಲೇಸು ನಲ್ಲರ ಮೆಯ್ಯೊಳ್!' 'ಒಲವಾದೊಡೆ ರೂಪಿನ ಕೋಟಲೆಯೇವುದೊ!' ಎಂತಹ ಮುತ್ತಿನಂಥ ಮಾತುಗಳು! ಎಂತಹ ಹಂದಿಯ ಬಾಯಲ್ಲಿ! ಯಾವಳೊ ಒಬ್ಬ ಕನ್ಯೆ ತಾನು ಒಲಿದವನೊಬ್ಬನ ಬಗೆಗೆ ಆ ಮಾತುಗಳನ್ನಾಡಿದರೆ ಅವು ಎಷ್ಟು ರಮಣೀಯೋಜ್ವಲವಾಗುತ್ತಿದ್ದುವು! ಅಮೃತಮತಿ ಇಂತಹ ಮಾತುಗಳನ್ನಾಡಿ ತನ್ನ ಬಗೆಗೆ ನಮಗಿರುವ ಅಸಹ್ಯ ಜುಗುಪ್ಸೆಗಳನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುತ್ತಾಳೆ. ಅವಳ ಮನಸ್ಸಿನಲ್ಲಿ ಸ್ವಲ್ಪವೂ ಹೋರಾಟವಿಲ್ಲ; ಗೊಂದಲವಿಲ್ಲ. ಆಕೆಯ ದೌರ್ಬಲ್ಯದ ಸೂಚನೆಯೂ ಕಾಣಿಸದು. ನಿಶ್ಚಿಂತವಾಗಿ, ಬೇಕೆಂದೇ, ನೇರವಾಗಿ ಆಕೆ ಕೂಪಕ್ಕೆ ಇಳಿ ಬೀಳುತ್ತಾಳೆ. ಊರ್ಧ್ವಗಾಮಿ ಮತ್ತು ಅಧೋಗಾಮಿಯಾದ ಎರಡು ಚೇತನಗಳ ನಡುವಿನ ಅಪಾರವೂ ಭಯಂಕರವೂ ಆದ ವೈಪರೀತ್ಯವನ್ನು ಕವಿ ಇಲ್ಲಿ ಕೊಡುತ್ತಿದ್ದಾನೆ, ವೈರಾಗ್ಯದ ಉದ್ದೀಪನೆಗೆ ಅಗ್ನಿ ಪ್ರಚೋದನೆಯಾಗಿ.

ಇಲ್ಲಿಯೆ ಮುಂದೆ, 'ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ' ಎಂಬ ಮಾತು ಬರುತ್ತದೆ. ಆದರೆ ಅದು ಸರ್ವಥಾ ಅನುಕಂಪೆಯಲ್ಲ; ಕೇವಲ ಭೂತದಯೆಯ ಪಶ್ಚಾತ್ತಾಪ. ಅಷ್ಟೆ. ಆ ಮಾತನ್ನೂ ಹೇಳುವವನು ಅಭಯರುಚಿ. ಆತ ಯಾವ ಮಟ್ಟವನ್ನು ಏರಿ ನಿಂತಿದ್ದಾನೆ! ಅಂತಹನು ಲೋಕದ ಸಕಲ ಪ್ರಾಣಿಮಾತ್ರಗಳಿಗೂ ಕರುಣೆ ತೋರಿಸುವುದು ಸಹಜ. ಆದರೆ ಸಹೃದಯರಲ್ಲಿ ಇಂತಹ ಪಶ್ಚಾತ್ತಾಪದ ಲೋಕಾಭಿರಾಮದ ಮಾತು ಕೂಡ ಹೊಮ್ಮುವುದು ಕಷ್ಟ.

ಅಮೃತಮತಿ ಜಾರಿದಳು; ಪತಿತೆಯಾದಳು. ಹೋಗಲಿ, ಇಲ್ಲಿಗಾದರೂ ಮುಗಿಯಿತೇನು ಅವಳ ಕಥೆ? ಇಲ್ಲ. ಆಕೆ ಪತಿತೆ ಮಾತ್ರವೇ ಅಲ್ಲ, ನೀಚೆ; ಕುಲಟೆ; ಪಾತಕಿ; ಸರ್ವಪಾಪಗಳ ಘನೀಭೂತಪ್ರತಿಮೆ. ಇಂತಹ ಪಾತ್ರವನ್ನು ಕುರಿತು ಅನುಕಂಪೆ ಹುಟ್ಟುವುದು ಅಸಂಭವ.

ಹೋಗಲಿ, ಅಷ್ಟಾವಂಕನಿಗೆ ರೂಪವಂತೂ ಇಲ್ಲ; ಆತ ಸಂಸ್ಕೃತನಾದರೂ ಆಗಿದ್ದಾನೆಯೆ? ಅದೂ ಇಲ್ಲ. ಹೀಗೆಯೆ ಸಾಗಿತು ಈ ಪಾಪಕಾರ್ಯ. ಯಶೋದರ ಒಂದು ದಿನ ಆಕೆಯ ನಡತೆಯನ್ನರಿಯಲು ಅವಳನ್ನು ಹಿಂಬಾಲಿಸಿ ಹೋಗುತ್ತಾನೆ, 'ದೋಷದ ಬೆನ್ನೊಳೆ ಸಂಧಿಸುವ ದಂಡದಂತೆ'. ಅಲ್ಲಿ ಆ ಬದಗ 'ತೋರ ಮುಡಿವಿಡಿದು ಕುಡಿಯಂ ನಾರಂ ತದೆವಂತೆ ತದೆದು ಬೀಟೆಯ ಕಾಲಿಂಬಾರೇಳೆ' ಒದೆಯುತ್ತಾನೆ. ಈಕೆ 'ಕೇರೆ ಪೊರಳ್ವಂತೆ ಕಾಲಮೇಲೆ ಪೊರಳ್ದಳ್'.

ವಿಕಾರತೆ ತಾರತಮ್ಯದಿಂದ ಎಷ್ಟು ಕಡಿದಾದರೆ, ಎಷ್ಟು ಅಸಂಭವನೀಯವಾದರೆ ಅಷ್ಟೂ ಕೃತಾರ್ಥನಾಗುತ್ತಾನೆ ಕವಿ, ತನ್ನ ವೈರಾಗ್ಯಪ್ರಚೋದನಾ ಕಾರ್ಯದಲ್ಲಿ. ಓದುಗರಲ್ಲಿ ಜುಗುಪ್ಸೆ ಹೆಚ್ಚಿದಷ್ಟೂ ಕವಿಯ ಉದ್ದೇಶ ಸಾಧನೆ ಸುಲಭವಾಗುತ್ತದೆ.

ಎಲ್ಲವನ್ನೂ ಕಣ್ಣಾರೆ ಕಂಡ ಯಶೋಧರನ ಮನಃಸ್ಥಿತಿ ಏನಾಗಿರಬೇಕು!

*ಆಗಳ್ ಬಾಳ್ ಇಮಿರ್ದುದು ತೋಳ್*
*ತೂಗಿದುದು ಮನಂ ಕನಲ್ದುದಿರ್ವರುಮನೆರ*
*ಡ್ಬಾಗಂ ಮಾಡಲ್ ಧೃತಿ ಬಂ*
*ದಾಗಳ್ ಮಾಣೆಂಬ ತೆಱದೆ ಪೇಸಿದನರಸಂ*

ಹಾಗೆ ಹೇಸಿದಾಗಲೇ ಯಶೋಧರನ ಚೇತನದ ಉದ್ಧಾರಕ್ಕೆ ಆರಂಭವಾಯಿತು. ಆ ಕ್ಷಣದಲ್ಲೇ ಅವನ ಊರ್ಧ್ವಾಭಿಮುಖಗಮನ ಅದ್ಭುತವಾಗಿ ಮೊದಲಾಯಿತು. ಕವಿ ಯಶೋಧರನನ್ನು ಎಂತಹ ಕ್ರೋಧಪೂರ್ಣವಾದ ಸನ್ನಿವೇಶದ ನಡುವೆ ನಿಲ್ಲಿಸಿ ಅಲ್ಲಿಯೇ ಅವನ ಉದ್ಧಾರದ ನಾಂದಿಯನ್ನು ಹಾಡಿದ್ದಾನೆ? ಯಾವ ಕ್ಷಣದಲ್ಲಿ ಅಮೃತಮತಿಯ ಅಧೋಗಮನ ಯಶೋಧರನ ಚೇತನಕ್ಕೆ ಅರಿವಾಯಿತೋ ಅದೇ ಕ್ಷಣದಲ್ಲಿಯೆ ಆತನ ಉದ್ಧಾರಕ್ಕೂ ಆರಂಭವಾಯಿತು. ಮುಂದೆ ಬರುವ ಯಶೋಧರನ ಉದ್ಧಾರಮಾರ್ಗ ಇಲ್ಲಿ ನಡೆದ ಉದ್ಧಾರದ ಒಂದು ವಿಕಸನರೂಪವಾದ ಪ್ರತಿಮೆ ಮಾತ್ರ.

*ಅಱಿಪುಳ್ಳೊಡೆ ನೋಡಿಱಿದೊಡೆ*
*ನಱಿವುದೇ ಪೆಣ್ ತಪ್ಪಿನಡೆಯ ಚೀ ಕಿಸುಗುಳಮಂ*
*ದುಱಿವುದೆ ಗೆಲ್ಲಂ! ಕೊಂದಾ*
*ಪುೞು ಪುಟ್ಟುವ ನರಕದೊಳಗೆ ಬೀೞ್ವನೆ ಚದುರಂ ?*

ಎಂದು ಹೇಳುವ ಯಶೋಧರನ ಮಾತುಗಳು ಊರ್ಧ್ವಗಮನಕ್ಕಾಗಿ ಕಂಕಣ ಕಟ್ಟಿ ಹೊರಟ ಚೇತನಕ್ಕೆ ಸಹಜ. ಆದರೆ ನಾವೂ ಆ ಮಾತುಗಳನ್ನು ಹೇಳಿಕೊಂಡು ಅಮೃತಮತಿಯ ಬಗೆಗೆ ಅನುಕಂಪೆ ತೋರಿಸುವುದು ತಪ್ಪಾಗುತ್ತದೆ.

*ಮುಟ್ಟಿದೊಡೆ ಸುಖದ ಸೋಂಕಂ*
*ಪುಟ್ಟಿಸುವಾ ವಾಮೆ ವಾಮೆಯಾದೊಡೆ ಮುನ್ನಂ*
*ಬಟ್ಟಿದುವೆನಿಸುವ ಮೊಲೆ ನಿ*
*ರ್ವೆಟ್ಟಿದುವು ನೃಪಂಗೆ ಬೆನ್ ಸೋಂಕಲೊಡಂ*

ಈ ಮಾತನ್ನು ಒತ್ತಿ ಒತ್ತಿ ಹೇಳುವುದೇ ಕವಿಯ ಉದ್ದೇಶ. ಅಮೃತಮತಿ ಈ ಮಾತಿಗೆ ಸಾಕ್ಷಿಯಾಗಿ ನಿಲ್ಲಲು ಒಂದು ಪ್ರತೀಕರೂಪದ ಪಾತ್ರ ಮಾತ್ರ. ಅವಳ ಪಾತ್ರದಲ್ಲಿನ ವೈಪರೀತ್ಯಮನಶ್ಶಾಸ್ತ್ರಘಟನೆಯೂ ಕವಿಗೆ ಆ ದೃಷ್ಟಿಯಿಂದ ಬೇಕಿಲ್ಲ. ಆತನಿಗೆ ಬೇಕಾದುದು ಕೇವಲ ಸಂಸಾರದ ವಿಫಲತೆಯಿಂದ ವೈರಾಗ್ಯ ಪ್ರಚೋದನೆ.

ಈ ಕಥೆಯನ್ನು ಕೇಳಿದ ಮಾರಿದತ್ತ ವಿಧಿಯ ಮೇಲೆ ರೋಷಗೊಂಡು ಹೇಳುತ್ತಾನೆ.

*ಆ ಗಂಡನನಪ್ಪಿದ ತೋಳ್*
*ಪೋಗಂಡನನಪ್ಪುವಂತೆ ಮಾಡಿದ ಬಿದಿಯಂ*
*ಮೂಗಂ ಕೊಯ್ದಿಟ್ಟಿಗೆಯೊಳ್*
*ಪೋಗೊರಸದೆ ಕಂಡೆನಾದೊಡೇಂ ಬಿಟ್ಟಪನೇ!*

ಮಾರಿದತ್ತ ಹೇಳುವ ‘ವಿಧಿ’ಯನ್ನಾಗಲಿ, ಅಮೃತಮತಿ ಹೇಳುವ ‘ಮನಸಿಜನ ಮಾಯೆ’ಯನ್ನಾಗಲಿ ನೆವವಾಗಿಸಿಕೊಂಡು ಅಮೃತಮತಿ ಜಾರಿದುದು ವಿಧಿಯಿಂದಾದರೆ ಯಶೋಧರ ಏರಿದುದೂ ವಿಧಿಯಿಂದಲ್ಲವೆ!

*ಪದವಿಯ ರೂಪಿನ ಸೊಬಗಿನ*
*ಮದಮಂ ಮಾಡುವರ ಮೂಗಿನೊಳ್ ಪಾತ್ರಮಾಮನಾ*

*ಡದ ಮಾಣದನಂಗನ ಕೃತಿ*
*ಸುದತಿಯರ ವಿಕಾರಮೆಂಬವಿದ್ಯಾಬಲದಿಂ*

ಎಂಬಲ್ಲಿ ಕವಿ ನೇರವಾಗಿ ಹೇಳಿದ್ದಾನೆ, 'ಸುದತಿಯರ ವಿಕಾರಮೆಂಬ ಅವಿದ್ಯಾಬಲ'ಎಂದು.

*ಆ ರಾಜಕುಮಾರಂ ಬೞಿ*
*ಕಾ ರೂಪಿನ ಪೆಂಡಿರಿಂತು ಕೞಿಪಾದೊಡೆ ಚೀ*
*ಕೂರಿಸುವ ಕೂರ್ಪ ಮಾತಂ*
*ಮಾರಿಗೆ ಕುಡು ಸಿರಿಯನೊಟ್ಟೆ ಸುಡು ಹೋಗೆಂದನ್!*

ಕವಿ ವೈರಾಗ್ಯದ ತನ್ನ ಗುರಿಯನ್ನು ಸಾಧಿಸಲು ಈ ಕಾವ್ಯಪ್ರತಿಮೆಯಲ್ಲಿ ಒಂದು ಕಥಾಪ್ರತೀಕವನ್ನು ಸೃಷ್ಟಿಸಿಕೊಟ್ಟಿದ್ದಾನೆ.

*ಒಲಿಸಿದ ಪೆಣ್ ಪೆಱರೊಳ್ ಸಂ*
*ಘಲಿಸದೊಡದು ಸುಖಮೆ? ಪರಮಸುಖಸಂಪದಮಂ*
*ಸಲಿಯಿಸಲೆ ನೆಱೆವ ಮುಕ್ತಿಯ*
*ನೊಲಿಸುವೆನಿನ್ನೊಲ್ಲೆನುೞಿದ ಪೆಂಡಿರ ನಣ್ಪಂ*

ಎಂಬ ಭಾವವನ್ನು ಓದುಗರಲ್ಲಿ ಸ್ಫುರಿಸುವುದೇ ಕವಿಯ ಉದ್ದೇಶ. ಯಶೋಧರನ ಮತ್ತು ಶ್ರಾವಕ ಜನರ ಮನಸ್ಸು ಈ ನಿರ್ಣಯಕ್ಕೆ ಬರುವಂತೆ ಮಾಡಿದಾಗಲೇ ತನ್ನ ಕಾವ್ಯದ ಸಾರ್ಥಕ್ಯ ಎಂಬುದು ಕವಿಯ ಮತ.

'ಆ ಪಾದರಿ' ಎಂಬ ಮಾತು ಕಾವ್ಯದಲ್ಲಿ ಸ್ಪಷ್ಟವಾಗಿ ಬಂದಿದೆ. ಆದರೂ ಆಕೆ ಪತಿತಳಾಗಿದ್ದುದು ಮಾತ್ರವಾಗಿದ್ದರೆ ಆಕೆಯ ಬಗೆಗೆ ತುಸು ಸಹಾನುಭೂತಿಯನ್ನು ವ್ಯಕ್ತಪಡಿಸುವುದು ಸಹಜವಾಗಬಹುದಿತ್ತು. ಆದರೆ ಆಕೆ ಪತಿತಳು ಮಾತ್ರವಲ್ಲ; ಘೋರ ಪಾತಕಿ.

*ಬಳೆಗೋದುದು ಕೀರ್ತಿ ದಿಶಾ*
*ಕಳಭಂಗಳ ನಿಗ್ಗವಂಗಳೊಳ್ ರಿಪುಕಾಂತಾ*
*ವಳೀಯೊಳ್ ಭವತ್ಪ್ರತಾಪಂ*
*ಬಳೆಗಳೆಯಿಸೆ ತಾನದಕ್ಕೆ ಮಚ್ಚರಿಸುವವೊಲ್*

ಎಂಬ ಪದ್ಯದಲ್ಲಿ 'ರಿಪುಕಾಂತಾವಳಿಯೊಳ್ ಭವತ್ಪ್ರತಾಪಂ ಬಳೆಗಳೆಯಿಸೆ' ಎಂದು ತಾಯಿ ಹೇಳುವಾಗ ತನ್ನ ಕಾಂತೆಯ ಬಗೆಯನ್ನು ನೆನೆದು ಯಶೋಧರನ ಮನಸ್ಸಿನಲ್ಲಿ ಎಂತಹ ಪರಿಣಾಮವಾಗಿರಬೇಕು!

ಆ ಘೋರ ಪಾತಕಿ, ಅಷ್ಟಾವಂಕನಿಂದ ಬಾರುಕೋಲಿನ ಏಟುತಿಂದು ಸಂತೋಷದಿಂದ ಸಹಿಸಿದವಳು. ಯಶೋಧರ ನೈದಿಲೆಯ ಹೂವಿನಿಂದ ಹೊಡೆದಾಗ ನೊಂದಳು! ಯಶೋಧರ ತಪಸ್ಸಿಗೆ ಹೊರಡುವೆನೆಂದಾಗಲಾದರೂ ಆಕೆ ಅವನನ್ನು ಸುಮ್ಮನೆ ಹೋಗಗೊಡಲಿಲ್ಲ. 'ಅಮೃತಮತಿಯೆಂಬ ಪಾತಕಿಯ ಮಾಯೆ ಬನಮಾಯ್ತು' ಆತನಿಗೆ, 'ದೇವರ ಬೞಿಯೊಳೆ ಬರ್ಪೆಂ ಪೂವಿನ ಸೌರಭದ ಮಾೞ್ಕೆಯಿಂ ಎನ್ನುತ್ತಾಳೆ ಅ ವಂಚಕಿ, ಕುಟಿಲೆ, ಆ ಕುಲಟೆ ಆತನಿಗೆ ನಂಜಿನ ಲಡ್ಡುಗೆಯನ್ನು ಬಡಿಸಿ,

‘ಪಾತಕಿ ಕೊಂದಳ್.’ ಕೊನೆಗೆ ಕೊಲೆಪಾತಕಿಯೂ ಆಗುತ್ತಾಳೆ. ‘ಸ್ತ್ರೀಚರಿತಮದೇಂ!’ ಕವಿಯ ಆ ಉದ್ಗಾರ ಓದುಗರಲ್ಲೂ ಹೊರಡುತ್ತದೆ. ‘ಅವಳಣಕಕ್ಕೆ ಸವಣನುಂ ಸೈರಿಪನೆ?’

ಬೇಕೆಂದೇ ಜಾರಿದ ಹೆಣ್ಣು ಆನಂದದಿಂದಲೇ ಅಷ್ಟಾವಂಕನನ್ನು ಕೂಡಿದ್ದಳು. ಸತ್ತು ನವಿಲಿನ ಜನ್ಮದಲ್ಲಿ ಬಂದ ಯಶೋಧರ ಮತ್ತೆ ಆ ಪಾತಕಿ ಅಷ್ಟಾವಂಕನೊಡನೆ ಕೂಡುವುದನ್ನು ನೋಡುವ ದುರ್ಯೋಗ ಒದಗಿತು. ಅದನ್ನು ಕಂಡು ತಾಳಲಾರದೆ ನವಿಲು ಅಷ್ಟಾವಂಕನ ಕಣ್ಣನ್ನು ಕುಟುಕಿದಾಗ ಆ ‘ಪಾಣ್ಬೆ’, ‘ಅನ್ ಬೆಂದೆನ್’ ಎಂದು ‘ಕನಲ್ದಡಸಿ’ ಅದನ್ನು ಕೊಲ್ಲುತ್ತಾಳೆ. ಮುಂದೆ ಅಷ್ಟಾವಂಕನೊಡನೆ ಆಕೆ ಬಾಳುತ್ತಿರುವ ಸೂಚನೆ ಅಲ್ಲಲ್ಲಿ ಬರುತ್ತದೆ. ಕೊನೆಯಲ್ಲಿ,

*ಬಸಿದಪುದು ಮೆಯ್ಯ ಕೀವುಂ*
*ರಸಿಗೆಯುಮೊಡಲಱೆದುದಾದೊಡಂ ಮಾಣಳೆ ನಾ*
*ಯ್ವಸನಿಗತಮಂ, ಮಾಣ್ದೇ*
*ಕಿಸುಗುಳಿಯಂ ಜವನುಮುಯ್ಯಲೇಂ ಪೇಸಿದನೋ?*

ಹೀಗಾಗುತ್ತದೆ ಆ ಪಾತಕಿಯ ಅಂತ್ಯ, ಅವಳನ್ನು ಕಂಡು ಯಮನೂ ಹೇಸುತ್ತಾನೆ. ಅವಳ ಬದುಕಿನ ಘೋರತೆ ಸಾವಿನಲ್ಲಿ ಈ ರೂಪಾಗಿ ಗೋಚರಿಸಿತು:

*ಅಮೃತಮತಿ ಅಷ್ಟವಂಕಂ*
*ಗೆ ಮರುಳ್ಗೊಂಡತ್ತೆ ಗಂಡನಂ ವಿಷದಿಂ ಕೊಂ*
*ದು ಮುದಿರ್ತು ಕುಷ್ಠಿ ಕೊಳೆ ಪಂ*
*ಚಮ ನರಕದೊಳಟ್ಟಳರಸ ಧೂಮಪ್ರಭೆಯೊಳ್!*

ಇದು ಆಕೆಯ ಪಾತ್ರದ ಭರತವಾಕ್ಯ!

ಈ ಪ್ರಸಂಗಕ್ಕೆ ಕಾರ್ಯಕಾರಣ ಸಂಬಂಧವಿಲ್ಲ. ಅರ್ಥಹೀನ ಮತ್ತು ತರ್ಕಹೀನವಾದ ಇಂತಹ ಘಟನೆಗಳನ್ನು ‘ತಿದ್ದುವುದೂ ಸಾಧ್ಯವಿಲ್ಲ. ಅದರಿಂದ ತಪ್ಪಿಸಿಕೊಳ್ಳುವ ವೈರಾಗ್ಯವೊಂದೇ ಇದಕ್ಕೆ ಏಕೈಕಮಾತ್ರವಾದ ಮದ್ದು. ಅದನ್ನು ತಿಳಿಸುವುದೇ ಕವಿಯ ಆಶಯ. ಅಮೃತಮತಿಯ ಮಾನಸಿಕ ಜಾಟಿಲ್ಯವನ್ನಾಗಲಿ, ಆಕೆಯ ಜೀವನದ ಇತರ ಘಟನೆಗಳನ್ನಾಗಲಿ ಚಿತ್ರಿಸಿ ಈ ಒಂದು ಪ್ರಸಂಗ ಸ್ವಲ್ಪವಾದರೂ ಸಂಭವನೀಯವೆನಿಸುವಂತೆ ಕವಿ ಮಾಡಬಹುದಾಗಿತ್ತು. ಅದರೆ ಕವಿಯ ಗಮನ ಆ ಕಡೆಗೆ ಒಂದಿನಿತೂ ಇಲ್ಲ. ಅದು ಅವನ ಉದ್ದೇಶವೂ ಅಲ್ಲ. ಅವನ ಮೂಲೋದ್ದೇಶ ನೆರವೇರಲು ಈ ಮನೋರೋಗವಿಕಾರರೂಪವಾದ ಅಸಹಜತೆಯ ಅಗತ್ಯವಾಗಿದೆ. ಅಮೃತಮತಿಯನ್ನು ಕಂಡು ನಾವು ಜುಗುಪ್ಸೆಪಡಬಲ್ಲೆವಲ್ಲದೆ, ಅಸಹ್ಯ ಪಡಬಲ್ಲೆವಲ್ಲದೆ ಅನುಕಂಪೆ ತೋರಿಸಲಾರೆವು. ಆ ಪಾತ್ರದ ಬಗೆಗೆ ನಾವು ಅನುಕಂಪೆ ತೋರಿಸುವಂತಾಗಿದ್ದರೆ ಕವಿಯ ಉದ್ದೇಶ ಇಲ್ಲಿಯಷ್ಟು ಯಶಸ್ವಿಯಾಗಿ ನೆರವೇರುತ್ತಿರಲಿಲ್ಲ.

ಕಾವ್ಯ ರಸಪೂರ್ಣವಾಗಿರಬೇಕೆಂಬ ಮಾತಿಗೆ ಹೊರತುಹೇಳಿದ ಕವಿಗಳೊಬ್ಬರೂ ಇಲ್ಲ. ನಮ್ಮ ಕಾವ್ಯಮೀಮಾಂಸಕರೂ ಕಾವ್ಯದ ಪ್ರಯೋಜನವನ್ನು ‘ಶಿವೇತರಕ್ಷತಿ’ ಎಂದೂ ‘ಸದ್ಯಃಪರ ನಿರ್ವೃತಿ’ ಎಂದೂ ಹೇಳಿದ್ದಾರೆ. ಅದು ರಸಾನುಭವದಿಂದಲೆ ಸಾಧ್ಯವಾಗುವ ಮಾರ್ಗವೆಂದರೆ ಕಾವ್ಯಮಾರ್ಗ. ಕವಿಗಳ ಮುಖ್ಯ ಉದ್ದೇಶವಾದರೂ ಅದೇ. ಜನ್ನನೂ ‘ಈ ಶುಭಕಥನ’, ‘ಸತ್ಕಥನ’ ಎಂಬ ಮಾತುಗಳಲ್ಲಿ ತನ್ನ ಪರಿಭಾಷೆಯಲ್ಲಿ ಅದನ್ನೂ ಸಮರ್ಥಿಸಿದ್ದಾನೆ.

ಕಾವ್ಯದಲ್ಲಾಗಲಿ ಬದುಕಿನಲ್ಲಾಗಲಿ ಪಾಪಸಮರ್ಥನೆ ಕೇಡಿಗೆ ಹೆದ್ದಾರಿ. ಪಾಪಿಯಲ್ಲಿ ಅನುಕಂಪೆ ಪಾಪದಲ್ಲಿ ಮೈತ್ರಿಯಾಗಬಾರದು. ನಮ್ಮ ಪಾಪಿಯ ಅನುಕಂಪೆ ಒಮ್ಮೊಮ್ಮೆ ನಮ್ಮ ಪಾಪರುಚಿಯ ಛದ್ಮರೂಪವಾಗಿರುವುದೂ ಸಾಧ್ಯ. ಶಸ್ತ್ರಚಿಕಿತ್ಸೆಗೆ ಅರ್ಹವಾದ ರೋಗದೊಡನೆ ಅನುಕಂಪೆ ತೋರಿದರೆ ದೇಹನಾಶ ಸ್ವತಃಸಿದ್ಧ. ನರಕಶಿಕ್ಷೆಗೆ ಅರ್ಹವಾದ ಪಾಪದೊಡನೆ ಸಹಾನುಭೂತಿಯ ಸರಸವಾಡಿದರೆ ಆತ್ಮನಾಶ ಸ್ವತಃಸಿದ್ಧ. ನಮ್ಮೆಲ್ಲರ ಚೇತನದಲ್ಲಿರುವ 'ಅಮೃತಮತಿತ್ವ'ಕ್ಕೆ ನಾವು ನಿಷ್ಠುರರೂ ನಿರ್ದಯರೂ ತೀವ್ರ ಶಸ್ತ್ರಚಿಕಿತ್ಸಾರೂಪರೂ ಆಗದಿದ್ದರೆ ನಮಗೆ 'ಯಶೋಧರತ್ವ' ಸಿದ್ಧಿಸುವುದಿಲ್ಲ. ನಮ್ಮ 'ಅಮೃತಮತಿತ್ವ'ವನ್ನು ಕಠೋರ ಶಿಕ್ಷೆಗೆ, ಕೊನೆಗೆ ಧೂಮಪ್ರಭೆಗಾದರೆ ಧೂಮಪ್ರಭೆಗೆ, ಕತ್ತು ಹಿಡಿದು ತಳ್ಳಿ ಅದರ ಅಧೋಗಾಮಿತ್ವಕ್ಕೆ ಪೂರ್ಣವಿರಾಮ ಹಾಕಿ, ಅದು ಊರ್ಧ್ವಾಭಿಮುಖಿಯಾಗಿ, ತನ್ನ 'ಅಷ್ಟಾವಂಕಮೋಹತ್ವ'ದ ಕಿಲ್ಬಿಷದಿಂದ ಸಂಪೂರ್ಣವಾಗಿ ಪಾರಾಗಿ ಶುಚಿಯಾಗಿ, ನಿಜವಾಗಿಯೂ 'ಅಮೃತಮತಿ' ಯಾಗಿ ತನ್ನ 'ಯಶೋಧರ'ನನ್ನು ಮತ್ತೆ ಕೂಡಿಕೊಳ್ಳುವಂತೆ ಮಾಡಬೇಕು. ಆ ದೃಷ್ಟಿಯಿಂದ ನೋಡಿದರೆ ಕವಿಯ ಕ್ರೌರ್ಯ ಅವನ ಕರುಣಾಹಸ್ತದ ಒಂದು ನಖರೂಪ ಮಾತ್ರವಾಗಿ ತೋರುತ್ತದೆ.

* * *

---

[1] ಅಮೃತಮತಿ ಎಂಬ ಹೆಸರಿನಲ್ಲಿಯೆ ಒಂದು ವಿಡಂಬನ, ವಿಪರ್ಯಾಸ ಇರುವಂತೆ ಭಾಸವಾಗುತ್ತದೆ. ಕೊನೆಗೆ ಎಂತಹ ವಿಷಮತಿ ಆಗುತ್ತಾಳೆ ಎಂಬುದನ್ನು ಭಾವಿಸಿದರೆ.

[2] ತನುಸೋಂಕಲಿಂಗನ ಚುಂ
ಬನಮುಂ ಗಳರವದ ಸವಿ ರತಪ್ರೌಢಿಯಿನಾ
ತುವಂ ಮರೆಯಿಸೆಯರೆಯದೆ
ಮನೋಜನಾಡಿಸುವ ಜಂತ್ರದಂತಿರೆ ನೆರೆದರ
ಸುರತಸುಖಪರವಶ್ಯಂ
ತರೆ ನಿದ್ರಾಭರದುನಿರ್ವರುಂ ಶಿಥಿಲತನೂ
ಪರಿರಂಭಣಮುಚ್ಚಳಿಯದೆ
ಪರಿವೇಷ್ಟಿತ ಬಾಹುವಳಯದೊಳ್ ಕಣ್ಗಯ್ದರ್

ಪುರ್ವೆಂಬ ಜವಳಿಗಟ್ಟಿನ
ಕರ್ವಿನ ಬಿಲ್ಲಿಂಗೆ ಬಿಗಿದ ಮಧುಕರಮಾಲಾ
ಮೌರ್ವಿಯೆನೆ ಮುಗಿದ ಕಣ್ಗಳ
ಪರ್ವುಗೆಯೊಳ್ ಮೆಱೆದುದವರ ತಳ್ತೆಮೆದುಱುಗಲ್

# ಶ್ರೀ ಕೃಷ್ಣಜನ್ಮಾಷ್ಟಮಿ

*ರಾಕ್ಷಸ ಕಂಸನ ಮಥುರೆಯ ಮೇಲೆ*
*ಘನ ಘೋರಾಂಧತೆ ಕವಿದಿತ್ತು;*
*ಮಿಂಚಿನ ಸಿಡಿಲಿನ ಮೋಡದ ಲೀಲೆ*
*ತಿರೆಯ ಮೋರೆಯನು ತಿವಿದಿತ್ತು;*
*ಕೆರಳಿದ ಕೇಸರಿಯಂದದಿ ಗರ್ಜಿಸಿ*
*ಗಾಳಿಯು ಭರದಲಿ ಬೀಸಿತ್ತು;*
*ಮುಗಿಲಿನ ಚಿಪ್ಪೊಡೆದಾಲಿಯ ಕಲ್ಗಳ*
*ಕವಣೆಯವೋಲ್ ಮಳೆ ಸೂಸಿತ್ತು* **/...**
*ರಾಕ್ಷಸ ಕಂಸನ ಮಥುರೆಯ ಮೇಲೆ*
*ಶತಶತಮಾನಗಳಾಚೆಯ ದೂರದ*
*ದ್ವಾಪರಯುಗದಲ್ಲಿ* **/**
*-'ಅಗ್ನಿಹಂಸ'ದಿಂದ*

ಎಂತಹ ಘೋರ ರಾತ್ರಿ! ಆದರೂ ಅದೆಂತಹ ದಿವ್ಯರಾತ್ರಿ! ಆ ಚಿರಸ್ಮರಣೀಯ ಕಾಳರಾತ್ರಿಯಲ್ಲಿಯೆ ಲೋಕಕ್ಕೊಂದು ಮಹಾಜ್ಯೋತಿ, ಉಜ್ಜ್ವಲತಮವಾದ ಪರಂಜ್ಯೋತಿ, ಅವತರಿಸಿದ್ದು. ಆ ರಾತ್ರಿ ಧನ್ಯರಾತ್ರಿ. ಆ ಒಂದು ರಾತ್ರಿಯ ದಿವ್ಯಗರ್ಭದಿಂದ ಉದ್ಭವಿಸಿದ ಬೆಳಕು ನಮ್ಮ ಭೂಮಿಯ ಬಾಳಿನ ಅದೆಷ್ಟು ಹಗಲುಗಳಿಗೆ ಜೀವವೀಯುತ್ತಿದೆ! ಅದು ಲೋಕಕ್ಕೆ ಶ್ರೀಮದ್ ಭಗವದ್‌ಗೀತೆಯನ್ನು ಕೊಟ್ಟವನನ್ನು ಕೊಟ್ಟ ರಾತ್ರಿ! ಪೂರ್ಣಾವತಾರನೆಂದು ಸರ್ವಲೋಕ ಪೂಜ್ಯನಾಗಿರುವ ಶ್ರೀ ಕೃಷ್ಣನನ್ನು ಪಡೆದ ರಾತ್ರಿ! ಮರ್ತ್ಯದ ಪ್ರಜ್ಞೆ ಉನ್ನತತರವಾಗುವಂತೆಯೂ ವಿಸ್ತೃತತರವಾಗುವಂತೆಯೂ ಅದಕ್ಕೆ ದೈವೀಪ್ರಜ್ಞೆಯ ಸಂಸರ್ಗ ಸಂಭವಿಸುವಂತೆ ಮಾಡಿದ ರಾತ್ರಿ, ಈ ಕೃಷ್ಣಜನ್ಮಾಷ್ಟಮಿಯ ರಾತ್ರಿ! ಕ್ಲೇಶ, ಕಷ್ಟ, ಸಂಕಟ, ಕಣ್ಣೀರು, ಚಿತ್ತಕ್ಷೋಭೆ, ಧರ್ಮಗ್ಲಾನಿ-ಇವೆಲ್ಲ ನಮ್ಮ ಹೃದಯದಲ್ಲಿ ಉಲ್ಬಣಿಸಿ, ನಮ್ಮ ಜೀವ ಕಾಳರಾತ್ರಿಯ ಕಗ್ಗತ್ತಲೆಯ ಸೆರೆಯಲ್ಲಿ ಸಿಕ್ಕಿ, ವ್ಯಾಕುಲಪೂರ್ಣವಾಗಿ ಪ್ರಾರ್ಥಿಸಿ ಮೊರೆಯಿಟ್ಟಾಗಲೆ ಅಲ್ಲವೆ, ಇಂದಿಗೂ ಎಂದಿಗೂ, ಆರ್ತ ಹೃದಯದಲ್ಲಿ ಭಗವಂತನ ಅವಿರ್ಭಾವವಾಗುವುದು? ಶ್ರೀ ಕೃಷ್ಣಜನ್ಮಾಷ್ಟಮಿಯಾಗುವುದು?

ಲೋಕಲೋಕಗಳಲ್ಲಿ ಯುಗಯುಗಗಳಲ್ಲಿ ದೇಶದೇಶಗಳಲ್ಲಿ ಜನಾಂಗ ಜನಾಂಗಗಳಲ್ಲಿ ಪ್ರತಿ ಚೇತನ ಚೇತನದಲ್ಲಿ ಪ್ರತಿ ಕ್ಷಣ ಕ್ಷಣದಲ್ಲಿಯೂ ಸಂಭವಿಸುವ ಗ್ಲಾನಿಯ ಮಧ್ಯೆ ಅವಿರ್ಭವಿಸುವ ಭಗವದಾಶಾಕಿರಣವನ್ನೆ ಭಾಗವತದ ಪುರಾಣಕವಿ ಶ್ರೀ ಕೃಷ್ಣ ಜನನ ವೃತ್ತಾಂತದಲ್ಲಿ ಪ್ರತಿಮಾ ವಿಧಾನದಿಂದ ನಿರೂಪಿಸಿದ್ದಾನೆ. ಆ ಮಹಾಪ್ರತಿಮೆಯಿಂದ ಹೊಮ್ಮುವ ದರ್ಶನ ಧ್ವನಿಯ ನಿತ್ಯಸತ್ಯವನ್ನು ನಾವು ವರುಷ ವರುಷವೂ ಈ ಶ್ರೀಕೃಷ್ಣಜನ್ಮಾಷ್ಟಮಿಯ ದಿನದಂದು ಅನುಶೀಲನಮಾಡದಿದ್ದರೆ ನಮ್ಮ ಭಾಗಕ್ಕೆ ಅದು ಸ್ವಾರಸ್ಯವಾದ ಕಟ್ಟುಕತೆ ಮಾತ್ರವಾಗಿ ಉಳಿದೀತು:

*ಇಲ್ಲಿ ಬಾ ಸಂಭವಿಸು ಇಂದೆನ್ನ ಹೃದಯದಲಿ*
*ನಿತ್ಯವೂ ಅವತರಿಪ ಸತ್ಯಾವತಾರ!*
*ಮಣ್ಣಾಗಿ ಮರವಾಗಿ ಮಿಗವಾಗಿ ಖಗವಾಗಿ*
*ಭವಭವದಿ ಭವಿಸಿ, ಓ ಭವವಿದೂರ,*

*ಮಣ್ತನಕೆ ಮರತನಕೆ ಮಿಗತಕೆ ಖಗತನಕೆ*
*ಮುನ್ನಡೆಗೆ ಕಣ್ಣಾದ ಗುರುವೆ, ಬಾರ!*
*ಮೂಡಿ ಬಂದಿಂದೆನ್ನ ನರರೂಪ ಚೇತನದಿ*
*ನಾರಾಯಣತ್ವಕ್ಕೆ ದಾರಿ ತೋರ!*
*ಅಂದು ಅರಮನೆಯಲ್ಲಿ, ಮತ್ತೆ ಸೆರೆಮನೆಯಲ್ಲಿ,*
*ಅಲ್ಲಿ ತುರುಪಟ್ಟಿಯಲಿ, ಇಲ್ಲಿ ಕಿರುಗುಡಿಸಲಲಿ,*
*ದೇಶದೇಶದಿ ವೇಷವೇಷಾಂತರವನಾಂತು*
*ವಿಶ್ವಸಾರಥಿಯಾಗಿ ಲೀಲಾರಥವನೆಂತು*
*ಚೋದಿಸಿರುವೆಯೊ ಅಂತೆ, ಸೃಷ್ಟಿಲೋಲ,*
*ಅವತರಿಸು ಬಾ ಇಲ್ಲಿ ಇಂದೆನ್ನ ಚೈತ್ಯದಲಿ,*
*ಹೇ ದಿವ್ಯ ಸಚ್ಚಿದಾನಂದ ಶೀಲ!**

ಎಂಬ ಜೀವಂತ ಶ್ರದ್ಧೆಯ ಅಭೀಪ್ಸೆ ಪ್ರಾರ್ಥನಾಗೋರೂಪದಿಂದ ಪುರುಷೋತ್ತಮನ ಕ್ಷೀರಸಾನ್ನಿಧ್ಯದತ್ತ ಹೊಲ್ವರಿಯಬೇಕು. ಅದನ್ನೇ ಭಾಗವತದ ಪುರಾಣ ಕವಿ "ಗೌರ್ಭೂತ್ವಾ ಆಶ್ರುಮುಖೀ ಸ್ವಿನ್ನಾ ಕ್ರುಂದಂತೀ ಕರುಣಂ ವಭೋಃ| ಉಪಸ್ಥಿತಾಂತಿಕೇ ತಸ್ಮೈ ವ್ಯಸನಂ ಸ್ವಂ ಅವ್ರೋಚತ" ಎಂದು ಅಸುರೀಶಕ್ತಿಯ ಪೀಡೆಗೆ ಸಹಿಸದ ಭೂದೇವಿ ಗೋರೂಪಧಾರಣೆ ಮಾಡಿ ವಿಧಾತನೆಡೆಗೆ ತೆರಳಿ ಮೊರೆಯಿಡುವಂತೆ ವರ್ಣಿಸಿದ್ದಾನೆ. ಆ ಮೊರೆಗೇಳಿದ ಜಗನ್ನಾಥನು ವಸುದೇವನ ಮನೆಯಲ್ಲಿ ಹುಟ್ಟಿ ಬರುತ್ತೇನೆಂದು ಆಶ್ವಾಸನೆ ಕೊಡುತ್ತಾನೆ.

ಆ ನಾಂದಿಯ ತರುವಾಯ ನಾಟಕ ಪ್ರಾರಂಭವಾಗುತ್ತದೆ. ಕಂಸ, ವಸುದೇವ ದೇವಕಿ ಮೊದಲಾವರೆಲ್ಲ ನಿಮಿತ್ತ ಮಾತ್ರ ಪಾತ್ರಗಳಾಗುತ್ತಾರೆ. ಹಾಗೆ ಯಾವುದಾದರೂ ಒಂದು ಲೌಕಿಕ ಕಾರಣವನ್ನು ಆಶ್ರಯಿಸಿದಲ್ಲದೆ ಭಗವದ್‌ವಿಭೂತಿ ಅವತರಿಸುವುದಾದರೂ ಎಂತು? ರಾವಣನೊ ಕಂಸನೊ ನೆವವಾಗುತ್ತಾರೆ. ಆದರೆ ನಿಜವಾಗಿಯೂ ರಾವಣ ಕಂಸರನ್ನು ವ್ಯಕ್ತಿಶಃ ಕೊಲ್ಲುವುದಕ್ಕೆ ಮಾತ್ರವಾಗಿಯೆ ಭಗವಂತನು ಅವತರಿಸುತ್ತಾನೆ ಎಂಬುದು ಅಯೋಗಮತಿಗಳಿಗಾಗಿ ಇರುವ ಕವಿಕಲ್ಪನೆಯಷ್ಟೆ. ಭಗವಂತ ಅವತರಿಸದಿದ್ದರೂ ಅವರು ಕಾಲಧರ್ಮದಿಂದಲೆ ಸ್ವಲ್ಪ ತಡವಾಗಿಯಾದರೂ ಸಾಯುತ್ತಿದ್ದರು. ಆದ್ದರಿಂದ ಎಷ್ಟೇ ದುಷ್ಟರಾಗಿದ್ದರೂ ಎಂತಹ ಬೃಹತ್ ಪ್ರಮಾಣದ ಕೇಡಿಗಳಾಗಿದ್ದರೂ ಕೆಲವು ವ್ಯಕ್ತಿಗಳನ್ನು ಕೊಲ್ಲುವುದಕ್ಕಾಗಿಯೆ ದೇವರು ಅವತರಿಸುತ್ತಾನೆ ಎಂಬುದು ಮನುಷ್ಯ-ನ್ಯಾಯಕ್ಕೆ ಸಂಬಂಧಪಟ್ಟ 'ಅಲ್ಪ'ವಾಗುತ್ತದೆ. ಅದಕ್ಕಿಂತಲೂ 'ಭೂಮ'ವಾದ ಉದ್ದೇಶವಿರಬೇಕು ಭಗವಂತನಂತಹನ ಅವತಾರಕ್ಕೆ! ದ್ರಷ್ಟಾರರು ಹೇಳುತ್ತಾರೆ: ಸೃಷ್ಟಿಯ ಸಮಷ್ಟಿ ಪ್ರಜ್ಞೆಯ ಸಾಮೂಹಿಕ ವಿಕಾಸಕ್ಕಾಗಿಯೂ ಸರ್ವತೋಮುಖವಾದ ಐತನ್ಯೋನ್ಮೇಷನಕ್ಕಾಗಿಯೂ ನವ್ರೋನವ ಋತಶಕ್ತಿ ಪ್ರಕಾಶನಕ್ಕಾಗಿಯೂ ಭತಗವದವತಾರದ ಅವಶ್ಯಕತೆ ಒದಗುತ್ತದೆ ಎಂದು. ಆದರೆ ನೈಜವಾದ ಭಗವದುದ್ದೇಶ ಅಪ್ರಕಟವಾಗಿ ಛದ್ಮವಾಗಿ ಹಿಂದಿದ್ದುಕೊಂಡು ರಾವಣ ಕಂಸಾದಿ ಸಂಹಾರ ಕಾರಣದ ಲೌಕಿಕೋದ್ದೇಶವನ್ನೆ ಮುಂದಕ್ಕಿಟ್ಟು ತನ್ನ ಲೀಲಾ ಪ್ರಯೋಜನವನ್ನು ಸಾಧಿಸುತ್ತದೆ.

ಊರ್ಧ್ವಲೋಕಗಳಲ್ಲಿ ಪ್ರಾರಂಭವಾದ ದೇವವ್ಯೂಹ ಲೋಕಭೂಮಿಕೆಗೆ ಇಳಿದು ಮೊಳೆಯಲು ಮೊದಲಾಗುತ್ತದೆ, ಮಧುರಾಪುರಿಯಲ್ಲಿ. ದೌಷ್ಟ್ಯಪ್ರಮಾಣದಲ್ಲಿ ಇತರ ಅಂತಹ ಮಾನವರಂತೆಯೆ ಇದ್ದಿರಬಹುದಾದ ಕಂಸನ ಕೆಟ್ಟತನವನ್ನು ರಾಕ್ಷಸಪ್ರಮಾಣಕ್ಕೆ ಏರುವಂತೆ ಮಾಡುವ ಕೀಲಣೆ ಜರುಗುತ್ತದೆ; ಅಶರೀರವಾಣಿ! ಮದುಮಗಳಾದ ತಂಗಿ ತನ್ನ ಗಂಡನೊಡನೆ ತೇರೇರಿ ಮೆರವಣಿಗೆ

ನಡೆಯುತ್ತಿರಲು ಸಂತೋಷಕ್ಕೂ ಅಕ್ಕರೆಗೂ ಉಕ್ಕಿ ಹಿಗ್ಗಿ ತಾನೆ ಸಾರಥಿಯಾಗಿ ಅಶ್ವವಾಘೆಯನ್ನು ಕೈಲಾಂತು ಸಂಭ್ರಮದಿಂದ ರಥವೆಸಗುತ್ತಿದ್ದ ಕಂಸನ ಕಿವಿಗೆ ವಿಷಹೊಯ್ಯುತ್ತದೆ ಆ ಅಶರೀರವಾಣಿ: 'ಅಸ್ಯಾಸ್ತ್ವಾಮಷ್ಟಮೋ ಗರ್ಭೋ ಹಂತಾ ಯಾಂ ನಯಸೇ ಅಬುಧ!'

ಕಂಸ ನಮ್ಮ ಪುರಾಣಗಳನ್ನು ಓದಿದ್ದವನಾಗಿದ್ದರೆ ಅವನಿಗೆ ಚೆನ್ನಾಗಿ ಗೊತ್ತಾಗುತ್ತಿತ್ತು, ಈ ಅಶರೀರವಾಣಿಗಳಿಗೆ ಕಿವಗೊಡುವುದರಿಂದಲೆ ಕೇಡಿಗೆ ಹಾದಿ ಹಾಕಿದಂತಾಗುತ್ತದೆ ಎಂದು: ಅದು ಸೂಚಿಸುವ ಕೇಡಿನಿಂದ ಪರಿಹಾರ ಪಡೆಯಲು ಮಾಡುವ ಪ್ರಯತ್ನವೆ ತನ್ನನ್ನು ಕೇಡಿಗೆ ತಳ್ಳುವ ಉಪಾಯವಾಗುತ್ತದೆ ಎಂದು ಅಶರೀರವಾಣಿಯ ರೂಪದಲ್ಲಿ ಅಥವಾ ನಾರದನ ರೂಪದಲ್ಲಿ ಬರುವ ಹಿತವೇಷದ ಎಚ್ಚರಿಕೆಗಳೆಲ್ಲ ಅಹಿತ ಪರಿಣಾಮಕ್ಕೆ ನಮ್ಮನ್ನು ತಳ್ಳುವುದಕ್ಕಾಗಿಯೆ ಬರುತ್ತವೆ ಎಂದು! ರಾಹುಕಾಲವನ್ನು ತಿಳಿಸುವ ಪಂಚಾಂಗವೇ ರಾಹು ನಿವಾಸ ಎಂದು! ಆಗ ಅವನು ಆ ಅಶರೀರವಾಣಿಯನ್ನು ಕೇಳಿಯೂ ಕೇಳದವನಂತೆ ಅದನ್ನು ನಿರೀಕ್ಷಿಸಿ, ಆ ಶುಭದ ಮೆರವಣಿಗೆಯ ಮಂಗಳಕ್ಕೆ ಹಾನಿ ತಟ್ಟದಂತೆ ವರ್ತಿಸಿ, ತನ್ನ ಅಶುಭವನ್ನು ಪರಿಹರಿಸಿಕೊಳ್ಳುತ್ತಿದ್ದನೆಂದು ತೋರುತ್ತದೆ. ಆದರೆ ಆ ವಿಚಾರದಲ್ಲಿ ತುಂಬ ಆಸ್ತಿಕನಾಗಿದ್ದ ಅವನು ಶ್ರದ್ದೆಯಿಂದ ವರ್ತಿಸಿ ತನ್ನಲ್ಲಿ ಅಂತರ್ಗತವಾಗಿದ್ದ ಅಸುರತ್ವ ಸುಪ್ರಕಟವಾಗುವಂತೆ ವರ್ತಿಸುತ್ತಾನೆ.

ತಂಗಿಯ ಎಂಟನೆಯ ಗರ್ಭದಲ್ಲಿ ಹುಟ್ಟುವವನಿಂದ ತನಗೆ ಮರಣ ನಿಜವಾದರೆ ಅವಳನ್ನೆ ಕೊಂದುಬಿಟ್ಟರೆ ಮರಣಕಾರಣದ ಮೂಲವನ್ನೆ ಪರಿಹರಿಸಿದಂತಾಗುವುದಿಲ್ಲವೆ? ಆದರೆ ವಿಧಿ ಅವಿವೇಕದ ಹೃದಯದಲ್ಲಿಯೆ ಅದರ ನಿರ್ಮೂಲನಕ್ಕೆ ಕಾರಣವಾಗುವ ಒಂದು ವಿವೇಕಾಂಶವನ್ನೂ ಇಟ್ಟೇ ಇರುತ್ತದೆ. ಕಂಸನಲ್ಲಿದ್ದ ಆ ಅಂಶದ ಸಹಾಯದಿಂದ ವಸುದೇವ ತನ್ನ ಹೆಂಡತಿಯ ಕೊಲೆಯನ್ನು ತಡೆಯುತ್ತಾನೆ. 'ನಿನ್ನ ತಂಗಿಯನ್ನೇಕೆ ಕೊಲ್ಲುವೆ? ಆಕೆಗೆ ಹುಟ್ಟುವ ಮಕ್ಕಳೆಲ್ಲವನ್ನೂ ಕೂಡಲೆ ನಿನಗೆ ತಂದೊಪ್ಪಿಸುತ್ತೇನೆ.'

ದೇವಕಿಗೆ ಹುಟ್ಟಿದ ಮೊದಲನೆಯ ಮಗುವನ್ನು ವಸುದೇವನು ತಂದೊಪ್ಪಿಸಿದಾಗ ಕೀರ್ತಿಮಂತ ಎಂಬ ಆ ಕುಮಾರನನ್ನು ಕಂಸ ಕೊಲ್ಲಲಿಲ್ಲ. "ಎಂಟನೆಯ ಗರ್ಭದಿಂದ ನನಗೆ ಮರಣವಾಗುವುದು ಎಂದು ನಿಶ್ಚಯವಾಗಿರುವ ಕಾರಣ ಇವನಿಂದ ನನಗೇನೂ ಭಯವಿಲ್ಲ. ಈ ಬಾಲಕ ಮನೆಗೆ ಹೋಗಲಿ."ಎಂದನಂತೆ. ಆದರೆ ವಿಧಿಯ ವ್ಯೂಹಕ್ಕೆ ಕಂಸನ ಸೌಜನ್ಯದಿಂದ ಭಂಗವೊದಗುತ್ತಿತ್ತೊ ಏನೊ. ಆದ್ದರಿಂದ ಹಿಂದೆ ಅಶರೀರವಾಣಿಯನ್ನು ಒಡ್ಡಿದ್ದ ಶಕ್ತಿ ಈಗ ನಾರದನನ್ನು ಕಳಿಸುತ್ತದೆ. ಆ ದೇವರ್ಷಿಯ ಮಾತಿಗೆ ಕಿವಿಗೊಟ್ಟು ಭೀತನೂ ದಿಗ್ಭ್ರಾಂತನೂ ಆಗಿ ವಸುದೇವ ದೇವಕಿಯರನ್ನು ಸಂಕಲೆಗಳಿಂದ ಬಂಧಿಸಿ ಸೆರೆಮನೆಯಲ್ಲಿಡಿಸುತ್ತಾನೆ ಕಂಸ.

ಅಲ್ಲಿ ಸಂಭವಿಸುತ್ತದೆ ಜಗನ್ನಾಥನ ಪೂರ್ಣಾವತಾರ.

ಆ ಭಯಂಕರ ಸೆರೆಮನೆಯಲ್ಲಿ ನಿತ್ಯವೂ ಜಗದ್ರಕ್ಷಕನಾದ ಭಗವಂತನನ್ನು ನೆನೆಯುತ್ತಾ ಪ್ರಾರ್ಥಿಸುತ್ತಾ ವಸುದೇವನು ಅನನ್ಯ ಶರಣನಾಗಿರುತ್ತಿರಲು, ಆರ್ತನ ಆ ಪ್ರಾರ್ಥನಾರೂಪವಾದ ತಪಸ್ಸೇತುವಿನಿಂದಲೇ ಆಕರ್ಷಿತನಾಗಿ ಭಗವಂತನು ತನ್ನ ಪರಿಪೂರ್ಣ ರೂಪದಿಂದ ಭೂಸಂಕಟ ನಿವಾರಣಕ್ಕಾಗಿ ವಸುದೇವನ ಚಿತ್ಕಮಲಕ್ಕೆ ಇಳಿಯುತ್ತಾನೆ. ತರುವಾಯ ವಸುದೇವನ ಮನಸ್ಸಿನಿಂದ ಆ ಅಚ್ಯುತಾಂಶ ದೇವಕೀದೇವಿಯ ಶ್ರೀಮನಸ್ಸನ್ನು ಪ್ರವೇಶಿಸುತ್ತದೆ:

*ಭಗವಾನಪಿ ವಿಶ್ವಾತ್ಮಾ ಭಕ್ತಾನಾಮಭಯಂಕರಃ*
*ಆವಿವೇಶಾಂಶಬಾಗೇನ ಮನ ಆನಕದುಂದುಭೇಃ*
*ತತೋ ಜಗನ್ಮಂಗಳಮಚ್ಯುತಾಂಶಂ*
*ಸಮಾಹಿತಂ ಶೂರಸುತೇನ ದೇವೀ*
*ದಧಾರ ಸರ್ವಾತ್ಮಕಮಾತ್ಮಭೂತಂ*
*ಕಾಷ್ಠಾ ಯಥಾನಂದಕರಂ ಮನಸ್ತಃ*

ಇತ್ತ ಕಂಸನು ತನ್ನನ್ನು ಕೊಲ್ಲುವುದಕ್ಕಾಗಿಯೆ ಹುಟ್ಟಲಿರುವ ಮಹಾವಿಷ್ಣುವನ್ನು ವೈರಬುದ್ಧಿಯಿಂದ ಹಗಲಿರುಳೂ ನೆನೆಯುತ್ತಾ ವೈರಭಾವ ಸಾಧಕನಾಗಿರಲು, ಅವನಿಗೆ ಜಗತ್ತೆಲ್ಲ ವಿಷ್ಣುಮಯವಾಗಿ ತೋರತೊಡಗಿತು. ಸಾಧನೆ ಅಷ್ಟು ಮುಂದುವರಿದ ಮೇಲೆ ಸಿದ್ಧಿ ಬಹದೂರವಿರುವುದಿಲ್ಲ.

ಭಗವಂತನ ಅವತರಣ ನಿರೂಪಣೆಯಲ್ಲಿ ಭಾಗವತದ ಕವಿ ಕಾವ್ಯದ ಸೂಚನೆಯ ಅಥವಾ ಧ್ವನಿಯ ಮಾರ್ಗವನ್ನು ಅವಲಂಬಿಸದೆ ಪುರಾಣದ ನೇರವಾದ ಪ್ರಕಟಮಾರ್ಗವನ್ನೆ ಹಿಡಿದಿದ್ದಾನೆ. ಸ್ವಲ್ಪ ಹೆಚ್ಚು ಕಡಿಮೆ ಆ ವಿಚಾರ ಗೊತ್ತಾಗಬೇಕಾಗಿದ್ದ ಮುಖ್ಯರಿಗೆಲ್ಲ ಗೊತ್ತಾಗಿರುತ್ತದೆ. ಬ್ರಹ್ಮರುದ್ರಾದಿ ದೇವತೆಗಳೂ ನಾರದಾದಿಮುನಿಗಳೂ ದೇವಕೀ ಗರ್ಭಸ್ಥನಾದ ಪರಮಾತ್ಮನನ್ನು ದೀರ್ಘವಾಗಿ ತಾತ್ತ್ವಿಕವಾದ ಮಾತುಗಳಿಂದ ನುತಿಸುವುದಿರಲಿ; ವಸುದೇವನು ಕೂಡ ಶಂಖ ಚಕ್ರ ಗದಾಧಾರಿಯಾಗಿ ಶ್ರೀವತ್ಸಲಾಂಛನನಾಗಿ ಕೌಸ್ತುಭರತ್ನಶೋಭಿತನಾಗಿ ದಿವ್ಯ ಪೀತಾಂಬರಾಲಂಕೃತನಾಗಿ ತನ್ನ ನಿಜರೂಪದಿಂದಲೆ ದೇವಕೀದೇವಿಯಲ್ಲಿ ಹುಟ್ಟಿದ ಅದ್ಭುತ ಶಿಶುವನ್ನು ಬೆರಗುಬಡಿದು ನೋಡುತ್ತಾನೆ; ಪ್ರೌಢವಾದ ತತ್ತ್ವ ಪ್ರಬಂಧವೂ ನಾಚಿ ತಲೆ ತಗ್ಗಿಸುವಂತೆ ಸುದೀರ್ಘವಾಗಿ ಸ್ತೋತ್ರಗೈಯುತ್ತಾನೆ.

[1]
ಭಗವಂತು ತನ್ನ ತಾಯಿಯಾದ ದೇವಕಿಯ ಕಣ್ಣಿಗೂ ತಂದೆಗೆ ಕಂಡಂತೆಯೆ ನಿಜರೂಪದಿಂದಲೆ ಕಾಣುತ್ತಾನೆ. ಆಕೆಯೂ ಆತನನ್ನು ಸ್ತುತಿಸಿ ನಿಜರೂಪವನ್ನು ಮರೆಮಾಡಿಕೊಳ್ಳುವಂತೆ ಬೇಡಿಕೊಳ್ಳುತ್ತಾಳೆ. ‘ಎಲ್ಲವನ್ನೂ ಹೊಟ್ಟೆಯಲ್ಲಿಟ್ಟುಕೊಂಡಿರುವ ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿಬಂದೆ ಎಂದರೆ ಲೋಕ ನಂಬುವುದೇ? ಸರ್ವೇಶ್ವರನಾದ ನೀನು ಮಾನುಷಿಯಾದ ನನ್ನ ಜಠರದಲ್ಲಿ ಜನಿಸಿದೆ ಎಂದರೆ ಲೋಕ ನಗುವುದಿಲ್ಲವೇ?**[2]**

ಆಗ ಭಗವಂತನು ತಾಯಿಗೆ ಧೈರ್ಯ ಹೇಳುತ್ತಾನೆ. ತನ್ನನ್ನು ಗೋಕುಲಕ್ಕೆ ಕರೆದುಕೊಂಡು ಹೋಗುವಂತೆ ತಂದೆಗೆ ಆದೇಶವೀಯುತ್ತಾನೆ. ಇಷ್ಟೆಲ್ಲ ಸ್ಪಷ್ಟವಾಗಿ ನಡೆದ ತರುವಾಯವೆ ಅವನು ‘ಪ್ರಾಕೃತಶಿಶು’ವಾಗಿ ಲೋಕಲೀಲಾ ನಿಯಮಗಳಿಗೆ ಅಧೀನನಾಗುತ್ತಾನೆ.

ಪ್ರಾಕೃತಶಿಶುವಾಗಿಯೆ ಮೊದಲಿನಿಂದಲೂ ತೋರದೆ ನಿಜರೂಪದಿಂದ ತೋರಿದುದಕ್ಕೆ ಕಾರಣವನ್ನು ಹೇಳುತ್ತಾ ಭಗವಂತನು ವಸುದೇವ ದೇವಕಿಯರ ಸ್ವಾಯಂಭುವ ಮನ್ವಂತರದ ಪೂರ್ವಜನ್ಮ ವೃತ್ತಾಂತವನ್ನು ತಿಳಿಸುತ್ತಾನೆ. ಅಂದು ‘ನಿನ್ನಂತಹ ಪುತ್ರನಾಗಬೇಕು’ ಎಂದು ಅವರು ಬೇಡಿದ ವರದಂತೆ ಇಂದು ಅವರಿಗೆ ಮಗನಾಗಿ ಬಂದಿದ್ದಾನೆ. ಅದರ ನೆನಪಿಗಾಗಿಯೆ ತನ್ನ ನೈಜವಾದ ದಿವ್ಯ ರೂಪವನ್ನು ಅವರಿಗೆ ತೋರಿಸಿದ್ದಾನೆ; ಇಲ್ಲವಾದರೆ ಮನುಷ್ಯ ಜನ್ಮದಲ್ಲಿ ಮನುಷ್ಯ ತನುವನ್ನು ಆಶ್ರಯಿಸಿದ ಭಗವಂತನನ್ನು ತಿಳಿಯಲಾಗುವುದೆಂತು?

*ಏತದ್ ವಾಂ ದರ್ಶಿತಂ ರೂಪಂ ಪ್ರಾಗ್ ಜನ್ಮ ಸ್ಮರಣಾಯ ಮೇ*
*ನಾನ್ಯಥಾ ಮದ್‌ಭವಂ ಜ್ಞಾನಂ ಮರ್ತ್ಯಲಿಂಗೇನ ಜಾಯತೇ*

ಭಗವದಾಜ್ಞೆಯಂತೆ ವಸುದೇವನು ದಿವ್ಯಶಿಶುವನ್ನೆತ್ತಿಕೊಂಡು ಹೊರಟನು. 'ಹೊರಗಡೆ ಕತ್ತಲೆ, ಬಿರುಮಳೆ, ಗಾಳಿ; ಕುಣಿದಳು ಇರುಳಿನ ಕಾಳಿ ಕರಾಳಿ!' ಆ ಗುಡುಗು, ಮಿಂಚು, ಸಿಡಿಲು, ಮಳೆ, ಗಾಳಿಗಳ ರೌದ್ರರಭಸವೆ ಜನಸಂಚಾರಕ್ಕೆ ಒಂದಿನಿತೂ ಅವಕಾಶವಿಲ್ಲದಂತೆ ಮಾಡಿತ್ತು. ಕಾವಲುಗಾರರು ಮೃತಪ್ರಾಯರೆಂಬಂತೆ ನಿದ್ರಾಮಗ್ನರಾಗಿದ್ದರು. ಕಬ್ಬಿಣದ ಲಾಳವಿಂಡಿಗೆಗಳಿಂದ ಸುಭದ್ರವಾಗಿದ್ದ ಸೆರೆಮನೆಯ ಭೀಮಾಕಾರದ ದ್ವಾರಗಳು ಒಂದಾದ ಮೇಲೊಂದರಂತೆ ತಮಗೆ ತಾವೆ ತೆರೆದುಕೊಂಡುವು. ಆದಿಶೇಷನೆ ತನ್ನ ಸಾವಿರ ಹೆಡೆಯ ಕೊಡೆಬಿಚ್ಚಿ ಊಳಿಗವೆಸಗಿ ಹಿಂಬಾಲಿಸಿದನು.

*ಮಘೋನಿ ವರ್ಷತ್ಯಸಕೃದ್ಯಮಾನುಜಾ*
*ಗಂಭೀರ ತೋಯೌಘ ಜವೋರ್ಮಿ ಫೇನಿಲಾ*
*ಭಯಾನಕಾವರ್ತಶತಾಕುಲಾ ನದೀ*
*ಮಾರ್ಗಂ ದದೌ ಸಿಂಧುರಿವ ಶ್ರಿಯಃ ಪತೇಃ*

ಎಡೆಬಿಡದೆ ಸುರಿವ ಕಾರ್ಮುಗಿಳೆಗೆ ತುಂಬಿ, ಉಕ್ಕಿ, ಭೋರ್ಗರೆದು, ನೊರೆಯೆದ್ದು ಸುತ್ತುವ ಸುಳಿಗಳಿಂದ ಭೀಕರವಾಗಿ ಹರಿಯುತ್ತಿದ್ದ ಯಮಾನುಜೆ ಯಮುನೆ, ಹಿಂದೆ ಶ್ರೀರಾಮನಿಗೆ ಹೆಗ್ಗಡಲು ಹಿಂಜರಿದಂತೆ, ಹೆದರಿ ದಾರಿ ಬಿಟ್ಟಳು! ಅಂತೂ ಕಡೆಗೆ ಈ ಶ್ರಾವಣ ಅಷ್ಟಮಿಯ ನಿಶಿಯಲ್ಲಿ ವಸುದೇವ ದೇವಕಿಯರ ಕಂದನು ಗೋಕುಲದಲ್ಲಿ ನಂದ ಯಶೋದೆಯರ ನಂದನನಾಗಿ ಮೆರೆಯತೊಡಗುತ್ತಾನೆ. ಪೃಥ್ವಿಯ ಶ್ರೇಯಸ್ಸಿಗಾಗಿ ಜಗದ್ರಕ್ಷಕನನ್ನೇ ರಕ್ಷಿಸಿದ ಆ ವಸುದೇವನಿಗೆ ನಾವೆಲ್ಲ ಇಂದು ಎಷ್ಟು ಕೃತಜ್ಞರಾದರೂ ಚಿರಂತನ ಋಣಿಗಳಾಗಿಯೆ ಉಳಿಯಬೇಕಾಗುತ್ತದೆ!

ಗೋಕುಲದಿಂದ ಹಿಂತಿರುಗಿದ ವಸುದೇವನು ತಂದ ಯಶೋಧೆಯ ಹೆಣ್ಣು ಮಗುವನ್ನು ದೇವಕಿಯ ಎಂಟನೆಯ ಮಗುವೆಂದೆ ಭ್ರಮಿಸಿ, ಅದನ್ನು ಶಿಲೆಗೆ ಅಪ್ಪಳಿಸಿ ಕೊಲ್ಲುವ ಕಾರ್ಯದಲ್ಲಿ ವಿಫಲನಾದ ಕಂಸನು ಪಶ್ಚಾತ್ತಾಪದಿಂದ ತಂಗಿ ಬಾವಂದಿರ ಕ್ಷಮೆಯನ್ನು ಯಾಚಿಸಿ 'ದೈವಮಪ್ಯನೃತಂ ವಕ್ತಿ ನ ಮರ್ತ್ಯಾ ಏವಕೇವಲಂ' 'ದೈವವೂ ಸುಳ್ಳಾಡುತ್ತದೆ, ಮನುಷ್ಯರು ಮಾತ್ರವೆ ಅಲ್ಲ!' ಎಂದು ತನ್ನನ್ನು ಮೂದಲಿಸಿದ ದೈವವನ್ನೆ ಮೂದಲಿಸುತ್ತಾನೆ.

ಆದರೆ ದೈವ ಸುಳ್ಳಾಡುವುದಿಲ್ಲ ಎಂಬುದು ಅವನಿಗೆ ಮುಂದೆ ಗೊತ್ತಾಗಿಯೆ ಆಗುತ್ತದೆ!

ಶ್ರೀಕೃಷ್ಣನು ಜನ್ಮವೆತ್ತಿದ ಈ ರಾತ್ರಿ ಸರ್ವಲೋಕ ಪೂಜ್ಯವಾದ ಪವಿತ್ರ ರಾತ್ರಿ. ಆ ಮತ ಈ ಮತ, ಆ ಧರ್ಮ ಈ ಧರ್ಮ, ಆ ದೇಶ ಈ ದೇಶ, ಆ ಜನಾಂಗ ಈ ಜನಾಂಗ ಎನ್ನದೆ ಎಲ್ಲರಿಂದಲೂ ಎಲ್ಲ ಕಾಲಕ್ಕೂ ಗೌರವಕ್ಕೆ ಪಾತ್ರವಾಗಿರುವ 'ಭಗವದ್ಗೀತೆ'ಗೆ ಅಂಕುರಾರ್ಪಣೆಯಾದ ದಿವ್ಯ ರಾತ್ರಿ. ಏಕೆಂದರೆ ಶ್ರೀಮದ್ ಭಗವದ್ಗೀತೆ ಶ್ರೀಕೃಷ್ಣನ ವಾಕ್‌ಕೃತಿರೂಪದ ಅವತಾರವಾಗಿದ್ದರೆ ಶ್ರೀಕೃಷ್ಣ ಶ್ರೀಮದ್ ಭಗವದ್ಗೀತೆಯ ಪುರುಷೋತ್ತಮ ರೂಪದ ಅವತಾರವಾಗಿದ್ದಾನೆ. ಭಗವದ್ಗೀತೆಯಲ್ಲಿ ಪ್ರಣೀತವಾದ ಪೂರ್ಣದೃಷ್ಟಿಯ ಪೂರ್ಣದರ್ಶನಕ್ಕೆ ತನ್ನ ಸಮಗ್ರ ಜೀವನವನ್ನೇ ನಿದರ್ಶನವನ್ನಾಗಿ ಒಡ್ಡಿದ್ದಾನೆ ಶ್ರೀಕೃಷ್ಣ. ಶ್ರೀಮದ್ ಭಗವದ್ಗೀತೆ ಶ್ರೀಕೃಷ್ಣನ ವಾಙ್ಮಯ ಶರೀರ; ಶ್ರೀಕೃಷ್ಣ ಶ್ರೀಮದ್ ಭಗವದ್ಗೀತೆಯ ಚಿನ್ಮಯ ಕಳೇವರ! ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ-ಈ ತತ್ತ್ವಗಳು ನಮ್ಮ ಲೋಕದ ಭವಿತವ್ಯದ ಬಾಳಿಗೆ ಮಾರ್ಗದರ್ಶಕ ದೀಪಗಳಾಗಬೇಕಾದರೆ ಭಗವದ್ಗೀತೆಯ

ವ್ಯೋಮವಿಶಾಲವೃಕ್ಷವನ್ನು ಆಶ್ರಯಿಸಿದಲ್ಲದೆ ಗತ್ಯಂತರವಿಲ್ಲ. ದ್ವಾಪರಯುಗದ ಗರ್ಭದಿಂದ ಹೊಮ್ಮಿ ಕಲಿಯುಗದ ಹೃತ್ಕೇಂದ್ರಕ್ಕೆ ಧುಮುಕುತ್ತಿರುವ ಆ ಕ್ಷೀರಜಲಪಾತದ ಪಾಂಚಜನ್ಯಘೋಷ ನಮ್ಮೆಲ್ಲರ ಪ್ರಾಣಗಳಲ್ಲಿ ಪ್ರತಿಸ್ಪಂದಿಸಿ ಅನುರಣಿತವಾಗಲಿ!

*ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ |*
*ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ||*

*ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ |*
*ಯತ್ತಪಸ್ಯಸಿ ಕೌಂತೇಯ ತತ್ ಕುರುಷ್ವ ಮದರ್ಪಣಮ್ ||*

*ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು |*
*ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಸಿ ಮೇ ||*

*ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ |*
*ಅಹಂ ತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ||*
*ಓಂ ಶಾಂತಿಃ*

---

* ‘ಅಗ್ನಿಹಂಸ’ದಿಂದ

[1] ತಮದ್ಭುತಂ ಬಾಲಕಮಂಬುಜೇಕ್ಷಣಂ
ಚತುರ್ಭುಜಂ ಶಂಖಗದಾದ್ಯುದಾಯುಧಂ
ಶ್ರೀವತ್ಸಲಕ್ಷ್ಮಂ ಗಳಶೋಭಿ ಕೌಸ್ತುಭಂ
ಪೀತಾಂಬರ ಸಾಂದ್ರಪಯೋದ ಸೌಭಗಂ
ಮಹಾರ್ಹ ವೈಡೂರ್ಯ ಕಿರೀಟ ಕುಂಡಲು
ತ್ವಿಷಾ ಪರಿಷ್ವಕ್ತ ಸಹಸ್ರಕುಂಡಲಂ
ಉದ್ದಾಮ ಕಾಂಚ್ಯಂಗದ ಕಂಕಣಾದಿಭಿ-
ರ್ವಿರೋಚಮಾನಂ ವಸುದೇವ ಐಕ್ಷತ!
[2] ರೂಪಂ ಚೇದಂ ಪೌರುಷಂ ಧ್ಯಾನದಿಷ್ಣ್ಯಂ
ಮಾ ಪ್ರತ್ಯಕ್ಷಂ ಮಾಂಸದೃಶಾಂ ಕೃಷೀಷ್ಠಾಃ
ಉಪಸಂಹರ ವಿಶ್ವಾತ್ಮನ್ನದೋ ರೂಪಮಲೌಕಿಕಂ
ಶಂಖಚಕ್ರಗದಾಪದ್ಮಶ್ರಿಯಾ ಜುಷ್ಟಂ ಚತುರ್ಭುಜಂ
ವಿಶ್ವಂ ಯದೇತತ್ ಸ್ವತನೌ ನಿಶಾಂತೇ
ಯಥಾವಕಾಶಂ ಪುರುಷಃ ಪರೋ ಭವಾನ್

ಬಿಭರ್ತಿ ಸೋಽಯಂ ಮಮ ಗರ್ಭಜೋಽಭೂದ್
ಅಹೋ ನೃಲೋಕಸ್ಯ ವಿಡಂಬನಂ ಮಹತ್!

# ಕವಿಯ ಜೀವನದೃಷ್ಟಿ ಮತ್ತು ಕಾವ್ಯಸೃಷ್ಟಿ

ಸ್ವಾನುಭವ, ದೇಶದ ಸಂಸ್ಕೃತಿ, ಪಡೆದ ವಿದ್ಯೆ, ತಾನು ಹುಟ್ಟಿದ ಮತ್ತು ಬೆಳೆದ ಸುತ್ತಣ ಸನ್ನಿವೇಶ, ಮಹಾಪುರುಷ ಸಂಶ್ರಯ ಮೊದಲಾದವುಗಳ ಪ್ರಭಾವದಿಂದ ಮೂಡುವ ಬುದ್ಧಿಸ್ಥಿತಿಯನ್ನು ಜೀವದೃಷ್ಟಿ ಎಂದು ಸಂಕೇತಿಸಬಹುದು. ಅಂತಹ ಜೀವನದೃಷ್ಟಿ ರಸಾನುಭೂತಿಗೇರಿದರೆ 'ದರ್ಶನ'ವಾಗುತ್ತದೆ.

ಕವಿಯ ದರ್ಶನ ತತ್ತ್ವಶಾಸ್ತ್ರಜ್ಞನ ತರ್ಕಬದ್ಧವಾದ ದರ್ಶನವಲ್ಲ. ಅದು ಋಷಿಯ ಅಪರೋಕ್ಷಾನುಭೂತಿಗೆ ಹೆಚ್ಚು ಸಮೀಪವಾದದ್ದು. ನಿಷ್ಕೃಷ್ಟವಾದ ಕೇಂದ್ರವಾಗಲಿ ಖಚಿತವಾದ ನೇಮಿಯಾಗಲಿ ಅದಕ್ಕಿದೆ ಎಂದು ಹೇಳಲಾಗುವುದಿಲ್ಲ. ಅನುಭವ ಬದಲಾಯಿಸಿದಂತೆ, ಪ್ರಜ್ಞೆ ವಿಕಾಸವಾದಂತೆ ಅದು ಪರಿಣಾಮಗೊಳ್ಳುತ್ತದೆ. ಕೇವಲವಾದ ಭೂಮಾನುಭೂತಿ ಸಿದ್ಧಿಸುವವರೆಗೂ ಅದರ ವೃದ್ಧಿಗಾಗಲಿ ಪರಿವರ್ತನೆಗಾಗಲಿ ಪೂರ್ಣವಿರಾಮ ಲಭಿಸುವುದಿಲ್ಲ. ಅದು ಅನಂತ ಕಾಲವೂ ನಿರಂತರ ವಿಕಾಸಶೀಲವಾದುದು. ಅನಂತದ ಸಿದ್ಧಿಗೆ ಅಂತವೆಲ್ಲಿ? ಆದ್ದರಿಂದಲೆ ರಸಋಷಿ ಹೀಗೆ ಹೇಳುತ್ತಾನೆ:

*ಯಾವ ಮತದವನಲ್ಲ,*
*ಎಲ್ಲ ಮತದವನು;*
*ಯಾವ ಪಂಥವು ಇಲ್ಲ,*
*ಬಹು ಪಂಥದವನು.*
*ಎಲ್ಲ ಬಿಡುವವನಲ್ಲ,*
*ಎಲ್ಲ ಹಿಡಿದವನಲ್ಲ.*
*ನಾನು ಉಮ್ಮರನಲ್ಲ,*
*ಚಾರ್ವಕನೂ ಅಲ್ಲ,*
*ನೀತಿಜಡನೂ ಅಲ್ಲ,*
*ನೀತಿಗೇಡಿಯೂ ಅಲ್ಲ.*
*ಬರಿ ಕನಸಿನವನಲ್ಲ,*
*ಬರಿ ಕೆಲಸದವನಲ್ಲ.*
*ಎಲ್ಲ ಬಿಡಲೂ ಬಲ್ಲೆ,*
*ಎಲ್ಲ ಹಿಡಿಯಲು ಬಲ್ಲೆ.*
..........................
...........................
*ಎಲ್ಲ ನಶ್ವರವೆಂದು*
*ಇರುವುದನುಳಿವುದೇಕೆ?*

*ಕೆಲಹಣ್ಣು ಕಹಿಯೆಂದು*
*ಎಲ್ಲ ಹಳಿಯುವುದೇಕೆ?*
*ಕಹಿಯೆದೆಯೊಳಿಹ ಸಿಹಿಯು*
*ಸಿಕ್ಕಷ್ಟು ಸಿಗಲಿ!*
*ದುಃಖದೊಳಗಿಹ ಸಿಹಿಯು*
*ಸಿಕ್ಕಷ್ಟು ಸಿಗಲಿ |*
*ದುಃಖದೊಳಗಿಹ ಸುಖವು*
*ಬಂದಷ್ಟು ಬರಲಿ |*

.....................

......................

*ಗುರುದೇವನನು ಭಜಿಸಿ,*
*ಬೇಡವಾದುದ ತ್ಯಜಿಸಿ,*
*ಕೈಗೆ ಬಂದುದ ಭುಜಿಸಿ,*
*ಬದುಕುವಂ ಬಾ!*
*ಭಕ್ತಿಯಲಿ, ಶಾಂತಿಯಲಿ,*
*ಒಂದಿಇತು ಗೋಣಗುಡದೆ,*
*ನಶ್ವರದ ನಡುವೆಯಿಹ*
*ಶಾಶ್ವತವ ಸವಿಯುತ್ತ,*
*ದುಃಖಗಳ ಎದೆಯೊಳಿಹ*
*ಸುಖಗಳನು ಸುಲಿಯುತ್ತ*
*ಇಹಪರಗಳೆರಡನೂ*
*ಪ್ರೇಮದಿಂ ಮುತ್ತುತ್ತ*
*ನಲಿಯುವಂ ಬಾ!*

**[1]**
ಯಾವ ದೇಶದ ಕವಿಯಾಗಲಿ ತನ್ನ ಜತೆಯ ಪ್ರಾಚೀನ ಸಂಸ್ಕೃತಿಯ ನೆಲದಲ್ಲಿಯೆ ಮೊಳೆತು ಬೇರುಬಿಟ್ಟು ಬೆಳೆಯುತ್ತಾನೆ. ಭಾರತೀಯನಾದ ಕವಿಗೆ ವೇದ, ಉಪನಿಷತ್ತು, ಭಗವದ್ಗೀತೆ, ಷಡ್ದರ್ಶನಗಳು, ರಾಮಾಯಣ ಮಹಾಭಾರತಾದಿ ಮಹಾಕಾವ್ಯಗಳು, ಪುರಾಣಗಳು-ಇತ್ಯಾದಿ ಭಾರತೀಯ ದರ್ಶನ ಸಾಹಿತ್ಯಗಳು ಅವನ ಸಂಸ್ಕಾರಕೋಶವನ್ನು ಸಿದ್ಧಗೊಳಿಸುವ ಭಿತ್ತಿಯಾಗಿ ಪರಿಣಮಿಸುತ್ತವೆ.

ಅಸಂಖ್ಯರೂಪಧಾರಿಯಾದ ಸಚ್ಚಿದಾನಂದದ ಬೇರೆಬೇರೆ ಮುಖಗಳ ಜೀವ, ಜಗತ್ತು ಮತ್ತು ಈಶ್ವರ. ಕವಿದರ್ಶನಕ್ಕೆ ಇವೆಲ್ಲವೂ ಸತ್ಯ; ನಿತ್ಯಸತ್ಯದ ಬೇರೆ ಬೇರೆ ಪ್ರಕಾರಗಳಾದ ಲೀಲಾಸತ್ಯ. ಜಡವು ಜೀವವಾಗಿ, ಜೀವ ಮಾನವನಾಗಿ, ಮಾನವ ದೇವನಾಗುವುದೆ ಸೃಷ್ಟಿಯ ಪರಮಗಂತವ್ಯ. ಈಶ್ವರನು ಸಗುಣನೂ ಹೌದು, ನಿರ್ಗುಣನೂ ಹೌದು. ಈಶ್ವರನ ಸಗುಣವೂ ಕ್ರಿಯಾತ್ಮಕವೂ ಆದ ಶಕ್ತಿಯೆ ಋತಚಿನ್ಮಯೀ ಜಗನ್ಮಾತೆ ಅಥವಾ ಋತಚಿತ್. ವಿಶ್ವದ ಚರಾಚರ ಸೃಷ್ಟಿಯೆಲ್ಲವೂ ಆಕೆಯ ಲೀಲಾವಿಲಾಸ. ಜಗತ್ತೆಲ್ಲವೂ ಜಗನ್ಮಾತೆಯ ರೂಪವಾದರೂ ಪ್ರಕೃತಿಯ ಹೊದಿಕೆಯಲ್ಲಿ ಅಂತರ್ಯಾಮಿಯಾಗಿರುವ ಪರಮಪುರುಷನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೆ ಜೀವದ ಗುರಿ.

ಜೀವಿಜೀವಿಗಳ ಹೃದಯದಲ್ಲಿ ಸ್ಥಿತನಾಗಿರುವ ಆ ಅಂತರತಮನಾದ ಗುರು, ‘ಜುಮಜನುಮ ಶತಕೋಟಿ ಸಂಸ್ಕಾರ ಪರಮ ಚರಮ ಸಂಸ್ಕಾರ!’ ಆತನೆ ಆತ್ಮದ ತಮಸ್ಸನ್ನು ಪರಿಹರಿಸುತ್ತಾನೆ. ಅವನಿಗೆ ಶರಣಾಗಿ ಅವನು ತೋರಿದ ದಾರಿಯಲ್ಲಿ ನಡೆದರೆ ಭಯವಿಲ್ಲ. ಆದ್ದರಿಂದ ಪೂರ್ಣ ಸಮರ್ಪಣೆಯೆ ಶಾಂತಿಯ ದಿವ್ಯಧಾಮ. ಪ್ರಾರ್ಥನೆ, ಧ್ಯಾನ, ಉದ್ಧಾರದ ಆಸಕ್ತಿ-ಇವೆಲ್ಲ ಮಾನವನನ್ನು ಸಾಕ್ಷಾತ್ಕಾರದತ್ತ ಕರೆದೊಯ್ಯುತ್ತವೆ.

ಕವಿ ಸದಾ ತತ್ತ್ವಶಿಖರಗಳಲ್ಲಿ ಮಾತ್ರ ನಿವಾಸಿಯಾಗುತ್ತಾನೆಂದು ತಿಳಿಯಬಾರದು, ಸಂಸಾರದ ಸುಖದುಃಖ ಕಷ್ಟಕಾರ್ಪಣ್ಯಗಳಲ್ಲಿಯೂ ಅವು ಪ್ರವಾಸಿಯೆ. ಆದರೆ ಅವನ ಕಾಣ್ಕೆ ಬೇರೆ. ಅನುದಿನದ ಸಂಸಾರದಲ್ಲಿ, ಹೆಣ್ಣುಗಂಡಿನ ಬಾಳಿನ ಸರಸವಿರಸಗಳಲ್ಲಿ, ಸಾಮಾಜಿಕ ಜೀವನದ ಶೋಕತಾಪಗಳಲ್ಲಿ, ಪ್ರಪಂಚದ ವಿವಿಧ ಪ್ರಕಾರವಾದ ರಾಜಕೀಯ ಘಟನೆಗಳಲ್ಲಿ ಅವನು ಭಗವಂತನ ಲೀಲಾವಿನ್ಯಾಸಗಳನ್ನೆ ಕಾಣುತ್ತಾನೆ.

ಪ್ರಕೃತಿಯಾರಾಧಾನೆಯಲ್ಲಿ ಪರಮನಾರಾಧನೆಯನ್ನು ಕಾಣುವ ಕವಿಗೆ ಪ್ರಕೃತಿ ಪರಮಾತ್ಮನ ರಸಾನಂದದ ಬೃಹತ್ ಪ್ರತಿಮೆಯಾಗುತ್ತದೆ, ಮಹತ್ ಪ್ರತಿಮೆಯಾಗುತ್ತದೆ. ಅಲ್ಲಿ ಸಕಲಾರಾಧನ ಸಾಧನ ಬೋಧನದ ರಸಸಿದ್ಧಿ ಲಭಿಸುತ್ತದೆ.

ಇಂತಹ ದರ್ಶನದಿಂದ ಸಮನ್ವಿತವಾದ ಕವಿಗೆ ಬಂಧನದ ನಾಡಿಯಲ್ಲಿ ಮುಕ್ತಿನದಿ ಹರಿವುದೂ ಋತದ ನಿಮಯದಲ್ಲಿ ಪಾಪಿಗೆ ಉದ್ಧಾರವಿರುವುದೂ ಗೋಚರವಾಗುತ್ತದೆ. ಈ ಜಗತ್ತು ಅತಿಮಾಸನದಲ್ಲಿ ಪ್ರತಿಷ್ಠಿತವಾಗಲು ಕಾಲಬೇಕು. ಈಗ ಆಗಿರುವ ಉದ್ಧಾರಕ್ಕಿಂತ ಸಹಸ್ರಪಾಲು ಆಗುವ ಉದ್ಧಾರವಿದೆ. ಆ ಉದ್ಧಾರದ ಆಸಕ್ತಿ ಚಿರಜಾಗ್ರತವಾಗಬೇಕು. “ಭ್ರಮಾಶೀಲವಾಗಿ ಪರಿಭ್ರಮಿಸುತ್ತಿರುವ ಚಿತ್ತಕ್ಕೆ ಇಂದು ಸ್ಥೈರ್ಯ, ಶಮೆ, ತುಷ್ಟಿ, ಪ್ರಸನ್ನತೆ, ಮತಿಗೌರವ, ವಿಶ್ವಪ್ರೇಮ, ಆತ್ಮಪ್ರತ್ಯಯ-ಇವು ಬೇಕು. ಆತ್ಮಶ್ರೀಗೆ ಮೊದಲನೆಯ ಸ್ಥಾನವೂ, ರಸಪೂರ್ಣವಾದ ಸಂಸ್ಕೃತಿಗೆ ಎರಡನೆಯ ಸ್ಥಾನವೂ, ಅಭ್ಯುದಯಕರವಾದ ಸಾಮಾಜಿಕ ನಾಗರಿಕತೆಗೆ ಮೂರನೆಯ ಸ್ಥಾನವೂ ಇವು ಮೂರಕ್ಕೂ ಆಧಾರವೂ ನಿವಾಸವೂ ಆಗಿ ಅತ್ಯಂತ ಅವಶ್ಯಕವಾದರೂ ಭಿತ್ತಿಸದೃಶ ಮತ್ತು ಸಾಧನರೂಪ ಮಾತ್ರವಾಗಿರುವ ರಾಜಕೀಯಕ್ಕೆ ಕೊನೆಯ ನಾಲ್ಕನೆಯ ಸ್ಥಾನವೂ ದೊರಕುವುದರಲ್ಲಿ ಸಮಷ್ಟಿಯ ಹಿತವಿದೆ.”[2] ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ ಇವುಗಳೆ ಕವಿಯ ದರ್ಶನದ ಮುಖ್ಯ ಮಂತ್ರಗಳಾಗಿವೆ.

ಮೇಲೆ ಹೇಳಿದ ಕೆಲವು ಅಭಿಪ್ರಾಯಗಳಿಗೆ ನಿದರ್ಶನರೂಪವಾಗಿವೆ, ಈಗ ವಾಚನ ಮಾಡುವ ಕವಿತೆಗಳು.

ಕವಿಗೆ ಲೋಕವೆಲ್ಲ ಗುರು. ಲೋಕಗುರುಗಳೆಲ್ಲ ಪೂಜ್ಯರೆ. ಅವ ದರ್ಶನ ಸಿದ್ಧಿಗೆ ಅವರೆಲ್ಲರೂ ದೀಕ್ಷೆ ಕೊಡುತ್ತಾರೆ.

*ಮನ್ಮನೋಮಂದಿರಕೆ, ಓ*
*ಲೋಕಗುರುಗಳೆಲ್ಲ ಬನ್ನಿ!,*
*ಬನ್ನಿ, ಬನ್ನಿ, ಬನ್ನಿ!-*

*ತುಳಿಯೆ ನಿಮ್ಮ ಪದತಲ*
*ದಲದಲದಲ ಅರಳ್ವುದೆನ್ನ*

*ಶಿರಃಕಮಲ ಕುಟ್ಮಲ!*
*ತಮೋತಿಮಿರವಳಿಯಲಲ್ಲಿ*
*ಪರಂಜ್ಯೋತಿ ಬೆಳಗಲಿ;*
*ಋತದ ಶಿವದ ಆನಂದದ*
*ಚಿದ್ ವಿಭೂತಿ ತೊಳಗಲಿ.*

*ಮನ್ಮನೋಮಂದಿರಕೆ, ಓ*
*ಲೋಕಗುರುಗಳೆಲ್ಲ ಬನ್ನಿ!*
*ಬನ್ನಿ, ಬನ್ನಿ, ಬನ್ನಿ!***[3]**

ಕವಿಯ ಜೀವನವನ್ನು ದೇವನೆಡೆಗೆ ಆಕರ್ಷಿಸುವ ಸಾಧನಗಳಲ್ಲಿ ಮೊದಲನೆಯದೆ ನಿಸರ್ಗಸೌಂದರ್ಯ. ಅದು ಅವನನ್ನು ಪ್ರತಿಪಥದಲ್ಲಿ ಮುಂದೆ ಮುಂದೆ ಕೊಂಡೊಯ್ಯುತ್ತದೆ. 'ತಾವರೆಯ ತೇರು' ಎಂಬ ಈ ಕವನದಲ್ಲಿ ಅದು ನಿದರ್ಶಿತವಾಗಿದೆ:

*ಭಾವನೆಯ ಬಾನಿನಲಿ ಇಂದ್ರಧನುರ್ಯಾನದಲಿ*
*ನಿನ್ನೊಡನೆ ಕುಳಿತು ನಾ ತೇಲುತಿರುವೆ;*
*ಮೋಹನದ ಮುಗುಳನಗೆಯನು ಬೀರ, ಸುಂದರಿಯೆ,*
*ನೀನಗ್ನಿಮೇಘವನೆ ಹೋಲುತಿರುವೆ!*
*ನಾನೇರಿದೆತ್ತರವ ನೋಡಿ*
*ಚಿತ್ತ ಹಿಗ್ಗುತಿದೆ;*
*ಬೀಳುವೆನೊ ಎಂಬಳುಕು ಮೂಡಿ*
*ಮತ್ತೆ ಕುಗ್ಗುತಿದೆ.*
*ನಿನ್ನ ಮೊಗದಲಿ ಮಾಸದಿಹ ಮುಗುಳುನಗೆಯೊಂದು*
*ಸರ್ವದಾ ನವಿಲಂತೆ ನಲಿಯುತಿಹುದು.*
*ನಿನ್ನ ಮೌನದ ಅರ್ಥವೇನಿಹುದೊ ಆದರಿಯೆ*
*ನಮ್ಮ ತಾವರೆ ತೇರು ತೇಲುತಿಹುದು!*
*ನೀನಂದು ಕನಕ ರಥವನು ತಂದು ಬಾ ಎಂದು*
*ಕರೆದಂದು ನಾನು ದೂಳಾಡುತಿದ್ದೆ.*

*ಹೊಂಬಿಸಲು ಹೊಮ್ಮಿತ್ತು, ಖಗಗಾನ ಚಿಮ್ಮಿತ್ತು,*
*ಕಣ್ದೆರೆದುಕೊಂಡಿತ್ತು ಜಗದ ನಿದ್ದೆ!*
*ತೇರಿನಾ ಬಣ್ಣವು ಕಂಡೆ*
*ಮೊದಲು ಮರುಳಾದೆ;*
*ಹುಡುಗಾಟ ಎಂದಂದುಕೊಂಡೆ*
*ಅದನೇರಿ ಹೋದೆ!*
*ಎಲ್ಲಿಗೊಯ್ಯುವೆ ಎಂದು ನಾ ಕೇಳಲಿಲ್ಲಂದು,*
*ಕೇಳಿದರೆ ನೀನು ನುಡಿಯದಿಹೆ ಇಂದು.*

*ಬರಿದೆ ಬೆರಳೆತ್ತಿ ತೋರುವೆ; ಮುಂದೆ ನೋಡಿದರೆ*
*ಹಬ್ಬಿಹುದು ನೀಲಿಮೆಯ ಶೂನ್ಯಸಿಂಧು!*

*ಶಶಿ ಸೂರ್ಯ ಗ್ರಹ ನಿಚಯ ತಾರಾಖಚಿತ ನಭದಿ*
*ಹಾರುತಿದೆ ನಮ್ಮೀ ಕಲಾವಿಮಾನ;*
*ಮುಂದೆನಿತು ದೂರಕೋ? ಎಂದಾವ ತೀರಕೋ?*
*ತೇಲುತಿಹುದೀ ನಿನ್ನ ಕಮಲಯಾನ!*
*ಸಂಶಯದಿ ಕಂಪಿಸುವುದೊಮ್ಮೆ*
*ನನ್ನಾತ್ಮಪಕ್ಷಿ;*
*ನಿನ್ನಯ ಮುಗುಳ್ನಗೆಯ ನೆಮ್ಮೆ*
*ನನಗೆ ಗುರುಸಾಕ್ಷಿ!*
*ಹಗಲಿರುಳು ಬೆಳಗು ಬೈಗುಗಳುರುಳಿ ಸಾಗುತಿವೆ*
*ಗಗನದಲಿ ರಂಗೆರಚಿ ಬಂದು ನಿಂದು!*
*ನಿನ್ನ ಸದ್ದಿಲಿ ಸನ್ನೆಯಲಿ ಮುಂದೆ ನೋಡಿದರೆ*
*ಹಬ್ಬಿಹುದು ನೀಲಿಮೆಯ ಶೂನ್ಯಸಿಂಧು!*[4]

ದೇವನೆಡೆಗೆ ಸರಿಯುವ ಜೀವದ ಪಯಣ ಎಡರುತೊಡರುಗಳಿಂದ ತುಂಬಿರುತ್ತದೆ. ಆಗ ಕವಿ ಆರ್ತನಾಗಿ ಪ್ರಾರ್ಥಿಸುತ್ತಾನೆ:

*ಸೋತು ಬಂದೆನೊ, ಗುರುವೆ, ನಿನ್ನ ಬಳಿಗೆ;*
*ಸೋತ ಜೀವವನಾತುಕೋ ಒಂದು ಗಳಿಗೆ!*

*ಅರಿಯ ಹಿರಿಸರಳು ಮರುಮೊನೆಗೊಂಡ ಗಾಯದಲಿ*
*ಸುರಿಯುತಿದೆ ತೊರೆಯಂತೆ ಬಿಸಿನೆತ್ತರು;*
*ಗಿರುಗಿರನೆ ಗಾಳಿಯಲಿ ತಿರುಗುತಿಹ ಸರಳಗರಿ*
*ಕೊರೆಯುತಿಹುದೆದೆಯಲ್ಲಿ ಉರಿಹೊತ್ತಿಸಿ!*

*ಎತ್ತ ನೋಡಿದರೆನಗೆ ಆಶ್ರಯವೆ ತೋರದಿದೆ;*
*ಇತ್ತು ಕೃಪೆಯಾಶ್ರಮದಿ ತಾವನೆನಗೆ*
*ಹೆತ್ತ ಕಂದನ ಬಗೆಯ ಹೊತ್ತ ದುಗುಡವ ಹರಿಸಿ*
*ಮತ್ತೆ ನನ್ನನು ಕಳುಹೊ ರಣರಂಗಕೆ!*

*ಗೌರವ ರಣಾಂಗಣದಿನಳುಕಿ ಬಂದವನಲ್ಲ,*
*ಪೌರುಷ ವಿಹೀನತೆಯ ಪಾಪಿಯಲ್ಲ;*
*ಘೋರಸಂಗ್ರಾಮದಿಂ ಬಿಡುತೆ ಬೇಡುವನಲ್ಲ,*
*ವೈರಿಯನು ಗೆಲ್ಲದೈತರುವನಲ್ಲ!*[5]

ಆರ್ತನ ಪ್ರಾರ್ಥನೆ 'ನಾವಿಕ' ಎಂಬ ಕವನದಲ್ಲಿ ಮೈವೆತ್ತಿದೆ.

*ಕೈಬಿಟ್ಟರೆ ನೀ ಗತಿಯಾರೈ?*
*ಕಿರುದೋಣಿಯಿದು ಮುಳುಗದೇನೈ?*
*ಮೇರೆಯರಿಯದ ಕಡಲಿದು ಗುರುವೆ,*
*ಘೋರೆಂದಲೆಗಳು ಏಳುತಿವೆ;*
*ನೊರೆನೊರೆಯಾಗಿಹ ತೆರೆತೆರೆಯಲ್ಲಿ*
*ಮೃತ್ಯುವು ನೃತ್ಯವ ಮಾಡುತಿದೆ!*
*ಉತ್ತರಮುಖಿಯು ಪುಡಿಪುಡಿಯಾಗಿದೆ!*
*ಗಾಳಿಯು!ಮೋಡವು!ಮಿಂಚುತಿದೆ!*
*ಕತ್ತಲು ಕವಿದಿದೆ, ಚಿತ್ತವದಳುಕಿದೆ,*
*ಕಾಣದು ಕಣ್ಣಿಗೆ ಧ್ರುವತಾರೆ!*

*ಹರಿದಿದೆ ಕಟ್ಟು, ಮುರಿದಿದೆ ಹುಟ್ಟು,*
*ಬಳಲಿಹೆ, ಬೆದರಿಹೆ ಕಂಗೆಟ್ಟು!*
*ಸೋದರರಿಬರು ಮುಳುಗಿದ ಚಿಹ್ನೆಯ*
*ಬರಿಯ ದೋಣಿಗಳು ತೋರುತಿವೆ!***[6]**

ಕವಿಯ ಧ್ಯೇಯ ‘ಭಗವತ್ ಸ್ವರೂಪವನ್ನು ಅನುಸಂಧಾನಮಾಡುವುದು.

*ನಿನ್ನ ಬಾಂದಳದಂತೆ*
*ನನ್ನ ಮನವಿರಲಿ;*
*ನಿನ್ನ ಸಾಗರದಂತೆ*
*ನನ್ನ ಎದೆಯಿರಲಿ.*
*ನಿನ್ನ ಸುಗ್ಗಿಯ ತೆರದಿ*
*ನನ್ನ ಸುಗ್ಗಿಯ ತೆರದಿ*
*ನನ್ನ ಸೊಬಗಿರಲಿ;*
*ನಿನ್ನ ಲೀಲೆಯ ತೆರದಿ*
*ನನ್ನ ಬಾಳಿರಲಿ.*

*ನಿನ್ನ ಬಲವಿರುವಂತೆ*
*ನನ್ನ ಬಲವಿರಲಿ;*
*ನಿನ್ನ ತಿಳಿವಿರುವಂತೆ*
*ನನ್ನ ತಿಳಿವಿರಲಿ.*

*ನಿನ್ನೊಲ್ಮೆಯಿಂದದಲಿ*
*ನನ್ನೊಲ್ಮೆಯಿರಲಿ,*
*ನೀನೆ ನನಗಿರಲಿ.*

*ನಿನ್ನಾತ್ಮದಾನಂದ*
*ನನ್ನದಾಗಿರಲಿ;*

*ನಿನ್ನೊಳಿರುವಾ ಶಾಂತಿ*
*ನನ್ನೆದೆಗೆ ಬರಲಿ.*[7]

ಜಿಜ್ಞಾಸುವಾಗಿ ಮುಂದಿನ ಜೀವನದ ದಾರಿ ಯಾವುದೆಂದು ಚಿಂತಿಸುವುದು.

*ಮೊದಲನರಿಯದಾದಿಯಿಂದ*
*ಆದಿ ತಿಮಿರದುದರದಿಂದ*
*ಮೂಡಿ ಬಂದೆನು:*

*ಯಾರ ಬಯಕೆ ಎಂಬುದರಿಯೆ.*
*ಏಕೆ ಎಲ್ಲಿಗೆಂಬುದರಿಯೆ.*
*ಮುಂದೆ ಹರಿಯುವೆ!*

*ಮಲಗಿ ಕಲ್ಲು ಮಣ್ಣುಗಳಲಿ*
*ಜಡ ಸುಷುಪ್ತಿಯಲ್ಲಿ ಬಳಲಿ*
*ಯುಗಗಳಾದುವು!*
*ಸಸ್ಯಗಳಲಿ ಕನಸ ಕಂಡು*
*ಹುಟ್ಟು ಬಾಳು ಸಾವನುಂಡು*
*ಕಲ್ಪ ಹೋದುವು!*

*ಮರಳಿ ಮೈಯ ತಿಳಿದು ತಿರುಗಿ*
*ಮಿಗಗಳಂತೆ ಮೂಡಿ ಮರುಗಿ*
*ಬಹಳ ಬಳಲಿದೆ.*
*ಇಂದು ಮನುಜ ಜನ್ಮದಲ್ಲಿ*
*ಬಂದು ಹಾಡುತಿರುವೆನಿಲ್ಲಿ !*
*ಮುಂದಕೆಲ್ಲಿಗೆ?*[8]

ಜ್ಞಾನಪಥದಲ್ಲಿ ಮುಂಬರಿದಾಗ ಪೂರ್ಣಸಮರ್ಪಣೆ.

*ನಿನ್ನ ಪದಕಮಲದಲಿ ಮನೆ ಮಾಡಿರುವ ನನಗೆ*
*ಆ ಸ್ಥಾನ ಈ ಸ್ಥಾನ ಎಲ್ಲವಾಸ್ಥಾನ!*
*ಅಲಿಲ್ಲಿ ಎನಲೇನು? ನೀನೆ ಅಡಿಯಿಡುವಲ್ಲಿ*
*ದಿವ್ಯ ಪದವಿಗಳಲ್ತೆ ಮಾನಾವಮಾನ?*

*ಬೆಟ್ಟಗಳನೇರುವೆಯೊ? ಕಣಿವೆಗಳನಿಳಿಯುವೆಯೊ?*
*ಕೆಸರುಸುಬುಬಳೊಳಾಡಿ ವಿಹರಿಪೆಯೊ ನೀನು?*
*ಇಲ್ಲಿ ಸಂಚರಿಸಲ್ಲಿ ಚರಿಸದಿರೆನಲು ನನಗೆ*
*ನಿನ್ನ ಲೀಲೆಗೆ ಗೆರೆಯನೆಳೆವ ಹಕ್ಕೇನು?*

*ಎಲ್ಲಿ ನೀ ಪದವಿಡುವೆ ಅಲ್ಲೆ ಉತ್ತಮ ಪದವಿ;*
*ನಿನ್ನ ಪದವಲ್ಲದಾ ಪದವಿಯೂ ಹೀನ;*
*ನಿನ್ನಡಿಯ ಪುಡಿಯ ಬಡತನವೆ ಕಡವರ ಕಣಾ;*
*ನಿನ್ನಡಿಗೆ ದೂರವಿರೆ ಧನಿಕನೂ ದೀನ!***[9]**

ಜೀವನದ ಪರಮಗುರಿಯನ್ನು ಕುರಿತ ದರ್ಶನಾತ್ಮಕ ವಿವರಣೆ 'ಹಾರೈಸು' ಎಂಬ ಕವನದಲ್ಲಿ ಮೂಡಿದೆ.

*ಹಾರೈಸು ಹಾರೈಸು, ಜೀವ:*
*ಹಾರೈಸು ನೀನಾಗುವನ್ನೆಗಂ ದೇವ!*

*ಹಾರೈಸಿ ಹಾರೈಸಿ ಹಾರೈಸಿ*
*ಪ್ರಾಣಿಗುದಿಸಿತು ಮನೋಜ್ಞಾನ;*
*ಹಾರೈಸಿ ಹಾರೈಸಿ ಹಾರೈಸಿ*
*ಸಿದ್ಧಿಯಾಯ್ತಾತ್ಮ ವಿಜ್ಞಾನ!*

*ಹಾರೈಸಿ ಹಾರೈಸಿ ಹಾರೈಸಿ*
*ಹಸುರನುಸುರ್ದುವೊ ಕಲ್ಲುಮಣ್ಣು;*

*ಹಾರೈಸಿ ಹಾರೈಸಿ ಹಾರೈಸಿ*
*ಕುರುಡು ಜಡಕುದಿಸಿತಯ್ ಕಣ್ಣು!*

*ಹಾರೈಸಿ ಹಾರೈಸಿ ಹಾರೈಸಿ*
*ಚಿತ್ ಉರುಳ್ವುದು ಸುತ್ತಿಸುರಳಿ;*
*ಹಾರೈಸಿ ಹಾರೈಸಿ ಹಾರೈಸಿ*
*ಮೃತ್ ಅರಳ್ವುದೊ ಅತ್ತೆ ಮರಳಿ!***[10]**

ಇಂತಹ ಜೀವನದೃಷ್ಟಿಗೆ ಪೂರ್ಣತೆಯಿಂದಲೆ ಪರಮಸುಖವೆಂದು ಗೋಚರಿಸುತ್ತದೆ.

*ಬೇಸರದ ಬಂದಿಳಿಕೆ ಮನದ ಮಾವಿನ ಮರಕೆ*
*ಹಿಡಿದದನು ತಿರುಗಿಸುವ ಮೊದಲೆ ಬೇವಿನತನಕೆ*
*ನಿನ್ನ ಜೀವವನು ದುಮುಕಿಸು ಜಗದ ಜೀವನಕೆ.*
*ತೊರೆಯಲ್ಲಿ ತೆರೆಯಾಗಿ ಹರಿಯಲದು ಸಾಗರಕೆ!*
*ಪಾಲ್ಗೊಂಡು ಬೇರೆ ನಿಲ್ಲುವ ನೀರ್ಗೆ ಪರಮಗತಿ*
*ಪಾಚಿ; ಹೊಳೆಗಿಳಿಯಲ್ಕೆ ತಾನೆ ಸಂಜೀವಸುಧೆ;*
*ಕೋಟಿ ವೀಚಿಗಳೊಡನೆ ಕುಣಿಯುವಾನಂದವಿದೆ;*
*ತನ್ನಲ್ಪ ಗಾನಕ್ಕೆ ಕಲ್ಲೋಲ ಸರ್ವ ರುತಿ*
*ಶ್ರುತಿಯಾಗುವೊಂದತುಲ ಸಂಘಕೃಪೆ ಜಡತನಂ*
*ಸ್ವಾರ್ಥದ ತಮೋನಿದ್ರೆ: ತಳ್ಳಿ ತೊರೆದೆದ್ದೇಳು.*

*ಜೀವೋತ್ಸವದ ತೇರ್ಗೆ ಗಾಲಿಯಾದೊಡೆ ಬಾಳು*
*ಸಾರ್ಥಕಂ, ಸುಂದರಂ, ಮಧುರ ಚಿರನೂತನಂ*
*ನೀರಸತೆಗಿಂ ಪಾಪಮಿಲ್ಲ. ರಸಕೆಣೆಯಾಗಿ*
*ಪುಣ್ಯಮಿಲ್ಲೆನೆ-ಪೂರ್ಣಯೋಗಿಯೆ ಪರಮಭೋಗಿ!**[11]***

ಕವಿಯ ದರ್ಶನ ಸಂಸಾರವನ್ನೂ ಜಗನ್ಮಾತೆಯ ಲೀಲೆಯೆಂದು ಕಾಣುತ್ತದೆ.

*ಜಗದೀಶ್ವರನೆ ವಿಶ್ವ ಸಂಸಾರಿಯಾಗಿರಲು*
*ಸಂಸಾರ ಪಾಶವೆಂದೆನಬೇಡವೈ.*
*ಹುಟ್ಟು ಹಾಕಲು ನಿನಗೆ ಬಾರದಿರೆ, ಕೂಡದಿರೆ,*
*ಬರಿದೆ ನೀಂ ದೋಣಿಯನು ಶಪಿಸಬೇಡೈ!*

*ಮಾಡುವುದನೆಲ್ಲ ತನ್ನಾತ್ಮ ಸಾಧನೆಯೆಂದು*
*ಕರ್ಮಗೈ; ಅದುವೆ ಪೂಜೆಯ ಮರ್ಮವೈ.*
*ಶಿವನ ಕಾರ್ಯದೊಳಾವು ಶಿರಬಾಗಿ ನೆರವಾಗೆ*
*ನಮಗದುವೆ ಪರಮ ಪಾವನ ಧರ್ಮವೈ.*

*ಹಸುಳೆಯನು ಮೀಯಿಸಲು ಹರನಿಗಭಿಷೇಕವದು;*
*ಶಿಶುವಿಗೂಡಿಸೆ ಶಿವಗೆ ನೈವೇದ್ಯವೈ!*
*ಕಂದನಲಿ ಶಿವನ ಕಾಣುವ ಬಂಧನವೆ ಮುಕ್ತಿ;*
*ತಪಕೊಲ್ಲದುದು ತಾಯ್ತನಕೆ ಸಾಧ್ಯವೈ!**[12]***

ಈ ಪೂರ್ಣದೃಷ್ಟಿಯ ದರ್ಶನ ‘ಋತಚಿನ್ಮಯೀ ಜಗನ್ಮಾತೆಗೆ’ ಎಂಬ ಕವನದಲ್ಲಿ ನಿದರ್ಶಿತವಾಗಿದೆ.

*ಓಂ ಸಚ್ಚಿದಾನಂದ ತ್ರಿತ್ವಮುಖವಾದ ಪರಬ್ರಹ್ಮದಲ್ಲಿ*
*ಅಭವದೊತ್ತಾದೆ, ಭವದ ಬಿತ್ತಾದೆ, ಋತದ ಚಿತ್ತಾದೆ ನೀ;*
*ಇಳಿದು ಬಾ ಇಳೆಗೆ, ತುಂಬಿ ತಾ ಬೆಳಗೆ ಜೀವಕೇಂದ್ರದಲ್ಲಿ;*
*ಮತ್ತೆ ಮುಡಿ ಬಾ ಒತ್ತಿ ನೀನೆನ್ನ ಚಿತ್ತ ಪೃಥಿವಿಯಲ್ಲಿ.*

*ಋತದ ಚಿತ್ತಾಗಿ ವಿಶ್ವಗಳ ಸೃಜಿಸಿ ನಡಸುತಿಹ ಶಕ್ತಿಯೆ,*
*ಅನ್ನ ಪ್ರಾಣಗಳ ಮನೋಲೋಕಗಳ ಸೂತ್ರಧರ ಯುಕ್ತಿಯೆ,*
*ಅಖಿಲ ಬಂಧನದ ಹೃದಯದಲ್ಲಿ ಅವಿನಾಶಿ ಆಸಕ್ತಿಯೆ,*
*ನಿನ್ನ ಅವತಾರವೆನ್ನ ಉದ್ಧಾರ:ಬಾ, ದಿವ್ಯ ಮುಕ್ತಿಯೆ.*

*ಅವಿಭಕ್ತವಾಗಿ ಸುವಿಭಕ್ತದಂತೆ ತೋರುತಿರುವ ಮಾಯೆ,*
*ಪ್ರಕೃತಿ ಪುಷರಿಗೆ ನಿತ್ಯಜನ್ಮವನು ನೀಡುತಿರುವ ತಾಯೆ,*
*ಕಾಲದೇಶ ಆಕಾಶಕೋಶಗಳನೂದುತಿರುವ ಛಾಯೆ,*
*ಅನೃತದಲ್ಲಿ ಋತವಾಗಿ ಸಂಭವಿಸು, ಸಾವು ನೋವು ಸಾಯೆ.*

*ಎಲ್ಲವನು ಮಾಡಿ ಎಲ್ಲರೊಳಗೂಡಿ ನೀನೆಯೆಲ್ಲವಾದೆ.*
*ಜ್ಯೋತಿಯಾದರೂ ತಮೋಲೀಲೆಯಲಿ ಜಡದ ಮುದ್ರೆಯಾದೆ.*
*ಎನಿತು ಕರೆದರೂ ಓಕೊಳ್ಳದಿರುವ ಅಚಿನ್ನಿದ್ರೆಯಾದೆ:*
*ಬೆಳಗಿ ನನ್ನಾತ್ಮಕಿಳಿದು ಬಾ, ತಾಯಿ, ನೀನೆ ಬ್ರಹ್ಮಬೋಧೆ.*

*ಮರೆವು ನೀನೆ ಮೇಣರಿವು ನೀನೆ ಮೇಣ್ ಗುರುವು ನೀನೆ, ದೇವಿ.*
*ರೋಗಶಕ್ತಿ ನೀನೌಷಧಿಯ ಶಕ್ತಿ; ಕೊಲುವೆ ಕಾವೆಯೋವಿ.*
*ಮಾವಿನಲ್ಲಿ ಸಿಹಿ, ಬೇವಿನಲ್ಲಿ ಕಹಿ; ನಿನ್ನ ಇಚ್ಛೆಯಂತೆ*
*ಗಾಳಿ ಸೇರಿ ನೀರಾಗಿ ತೋರಲೀ ಪ್ರಕೃತಿ ನಿಯಮವಂತೆ!*

*ಹುಲ್ಲು ಬೆಳೆವಲ್ಲಿ, ನೆಲ್ಲು ಮೊಳೆವಲ್ಲಿ, ಕಾಯಿ ಪಣ್ಣುವಲ್ಲಿ,*
*ಗೂಡುಕಟ್ಟಿ ತಾಯ್ ಮೊಟ್ಟೆಯಿಟ್ಟು ಮರಿಮಾಡಿ ಸಲಹುವಲ್ಲಿ,*
*ಮಮತೆಯಂತೆ ಮೇಣ್ ಕಾಮದಂತೆ ಮೇಣ್ ಪ್ರೇಮಭಾವದಲ್ಲಿ*
*ನಿನ್ನ ಚಿಚ್ಛಕ್ತಿ ತನ್ನ ನಿತ್ಯಸದ್ ರಸವ ಸವಿವುದಿಲ್ಲಿ !*

*ಏಳು ಲೋಕಗಳನಿಳಿದು ದುಮುಕಿ ಜಡವಾಗಿ ಕಡೆಗೆ ನಿಂದೆ;*
*ಜಡದ ನಡುವೆ ಜೀವವನು ಕಡೆದೆ ಚಿತ್ತಪಶ್ಯಕ್ತಿಯೆಂದೆ;*
*ಜೀವದಿಂದೆ ಮನಸಾಗುತರಳಿ ಪರಿಣಾಮ ಪಡೆದು ಬಂದೆ;*
*ಮಾನವ ಮೀರ್ದ ವಿಜ್ಞಾನವನು ತೋರೆ ತೇರನೇರು ಇಂದೆ.*

*ಗಾಳಿಗುಸಿರು ನೀ ಬೆಂಕಿಗುರಿಯು ನೀನುದಕಕದರ ಜೀವ"*
*ಅಗ್ನಿ ಇಂದ್ರ ವರುಣಾರ್ಕ ದೇವರನು ಮಾಡಿ ನೋಡಿ ಕಾವ*
*ಶಿವನ ಶಕ್ತಿ ನೀ, ವಿಷ್ಣು ಲಕ್ಷ್ಮೀ ನೀ ಚತುರ್ಮುಖನ ರಾಣಿ;*
*ದಿವ್ಯವಿಜ್ಞಾನ ನನ್ನೊಳುದ್ಭವಿಸೆ ಮತಿಗಾಗಮಿಸು, ವಾಣಿ!*

*ಮೃತ್ಯುರೂಪಿ ನೀನಮೃತರೂಪಿ ನೀನಖಿಲ ಜನ್ಮದಾತೆ;*
*ಪರಾಪ್ರಕೃತಿ ನೀ ನಿನ್ನ ಮಾಯೆಯಲಿ ಸಕಲ ಜೀವಭೂತೆ.*
*ನಿನ್ನ ಕೃಪೆಯಿಲ್ಲದಿದ್ದರೆಮಗೆಲ್ಲಿ ಮುಕ್ತಿ, ಜಗನ್ನಾಥೆ?*
*ನಿನ್ನ ಋತಚಿತ್ತನೆಮಗೆ ಕೃಪೆಯಿತ್ತು ಕಾಯಿ, ದಿವ್ಯಮಾತೆ.*

*ಹೃದಯಪದ್ಮ ತಾನರಳೆ ಕರೆವೆ ಬಾರಮ್ಮ ಬಾ, ಇಳಿದು ಬಾ!*
*ಮನೋದ್ವಾರ ತಾ ಬಿರಿಯೆ ಕರೆವೆ, ಜಗದಂಬೆ, ಬಾ ಇಳಿದು ಬಾ!*
*ಅಗ್ನಿಹಂಸ ಗರಿಗೆದರೆ ಕರೆವೆ, ಬಾ ತಾಯಿ, ಬಾ, ಇಳಿದು ಬಾ!*
*ಚೈತ್ಯಪುರುಷ ಯಜ್ಞಕ್ಕೆ ನೀನೆ ಅಧ್ವರ್ಯು ಬಾ, ಇಳಿದು ಬಾ!*
*ಓಂ ಶಾಂತಿಃ ಶಾಂತಿಃ ಶಾಂತಿಃ***[13]**

*ಇಂತಹ ಪೂರ್ಣದೃಷ್ಟಿಯಿಂದ ದೀಪ್ತವಾದ ಕವಿಚೇತನ ಸರ್ವನಾಶದಲ್ಲಿಯೂ ಆಶಾವಾದಿ. ಅದಕ್ಕೆ ಅಧೈರ್ಯ, ಭಯ, ಹತಾಶೆ-*
*ಎಂಬುದಿಲ್ಲ. ಪಾಂಚಜನ್ಯದಲ್ಲಿರುವ 'ಮಲ್ಲಗೀತೆ; ಎಂಬ ಕವನ ಈ ದೃಷ್ಟಿಯಿಂದ ಪ್ರತಿನಿಧಿಸುತ್ತದೆ.*

ಒಳ್ಳಿತಾಗುವುದೆಲ್ಲ! ಬೇವು ತುದಿಯಲಿ ಬೆಲ್ಲ!
ಮುಂದೆ ನಡೆ, ತೀರ್ಥವಿಹುದೆಲ್ಲ ಹಾದಿಗಳು ಕೂಡುವೆಡೆಯಲ್ಲಿ!
ಬೆಳ್ಳಗಿರೆ ಹಾಲಲ್ಲ; ಬಲ್ಲವನೆ ತಾ ಬಲ್ಲ;
ಕೇಳಯ್ಯ ನಾನೊಬ್ಬ ಮಲ್ಲನೀ ಜೀವನದ ಗರಡಿಯಲ್ಲಿ

ಕಾವಿಯೋ ಖಾದಿಯೋ ಅಂತವೋ ಆದಿಯೋ?
ಯಾವುದೋ ಹಾದಿಯೊಂದನು ಹಿಡಿದು ನಡೆಯಲಿದ್ದೆಡೆಯುಂ ಸಿದ್ಧಿ!
ಎಲ್ಲ ನದಿಗಳು ತುದಿಗೆ ಜಾರುವುವು ಜಲನಿಧಿಗೆ-
ಎಂಬ ತತ್ತ್ವವ ತಿಳಿದು ಸಮತೆಯಲಿ ಸಾಗುವುದೆ ಯೋಗಬುದ್ಧಿ!

ಸೋದರನೆ ಬಿಸಿಲಿಹುದೆ? ಹಾದಿಯಲಿ ಕೆಸರಿಹುದೆ?
ಹೊರೆ ಭಾರವಾಗಿದೆಯೆ? ನೆರೆಯ ಕರೆದವನ ಕೈಗದನು ನೀಡು.
ನಿದ್ದೆಗಳೆದಾ ವೇಳೆ ಮತ್ತೆ ಬೆನ್ನಿನ ಮೇಲೆ
ಹೊತ್ತು ನಡೆ ಕರ್ತವ್ಯವನು; ಮರಳಿ ಬಳಲಿದರೆ ನಿದ್ದೆಮಾಡು!

ನೆರಮೀವ ಮಿತ್ರನ್ಯೆ, ಜೊತೆ ದುಡಿವ ಪುತ್ರನ್ಯೆ,
ಯಜಮಾನನಿಗೆ ನೀನು ಹೊರೆಹೊರುವ ಕತ್ತೆಯೊಲು ದಾಸನಲ್ಲ!
ನಿನ್ನ ಸಾಹಸವೆಲ್ಲ ಅವನದಲ್ಲದೆ ಇಲ್ಲ;
ಗುಡಿಯ ಕಟ್ಟುವರೂ ಕಡೆಗೆ ದೇವರಹರಿದಕೆ ಮೋಸವಿಲ್ಲ!

ನಾಕ ನರಕಗಳೆಲ್ಲ ಪಾಪ ಪುಣ್ಯಗಳೆಲ್ಲ
ನಮ್ಮಾಶೆ ಭಯಗಳಲಿ ನಿಂತಿಹವು ತಮಗಿರದ ಕಾಲನೂರಿ!
ಒಂದು ಕಲ್ಲನು ಕಡೆದೆ; ಏನೊ ತಪ್ಪಿದೆ; ಒಡೆದೆ!
ಬಿಸುಡದನು ಓ ಶಿಲ್ಪಿ; ಮತ್ತೊಮ್ಮೆ ಯತ್ನಗೈಯದುವೆ ದಾರಿ!

ತಪ್ಪಿದರೆ ಏನೊರ್ಮೆ? ಅನುಭವಕೆ ಆದೆ ಪೆರ್ಮೆ
ತಪ್ಪಿದರೆ ತಪ್ಪಿಲ್ಲ; ತಪ್ಪಿನೊಳಳುಕಿ ನಿಲ್ಲಲದುವೆ ಪಾಪ!
ಬೀಳುವುದು ಹರಿವ ಹೊಳೆ; ಅದಕಿಹುದೆ ಕೊಳದ ಕೊಳೆ?
ನೀರುನಿಲ್ಲದೆ ಹರಿಯೆ ನಿರ್ಮಲದ ಗಂಗೆ, ನಿಲೆ ಮಲದ ಕೂಪ?

ಕಡಲ ಕಡೆಯಲು ಬೆದರೆ ನಿನಗೆ ಮರಣವೆ ಮದಿರೆ!
ಕಡಲ ಕಡೆ; ಸುಧೆಯ ಕುಡಿ: ಹರಿಹರರ ಮೀರಿ ಚಿರಜೀವಿಯಾಗು!
"ನಂಜುದಿಸಲೇನು ಗತಿ?-" ಅಂಜುವರೆ ಹ್ರಸ್ವಮತಿ?
ಅವನಿರುವುದದೆ ಕೆಲಸಕಾಗಿ; ನಂಜುಂಡನನು ಕರೆದು ಕೂಗು!

ಮುನ್ನೇಕೆ ಬಂದೆಯೋ ಇನ್ನಾವ ಮುಂದೆಯೋ?
ಆ ಮೂಲಚೂಲದಲಿ ಕಾಲಹರಣಣವ ಮಾಡಲಿಹುದೆ ಹೊತ್ತು?
ಯಾತ್ರೆಗೈತಂದಿರುವೆ; ಹೊರೆ ಹೊತ್ತು ನೊಂದಿರುವೆ;
ನೋಡಿದರೆ ಹಾದಿಯನು ಗುರಿ ದೂರವೆಂಬುದೂ ನಿನಗೆ ಗೊತ್ತು.

*ಇಂತಿರಲು ವಾದದಲಿ, ತಾರ್ಕಿಕರ ಮೋದದಲಿ,*
*ನನ್ನಿಯನು ಮುಟ್ಟಿನೋಡದೆ ಮಾತಿನೊಳೆ ಕಟ್ಟುವವರ ಕೂಡೆ*
*ಹೊತ್ತು ಕಳೆಯುವುದೇಕೆ? ಸಾಧಕನೆ, ಬಲು ಜೋಕೆ!*
*ಮಾಯೆಗಿಮ್ಮಡಿಮಾಯೆ ವಾದವೆಂಬುವ ಮಾಯೆ, ತಿಳಿದುನಮೋಡೆ!*

*ಬರಿಯ ನಂಬುಗೆ ಬೇಡ ಬರಿಯ ಸಂಶಯ ಬೇಡ,*
*ಹಿಂದನೂ ತೊರೆಯದೆಯೆ, ಇಂದನೂ ಮರೆಯದೆಯೆ ತೆರಳು ಮುಂದೆ,*
*"ಅವರಿವರ ಮತವಿರಲಿ, ನನ್ನ ಪಥ ನನಗಿರಲಿ"*
*ಎಂದದನು ಕಂಡುಕೊಳ್ಳನೆ ಜಾಣನುಳಿದವರು ಕುರಿಯ ಮಂದೆ.*

*ಕಣ್ ಮುಚ್ಚಿ ನಡೆಯದಿರು, ಹೃದಯವನು ಕಡಿಯದಿರು;*
*ಕಾಶಿಯಲಿ ನೀನರಿವೆ ಯಾತ್ರೆಯೇ ತೀರ್ಥಕಿಂ ಶ್ರೇಷ್ಠವೆಂದು,*
*ಯಾತ್ರೆಗಾಗಿಯೆ ಕ್ಷೇತ್ರ; ಇದು ಸತ್ಯತಮ ಸೂತ್ರ,*
*ಸಾಧಕನಗೆ ತಿಳಿಯುವುದು ತುದಿಯಲ್ಲಿ ಸಾಧನೆಯೆ ಸಿದ್ಧಿಯೆಂದು!*

*ಆದರಿಂದೆ ದಾರಿಯೆಡೆ ಚಲುವಿರಲು ನೋಡಿ ನಡೆ;*
*ಗಾನವಿರೆ ಆಲೈಸಯ, ಕಲೆಯಿರಲು ಓಲೈಸಯ ಸಡ್ಡೆಯಿಂದೆ,*
*ಮೂಡೆ ನೇಸರು ನೋಡು, ನಾಡ ಬಣ್ಣಿಸಿ ಹಾಡು,*
*ಹಾಡಿ ಮುದವನು ಹೀರಿ, ಜನಕೆ ಹರುಷವ ಬೀರಿ, ತೇಲು ಮುಂದೆ!*

*ಹಾಡು, ಗೆಳೆಯನೆ, ಹಾಡು! ಹಾಡಿನಿಂದಲೆ ನಾಡು*
*ಕಣ್ದೆರೆದು ನಿಚ್ಚುದಿಸಿ ಕೆಚ್ಚಿನಿಂ ನಿನ್ನ ಹಿಂಬಾಲಿಪಂತೆ!*
*ಹಾಡೆ ಬಾಳಿಗೆ ಭಕ್ತಿ, ಹಾಡೆ ಜೀವಕೆ ಶಕ್ತಿ!*
*ಹಾಡು, ಜನ್ಮದ ಭಾರವಳಿದು ಕರ್ಮದ ಹೊರೆಯು ಕರಗುವಂತೆ!*

*ದಾರಿಯಲಿ ಕೊಳದ ಬಳಿ ತೆರೆಗಳಲಿ ಮಿಂದು ನಲಿ;*
*ತಿಳಿನೀರನೀಂಟಿ ತಂಗಾಳಿಯಲಿ ಮೈಯೊಡ್ಡಿ ಕಳೆ ದಣಿವನು.*
*ಹೊಂದಾವರೆಯ ಕೊಯ್ದು ಚಂದದಿಂದಲಿ ನೆಯ್ದು*
*ನಿನ್ನೊಲ್ಮೆಗಣ್ಣದನು ಮುಡಿಸಿ ಮುದ್ದಿಸಿ ನಲಿಸಿ ಪಡೆ ತಣಿವನು.*

*ಹಾದಿಯಲಿ ಹಳ್ಳವಿದೆ, ಮುಳ್ಳಿಡಿದ ಕೊಳ್ಳವಿದೆ,*
*ಎಂದಳುಕಿ ಹಿಂದೆಗೆಯದಿರು; ಮುಂದೆ ತೋರುವುದು ಹೂದೋಟವು!*
*ಯಾತ್ರಿಕರು ನಿನ್ನಂತೆಹೋದಹರಿಹರು ಮುಂತೆ;*
*ಹುಡುಕವರ ಹೆಜ್ಜೆಯನು: ಕಾಣುವುದು ನೆಚ್ಚಿನಾ ಸವಿನೋಟವು!*

*ಕತ್ತಲೆಯ ಕವಿದು ಬರೆ ಬಿತ್ತರಿಸಿ ಕಣ್ಣು ತೆರೆ;*
*ರಂಜಿಪುದು ಮುಂದೆ ತೆರಳಿದ ಮಲ್ಲರಾಂತಿರುವ ದಿವ್ಯಜ್ಯೋತಿ!*
*ಮೇಣವರ ಕೂಗಿ ಕರೆ ಕೇಳಿಸಲು ನಿನ್ನ ಮೊರೆ*
*ನಿಲ್ಲುವರು; ಹಿಂದಿರುವ ಸೋದರರ ಕರೆದೊಯ್ಯುವುದರ ನೀತಿ!*

*ನಿಚ್ಚರಲಿ! ಕೆಚ್ಚಿರಲಿ! ಮುಂಬರಿವ ಹುಚ್ಚಿರಲಿ!*
*ಮುಂದುವರಿವುದೆ ಬಾಳು; ಹಿಂದೆ ಸರಿವುದೆ ಸಾವು, ಆತ್ಮಹತ್ಯ!*
*ಹೋರುವುದೆ ಚೈತ್ಯ! ಸುಮ್ಮನಿರೆ ಜಡಶೂನ್ಯ!*
*ತುದಿಯ ಗುರಿ ಶಾಂತಿ ಎನೆ ಬರಿನಿದ್ದೆಯಲ್ಲವುದು ಸತ್ಯ ಸತ್ಯ!*

*ಎದೆಯ ಕೊರೆಯುವ ಕೀಟ ಸಂದೇಹದೊಡನಾಟ;*
*ಸಕ್ಕರೆಯು ಸಿಹಿಯೋ ಕಹಿಯೋ ತಿಂದು ನೋಡದೆಯೆ ತಿಳಿವುದೆಂತು?*
*ಹಿರಿಯರುಭವ ಸಿಹಿಯು. ನಿನಗೊಬ್ಬನಿಗೆ ಕಹಿಯು?*
*ಒಲಿಯದುಳಿವುದಕಿಂತಲೂ ಒಲಿದಳಿವುದೆ ಮೇಲಲ್ತೆ, ಜಂತು?*

*“ಮುದೆ ಬರಿ ಸೊನ್ನೆಯಿರೆ?” ಮರುಳೆ, ಹಾಗೆನ್ನುವರೆ?*
*ಹಿಂದೆ ಬರಿಸೊನ್ನೆ, ಮುಂದೆಯು ಸೊನ್ನೆ, ನೀಂ ಮಾತ್ರ ಸೊನ್ನೆಯಲ್ಲ?*
*ಹೇಡಿಗಳ ವಾದವಿದು, ಕುಮತಿಗಳ ಬೋಧವಿದು!*
*ಸೊನ್ನೆಯಿದ್ದರು ಇರಲಿ! ನುಗ್ಗಿ ಮುಂದಕೆ ನೋಡು! ನೀನು ಮಲ್ಲ!*

*“ಮುಂದೆ ತಾನಹೆ ಸೊನ್ನೆ” ಎಂಬನಿಂದೂ ಸೊನ್ನೆ!*
*ಯಾವ ಸಂಖ್ಯೆಯನೇನು ಸೊನ್ನೆಯಿಂ ಗುಣಿಸಿದರೆ ಲಭ್ಯ ಸೊನ್ನೆ!*
*ಹಿಂದಿಲ್ಲದಾವಿಂದು? ಇಂದಿಲ್ಲದೇಂ ಮುಂದು?*
*ಇಂದೆಂಬುದೆಂತಿರುವುದಿಲ್ಲವಾದರೆ ದಿಟದಿ ನಾಳೆ ನಿನ್ನೆ?*

*ಗುರಿಗೆಂದೆ ಮುಂಗಂಡು ಹುಡುಗನೊದೆದಾ ಚೆಂಡು*
*ಹರಿದಾಡಲಾಡುಂಬೊಲದೊಳದಕೆ ಗುರಿಯಿಲ್ಲವೆಂಬೆಯೇನು?*
*ಇರುವಂತೆ ಬಿದಿಯ ಬಗೆ ತಿರುತಿರುಗಿ ತಿರೆಯೊಳಗೆ*
*ಇಂದೊ ನಾಳೆಯೊ ಎಂದೊ ಒಂದು ದಿನ ಗುರಿಮುಟ್ಟಿ ಗೆಲುವೆ ನೀನು!*

*ಕರ್ಮ ನಿನ್ನನು ಕಟ್ಟಿ ಕೆಡಹಲದನೇ ಮೆಟ್ಟಿ*
*ಮುಂದೆ ಮೆಟ್ಟಲನೇರು! ಮರಳಿ ಯತ್ನವ ಮಾಡು, ಸತ್ತು ಹುಟ್ಟಿ!*
*ಹಚ್ಚು, ಬೆಂಕಿಯ ಹಚ್ಚು! ಸುಡಲೆಲ್ಲವನು ಕಿಚ್ಚು!*
*ಹುಲ್ಲು ಸುಟ್ಟರೆ ಸುಡಲಿ! ಲೇಸಾಯ್ತು ಟೊಳ್ಳಳಿಯುತುಳಿಯೆ ಗಟ್ಟಿ!*

*ಬಾಳು ಸಂದೊಡಮೇನು? ಸಾವು ಬಂದೊಡಮೇಲು?*
*ಸಾವು ಬಾಳಿನ ಕುಂದನೊಂದರಿಯದಿಹ ಶಾಶ್ವತಾತ್ಮ ನೀನು!*
*ರವಿ ಮುಳುಗಲೇನಂತೆ? ಇರುಳಿಳಿದರೇನಂತೆ?*
*ಬಂದಿರುಳಿನುದರದಲಿ ಮಲಗಿಹುದು ಮುಂದೆ ಬಹ ಹಗಲು ತಾನು!*
*ಹಗಲು ಹೊಣೆ ಹತ್ತಿರಕೆ; ಹೊಣೆಯಿರುಳು ಬಿತ್ತರಕೆ;*
*ಹಗಲೆಮಗೆ ತೋರದಿಹ ಹಿರಿಯ ವಿಶ್ವವನಿರುಳು ತೋರುತಿಹುದು!*
*ಬಾಳು ಮುಚ್ಚುವ ಮಣ್ಣು; ಸಾವು ಬಿಚ್ಚುವ ಕಣ್ಣು;*
*ಇಲ್ಲಿ ಕಂಡರಿಯದಿಹ ಮಹಿಮೆಯನು ನಾವಲ್ಲಿ ಕಾಣಲಹುದು!*

*ಸೂರ್ಯಚಂದ್ರರ ಗತಿಗೆ ಕಣ್ಣಹ ಜಗನ್ಮತಿಗೆ*
*ನಿನ್ನ ಗತಿ, ನಿನ್ನ ಮತಿ, ನಿನ್ನ ಸಾಹಸಕೆ ಕಣ್ಣಾಗಲರಿದೇ?*
*ಭಯವ ಬಿಡು; ನಲವಿಂದೆ ಹಾಡುತ್ತ ನಡೆ ಮುಂದೆ,*
*ಸಂದೆಯದ ಪುಸಿತೊಟ್ಟಿಲನು ಕಟ್ಟಿ ಮಲಗಿ ಜೋಲದಿರು ಬರಿದೆ!*

*ಬೈಗುಗೆಂಪುರಿಯಲ್ಲಿ ಸುಡಲಿ ಸಂಶಯವಲ್ಲಿ !*
*ಹುಣ್ಣಿಮೆಯ ರಾತ್ರಿಯಲಿ ಹೊರಗೆ ಬಾ ನೋಡು! ಸಂದೆಯದ ಮಚ್ಚು*
*ಎಲ್ಲಾದರಿಹುದೇನು? ಎಳ್ಳಾದರಿಹುದೇನು?*
*ಜಗದ ನಗೆವೊನಲಿನಲಿ ಕೊಚ್ಚಿಹೋಗುವುದು ಸಂದೆಗದ ಹುಚ್ಚು !*

*ಏಳು, ಮಲ್ಲನೆ, ಏಳು! ಮನವ ಮುದದಲಿ ತೇಲು!*
*ಕೋಗಿಲೆಗಳುಲಿಯುತಿವೆ ಪಲ್ಲವಿತ ಚೈತ್ರಕಾನನದಿ ಕೇಳು:*
*ಸಾಹಸವೆ ಸವಿ ಬಾಳು! ಸಂದೆಯವೆ ಕಹಿ ಕೂಳು!*
*ನಂಬುಗೆಯ ಸುಗ್ಗಿಯನು ನೆಟ್ಟು ಸಂದೆಯದ ಮಾಗಿಯನು ಕೀಳು!*

*ನೋಡು, ಎಂತಿದೆ ಸುಸಿಲು! ಹಸುರ ಮೇಲೆಳಬಿಸಿಲು*
*ಮಲಗಿಹುದು ಲೀಲೆಯಲಿ ಮೈಮರೆತ ಮೋಹನದ ಶಿಶುವಿನಂತೆ!*
*ಅಲ್ಲಿ ಬನಬನದಲ್ಲಿ, ಮಾನವರ ಮನದಲ್ಲಿ*
*ನೆಚ್ಚುದಿಸಿ ಚಿಮ್ಮುತಿದೆ! ಕರ್ಮಮಯ ಚೇತನಕೆ ಹೊರತು ಚಿಂತೆ!*

*ನಂಬು ಗುರಿಯಿಹುದೆಂದು! ನಂಬು ಗುರುವಿಹನೆಂದು!*
*ನಂಬು ದಾರಿಯಲಿ ಕೃಪೆ ಕೈಹಿಡಿದು ಹಿಂದೆ ಪಾಲಿಸುವುದೆಂದು!*
*ಗುರುಭಕ್ತ ನಾನೆಂದು, ಗುರುಶಕ್ತಿ ನನಗೆಂದು*
*ನಂಬು! ನಿನ್ನನೆ ನಂಬು! ಮಂತ್ರದೀಕ್ಷಿತಗೆ ಗುರಿತಪ್ಪದೆಂದೂ!***[14]**“

---

[1] ಷೋಡಶಿ: ‘ರಸ್ಕೃಷಿ’ ಪುಟ ೯೫, ೭೮, ೭೯.
[2] ಶ್ರೀ ರಾಮಾಯಣ ದಿವ್ಯಶಿಲ್ಪಿ ಎಂಬ ಲೇಖನದಿಂದ-ವಿಭೂತಿಪೂಜೆ.
[3] ಅಗ್ನಿಹಂಸ: ‘ಮನ್ಮನೋಮಂದಿರಕೆ’, ಪುಟ ೧.
[4] ಕಲಾಸುಂದರಿ:‘ತಾವರೆಯ ತೇರು’, ಪುಟ ೨೭.
[5] ನವಿಲು: ‘ಆರ್ತವಾಣಿ’, ಪುಟ ೭೭.
[6] ಕೊಳಲು: ‘ನಾವಿಕ’, ಪುಟ ೧೧೦.
[7] ಕೊಳಲು: ‘ಪ್ರಾರ್ಥನೆ’, ಪುಟ ೪೬.
[8] ಕೊಳಲು: ‘ಮುಂದಕಲ್ಲಿಗೆ’, ಪುಟ ೧೨.
[9] ಅಗ್ನಿಹಂಸ: ‘ನಿನ್ನ ಪದಕಮಲದಲಿ’, ಪುಟ ೮೮.
[10] ಅಗ್ನಿಹಂಸ: ‘ಹಾರೈಸು’ ಪುಟ ೮೯
[11] ಕೃತ್ತಿಕೆ: ‘ಪೂರ್ಣಯೋಗಿಯೆ ಪರಮಭೋಗಿ’, ಪುಟ ೪೯.
[12] ಪ್ರೇಮಕಾಶ್ಮೀರ: ‘ಒಬ್ಬ ತಾಯಿಗೆ’, ಪುಟ ೭.

[13] ಅಗ್ನಿಹಂಸ:‘ಋತಚಿನ್ಮಯೀ ಜಗನ್ಮಾತೆಗೆ’,ಪುಟ ೯೪.

[14] ಪಾಂಚಜನ್ಯ: ‘ಮಲ್ಲಗೀತೆ’, ಪುಟ ೪೭.

# ಇದಾವ ನ್ಯಾಯ?

*“ ಇದ್ಯಾವ ನ್ಯಾಯ**?***
*ಏನನ್ಯಾಯ*
*ಕೃಷ್ಣನ ಕುಹಕವ ನೋಡಲ್ಲಿ **!***
*– “ ಕುಮಾರವ್ಯಾಸ“*

ವೈಶಂಪಾಯನ ಸರೋವರ ತೀರಪ್ರದೇಶದಲ್ಲಿ ರಣರೌದ್ರಾವೇಶಿಗಳಾದ ಭೀಮ ದುರ್ಯೋಧನರ ನಿರ್ಣಾಯಕವಾದ ಕೊಟ್ಟಕೊನೆಯ ಗದಾಯುದ್ದವನ್ನು ಪುಲಕಿತವಾಗಿ ಕಾಣುತ್ತಿರುವ ಕವಿ, ಶ್ರೀಕೃಷ್ಣನ ಸನ್ನೆಯ ಮೇರೆಗೆ ಭೀಮಸೇನನು ವೈರಿಯ ತೊಡಗೆ ಮೋದಿ ಅವನನ್ನು ಧರೆಗುರುಳಿಸುವ ರುದ್ರಭೀಷಣ ಸನ್ನವೇಶದಲ್ಲಿ, ತಾಳಲಾರದೆ ಕೂಗಿಕೊಳ್ಳುತ್ತಾನೆ: ‘ಇದಾವ ನ್ಯಾಯ**?** ಏನನ್ಯಾಯ**?’**ಎಂದು ಮನಸ್ಸು ಮತ್ತೆ ಮತ್ತೆ ಮರುಗುತ್ತದೆ, ಮುನಿದೇಳುತ್ತದೆ. ಪ್ರಶ್ನೆಗೆ ಸಮಾಧಾನಕರವಾದ ಉತ್ತರವನ್ನು ಹುಡುಕಿ ಕಾಣಲಾರದೆ ಬುದ್ಧಿ ತಡವರಿಸುತ್ತದೆ, ಹೃದಯ ತತ್ತರಿಸುತ್ತದೆ. ಅನೇಕ ವೇಳೆ ಸೋತು, ಪ್ರತೀಕಾರ ಕಾಣದ ಧರ್ಮ ಕೋಪಕ್ಕೆಂಬಂತೆ, ತಿರಸ್ಕರಿಸಿಯೂ ಬಿಡುತ್ತದೆ. ಆರನ್ನೊ**?** ಏನನ್ನೊ**?** ಏತಕ್ಕೊ**?**

ಸತ್ಯ ಧರ್ಮ ತ್ಯಾಗ ವೀರ ಇತ್ಯಾದಿ ಮಹಾಗುಣಗಳೆಲ್ಲ ಮೂರ್ತಿಮತ್ತಾಗಿದ್ದ ಶ್ರೀರಾಮಚಂದ್ರನು ಮರದ ಮರೆಹೊಕ್ಕು ಅಡಗಿನಿಂತು ವಾಲಿಯನ್ನು ಸಂಹರಿಸುತ್ತಾನೆ. ನಿರಪರಾಧಿನಿ ಗರ್ಭಿಣಿ ಸಹಧರ್ಮಿಣಿಯನ್ನು ಕಾಡಿಗಟ್ಟುತ್ತಾನೆ. ಶ್ರೀಮದ್‌ಭಗವದ್ಗೀತೆಯಂತಹ ಅಲೋಕಸಾಮಾನ್ಯವಾದ ಪೂರ್ಣಯೋಗಶಾಸ್ತ್ರವನ್ನು ಜಗತ್ತಿಗೆ ಬೋಧಿಸಿದ ಶ್ರೀಕೃಷ್ಣನು, ಅವತಾರ ಪುರಷನೆಂದು ಪೂಜ್ಯನಾದ ಶ್ರೀಕೃಷ್ಣನು, ತನ್ನ ಪಾಂಡವರ ಗೆಲುವಿಗಾಗಿ ಕೌರವವೀರರನನ್ನು ಪಡಲ್ವಡಿಸುವ ಲೋಕಸಂಗ್ರಹ ಕಾರ್ಯದಲ್ಲಿ, ಸಾಮಾನ್ಯ ಜೀವದ ಧರ್ಮದೃಷ್ಟಿ ತತ್ತರಿಸುವಂತಹು ಅಕಾರ್ಯವೆಂದು ತೋರುವ, ಎಷ್ಟು ಸಾಹಸವರ್ತನೆಗಳಲ್ಲಿ ಭಾಗಿಯಾಗಿಲ್ಲ**?** ಮತ್ತೆಷ್ಟನ್ನು ಪ್ರೇರಿಸಿಲ್ಲ” ತಾನು ರಣದಲ್ಲಿ ಕೈದು ವಿಡಿಯುವುದಿಲ್ಲ ಎಂದ, ಪೂಣ್ಪಿದ್ದರೂ ಗಾಂಗೇಯನ ಮೇಲೆ ಚಕ್ರ ಪ್ರಯೋಗ ಮಾಡುತ್ತಾನೆ. ಸಾರಥಿ ತ್ಯಜಿಸಿಹೋದ ಮೇಲೆ ರಕ್ತವಾರಿಯಿಂದ ಕೆಸರೆದ್ದ ನೆಲದಲ್ಲಿ ರಥದ ಗಾಲಿ ಹೂತುಕೊಂಡಿದ್ದಾಗ, ತನಗೆ ಸ್ವಲ್ಪ ಸಮಯ ಬೇಕೆಂದು ಕೇಳಿ ತೇರಿಳಿದು ಅದನ್ನೆತ್ತುವ ಕಾರ್ಯದಲ್ಲಿ ತೊಡಗಿದ್ದ ಕರ್ಣನ ಮೇಲೆ ಅರ್ಜುನನ ಕೈಯಿಂದ ಬಾಣ ಹೊಡೆಸುತ್ತಾನೆ. ಸಂಧಿಕಾರ್ಯಕ್ಕೆ ಹೋಗುವಾಗಲೂ ಯುಧಿಷ್ಠಿರನಿಗೆ ಒಂದು ಮಾತು ಕೊಡುತ್ತಾನೆ; ಅದನ್ನು ಸಂಪೂರ್ಣವಾಗಿ ಮುರಿಯುವ ಮತ್ತೊಂದು ಮಾತಿನ ಅಭಯವನ್ನು ದ್ರೌಪದಿಗೆ ನೀಡುತ್ತಾನೆ. ದ್ರೋಣನನ್ನು ಕೊಲ್ಲಿಸಲು ಶ್ರೀಕೃಷ್ಣನು ಹೂಡಿದ ಉಪಾಯವನ್ನು ಇನ್ನಾರಾದರೂ ಮಾಡಿದ್ದರೆ**?** ಯಾವ ಹೆಸರಿಗೆ ಪಕ್ಕಾಗುತ್ತಿದ್ದರು**?**

ಅವತಾರಪುರುಷರು ಎಂದೆನ್ನಿಸಿಕೊಳ್ಳುವವರ ವಿಚಾರ ಹೀಗಾದರೆ ಆದರ್ಶ ವಿಭೂತಿಪುರುಷರು ಎನ್ನಿಸಿಕೊಳ್ಳುವವರೂ ಧರ್ಮ ಪರೀಕ್ಷಣೆಗೆ ಒಳಗಾಗುವಂತಹ ಎಷ್ಟೋ ‘ಅಕಾರ್ಯ’ಗಳನ್ನು ಮಾಡಿರುವುದೂ ಪುರಾಣ ಮಹಾಕಾವ್ಯಗಳಲ್ಲಿ ಕಂಡು ಬರುತ್ತದೆ. ಆಚಾರ್ಯ ಭೀಷ್ಮರು

ದುರ್ಯೋಧನ ಪ್ರಪ್ರಥಮ ಮಹಾಸೇನಾನಿಯಾಗಿ ನಿಂತು ಭಾರತ ಯುದ್ಧವನ್ನು ಪ್ರಾರಂಭಿಸಿದರೂ, ದೇವತೆಗಳು ಹೊಗಳುವಂತೆ ಮತ್ತು ಶತ್ರುಪಕ್ಷ ದಿಗಿಲುಗೊಳ್ಳುವಂತೆ ಕಾಳಗಂಗೊಟ್ಟರೂ, ಕೊನೆಯಲ್ಲಿ ಪಾಂಡವರಿಗೆ ತಮ್ಮ ಸಾವಿನ ಅಥವಾ ಸೋಲಿನ ಗುಟ್ಟನ್ನು ಹೇಳಿಕೊಟ್ಟು ಶರಶಯ್ಯಾಗತರಾದರಷ್ಟೆ! ಈಗಣ ಮಹಾರಾಷ್ಟ್ರಗಳ ಮಹಾ ಸೇನಾನಿಗಳಲ್ಲಿ ಯಾವನಾದರೂ ಹಾಗೆ ಮಾಡಿದರೆ ಅವನನ್ನು ಏನನ್ನುತ್ತೇವೆ? ಅವನಿಗೆ ಏನು ಶಿಕ್ಷೆ ಒದಗುತ್ತದೆ? ಅವನು 'ಪಂಚಮದಳ ದಳಪತಿ'ಯೆಂದು ಅವಹೇಳಿತನಾಗಿ ಮರಣದಂಡನೆಗೆ ಗುರಿಯಾಗುವುದಿಲ್ಲವೆ? ರಾಜದ್ರೋಹಿ, ಸ್ವಾಮಿದ್ರೋಹಿ ಅಥವಾ ರಾಷ್ಟ್ರದ್ರೋಹಿ ಎಂದು ನಿಂದನೀಯನಾಗುವುದಿಲ್ಲವೆ?

ಅವರನ್ನೆಲ್ಲ ವಿಚಾರಣೆಗಾಗಿ ನ್ಯಾಯಸ್ಥಾನಕ್ಕೆ ಎಳೆಯುವುದೇನೊ ಸುಲಭ. ನ್ಯಾಯಾಧೀಶರ ಮುಂದೆ ವಾದಮಾಡಲು ನ್ಯಾಯವಾದಿಗಳೂ ದೊರೆಯುತ್ತಾರೆ. ಆದರೆ ಸಮಂಜಸವಾದ ಸಾಕ್ಷ್ಯವನ್ನು ಸಂಗ್ರಹಿಸಿ, ಸರಿಯಾದ ಸಾಕ್ಷಿಗಳನ್ನು, ತರಬಿಯತ್ತು ಮಾಡಿಯಾದರೂ ಚಿಂತೆಯಿಲ್ಲ, ಒದಗಿಸದಿದ್ದರೆ ನ್ಯಾಯಾಧೀಶರು ಕೇಸನ್ನೆ ವಜಾಮಾಡಬೇಕಾಗುತ್ತದೆ. ಈ ಕಾವ್ಯಸತ್ತೆಯ ಅಪರಾಧ ಮತ್ತು ಅಪರಾಧಿಗಳ ವಿಚಾರದಲ್ಲಿ ಅಂತಹ ಸಾಕ್ಷ್ಯಸಾಕ್ಷೀ ಸಾಮಂಜಸ್ಯವೆ ದೊಡ್ಡ ಸಮಸ್ಯೆ. ಏಕೆಂದರೆ ಒಬ್ಬೊಬ್ಬ ಕವಿಯೂ ತನ್ನ ಪಾತ್ರಗಳನ್ನೂ ಪಾತ್ರಕ್ರಿಯೆಯನ್ನೂ ತನ್ನ 'ದರ್ಶನ'ಕ್ಕೆ ಅನುಗುಣವಾಗಿ ಸೃಷ್ಟಿಸುತ್ತಾನೆ. ಆ ರಚನೆ 'ಅನನ್ಯಪರ-ತಂತ್ರ'

[1]ವಾದದ್ದು. ವ್ಯಾಸನ ದುರ್ಯೋಧನನ ಮೇಲೆ ಅಪರಾಧ ಹೊರಿಸಿ ನಾವು ಒದಗಿಸುವ ಸಾಕ್ಷ್ಯವನ್ನು ಭಾಸನ ದುರ್ಯೋಧನ ಸುಳ್ಳುಸಾಕ್ಷ್ಯವೆಂದು ತಳ್ಳಿಹಾಕಬಹುದು. ಸಂಸ್ಕೃತ ರಾಮಾಯಣದ ಉತ್ತರ ಕಾಂಡದಲ್ಲಿ ಬರುವ ಶಂಭೂಕವಧೆಗಾಗಿ ಅಲ್ಲಿಯ ರಾಮನ ಮೇಲೆ ನಾವು ಹೊರಿಸಬಹುದಾದ ಆರೋಪದ ತೀಕ್ಷ್ಣತೆ ಭವಭೂತಿಯ ಉತ್ತರರಾಮಚರಿತದ ರಾಮನಿಂದ ತನ್ನ ಉಗ್ರತೆಯನ್ನು ಬಹುಪಾಲು ಕಳೆದುಕೊಂಡು ಸೌಮ್ಯವಾಗಿಬಿಡುತ್ತದೆ. ಕನ್ನಡ ನಾಟಕ 'ಶೂದ್ರ ತಪಸ್ವಿ'ಯಲ್ಲಿಯಾದರೊ ಆ ಸಾಕ್ಷ್ಯದ ಸ್ವರೂಪವೇ ಮಾರ್ಪಾಡಾಗಿ, ಅಪರಾಧಿ ಯಾರು? ಅಪರಾಧವೇನು? ಎಂಬ ಪ್ರಶ್ನೆಯೆದ್ದು, ಕೋರ್ಟಿಗೆ ಕೇಸನ್ನು ಕೊಂಡೊಯ್ದವನೆ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದ ಪ್ರಮೇಯ ಒದಗಬಹುದು. ಹೀಗೆ ಭಿನ್ನ ಭಿನ್ನ ದೃಷ್ಟಿಯ ಬೇರೆ ಬೇರೆ ಕವಿಕೃತಿಗಳಲ್ಲಿ ಒಂದು ವ್ಯಕ್ತಿಯ ಅಥವಾ ಒಂದು ಘಟನೆಯ ಸಂಬಂಧದಲ್ಲಿ ವಿವಿಧ ಪ್ರಕಾರದ ಸೃಷ್ಟಿಗಳಿರುವುದರಿಂದ ಲೋಕಚರಿತ್ರೆಯಲ್ಲಿ ನಡೆದ ಘಟನೆಯೊಂದರ ನ್ಯಾಯಾನ್ಯಾಯ ಮತ್ತು ಧರ್ಮಾಧರ್ಮಗಳನ್ನು ಪರಿಶೀಲಿಸುವಂತೆ ವ್ಯವಹರಿಸಲು ಸಾಧ್ಯವಾಗುವುದಿಲ್ಲ. ಕಾವ್ಯಸತ್ತೆಯ ಈ ಧರ್ಮ ಪರೀಕ್ಷಣ ಕಾರ್ಯದಲ್ಲಿ ನ್ಯಾಯಸ್ಥಾನ ನ್ಯಾಯಾಧೀಶ ನ್ಯಾಯವಾದಿ ಅಪರಾಧಿ ಸಾಕ್ಷಿ ಎಲ್ಲರೂ ಒಂದು ವಿಲಕ್ಷಣ ಪರಿಸ್ಥಿತಿಯಲ್ಲಿ ಸಿಲುಕಿ, ಬಹುಶಃ ಸಮಯ ಸಂದರ್ಭಕ್ಕೆ ತಕ್ಕಂತೆ ಪರಸ್ಪರ ಸ್ಥಾನಪಲ್ಲಟವಾಗುವ ಪರಿಸ್ಥಿತಿಯೂ ಒದಗಬಹುದೆಂದು ತೋರುತ್ತದೆ. ಏಕೆಂದರೆ ಅಲ್ಲಿಯ'ಧರ್ಮ ಸೂಕ್ಷ್ಮತೆ' ಬಹು ಭೂಮಿಕಾ ವ್ಯವಹಾರ್ಯವಾದದ್ದು; ಪೂರ್ಣ ದೃಷ್ಟಿಯೊಂದರಿಂದಲೆ ಸಂಪೂರ್ಣವಾಗಿ ಗ್ರಾಹ್ಯವಾದದ್ದು.**[2]**
ಆದರೆ ನಮ್ಮ ಅನುಕೂಲದ ಮಟ್ಟಿಗಾಗಿ, ಅಪೂರ್ಣವಾದರೂ ಚಿಂತೆಯಿಲ್ಲವೆಂದು, ಒಂದು ನಿಷ್ಕೇವಲವಾದ ವ್ಯಾವಹಾರಿಕ ಮಾರ್ಗದಲ್ಲಿ ಸಾಗಬಹುದು. ಯಾವುದಾದರೂ ಒಂದು ಘಟನೆಯನ್ನು ವ್ಯಷ್ಟಿದೃಷ್ಟಿಯಿಂದ ನೋಡಬಹುದು; ಸಮಷ್ಟಿದೃಷ್ಟಿಯಿಂದ ನೋಡಬಹುದು; ಅತೀತವೂ ಭಗವತ್ ಸಾಧ್ಯವೂ ಆದ ಪೂರ್ಣದೃಷ್ಟಿಯಿಂದ ಸಮೀಕ್ಷಿಸಲು ಪ್ರಯತ್ನಿಸಬಹುದು. ಅಥವಾ ಒಂದು ವ್ಯಕ್ತಿಧರ್ಮದೃಷ್ಟಿಯಿಂದ ನೋಡಬಹುದು; ಒಂದು ಸಮಾಜಧರ್ಮದೃಷ್ಟಿಯಿಂದ ನೋಡಬಹುದು; ಒಂದು ಸಮಗ್ರ ಮಾನವಧರ್ಮ ದೃಷ್ಟಿಯಿಂದ ನೋಡಬಹುದು. ಉದಾಹರಣೆಗಾಗಿ ಕೌರವೇಶ್ವರನ ಊರುಭಂಗ ಸನ್ನಿವೇಶವನ್ನು ತೆಗೆದುಕೊಂಡರೆ, ನಮ್ಮ ದೃಷ್ಟಿ ಹಿಂದೆ ನಡೆದುದನ್ನೂ

ಮುಂದೆ ನಡೆಯಬೇಕಾದುದನ್ನೂ ಗಮನಿಸದೆ ತತ್ಕಾಲದ ಘಟನಾಬಿಂದುವಿನಲ್ಲಿಯೆ ಕೇಂದ್ರೀಕೃತವಾಯಿತೆಂದರೆ, ಕೃಷ್ಣನು ಸನ್ನೆಗೆಯ್ದುದೂ ಭೀಮನ ತೊಡೆಗೆ ಹೊಡೆದುದೂ ವೀರೋಚಿತವಲ್ಲದ ಮಹಾ ಅವಮಾನಕರವಾದ ಅನ್ಯಾಯಗಳೆಂದು ತೋರಿ, ಕ್ರೀಡಾರಂಗದಲ್ಲಿ ಫೌಲ್ ನಡೆದಾಗ ರೆಫ್ರಿ ಸಿಳ್ಳಿ ಊದುವಂತೆ, 'ಇದಾವ ನ್ಯಾಯ? ಏನನ್ಯಾಯ?' ಎಂದು ಕೂಗಿಕೊಳ್ಳುತ್ತೇವೆ. ರಂಗಕ್ಕೂ ನುಗ್ಗುತ್ತಿದ್ದೆವೊ ಏನೊ, ಸಾಧ್ಯವಾಗಿದ್ದರೆ! ನ್ಯಾಯ ರಕ್ಷಣೆ ಮಾಡಲೋಸುಗ! ಧರ್ಮಪರಿಪಾಲನಾರ್ಥವಾಗಿ!

ಆದರೆ ನಾವೆ ಭೀಮನಾಗಿ ನೋಡತೊಡಗಿದ್ದರೆ ಏನಾಗುತ್ತಿತ್ತು? 'ನನ್ನ ಮನೆ ಮಾರು ಹಾಳುಮಾಡಿದ್ದಾನೆ; ನನ್ನ ಹೆಂಡತಿಗೆ ಮಾನಭಂಗ ಮಾಡಿದ್ದಾನೆ; ನನ್ನ ಮಕ್ಕಳನ್ನೂ ಬಂಧುಗಳನ್ನೂ ಕೊಂದಿದ್ದಾನೆ; ಕೊಲ್ಲಿಸಿದ್ದಾನೆ; ನನಗೆ ಅವಮಾನದ ಮೇಲೆ ಅವಮಾನ ಮಾಡಿದ್ದಾನೆ. ನನ್ನ ಹೊಟ್ಟೆಗೆ ಕಿಚ್ಚಿಟ್ಟಿದ್ದಾನೆ. ಇವನ ನೆತ್ತರು ಸಪ್ತಸಾಗರಗಳಾಗಿದ್ದರೂ ಕುಡಿದೀಂಟುವ ಅಗಸ್ತ್ಯನಾಗಿ ಬಿಡುತ್ತೇನೆ; ಹೊಡಿಯೋ! ಹೊಡಿಯೋ! ತೊಡೆ ಮುರಿಯಲಿ, ಚೂರಾಗಲಿ, ಹಾಕೋ! ಇನ್ನೂ ಹಾಕೋ ಒದೆಯೋ! ಅವನ ಕಿರೀಟ ಪುಡಿಯಾಗಲಿ!' ಎಂದು ಗ್ರಾಮ್ಯಸ್ತ್ರೀ ಶಾಪ ಹಾಕುವಂತೆ ಒರಲಿ, ಒಬ್ಬನಲ್ಲ ಸಾಧ್ಯವಾಗಿದ್ದರೆ ನೂರು ಭೀಮರಾಗುತ್ತಿದ್ದೆವಲ್ಲವೆ? ಉದ್ದಕ್ಕೂ ಅನ್ಯಾಯ ಅಧರ್ಮ ಹಿಂಸೆಗಳಲ್ಲಿಯೆ ಬಾಳು ಸಾಗಿಸಿದ ದುಷ್ಟನನ್ನು ಕೊಲ್ಲುವ ಕೊನೆಯ ಮಹೂರ್ತದಲ್ಲಿ ಧರ್ಮವಂತೆ ಅಧರ್ಮವಂತೆ ನ್ಯಾಯವಂತೆ ಅನ್ಯಾಯವಂತೆ!-ಎಂದು ಮೂದಲಿಸುತ್ತಿರಲಿಲ್ಲವೆ? ಮರಣ ದಂಡನೆಗೆ ಗುರಿಯಾಗಿ ಗಲ್ಲಿಗೇರುವವನ ಕುತ್ತಿಗೆಗೆ ನೋವಾಗುತ್ತದೆಂದು ಉರುಳಿಗೆ ಮೆತ್ತೆಹಾಕಬೇಕಂತೆ! ಎಂದು ಪರಿಹಾಸ್ಯ ಮಾಡುತ್ತಿರಲಿಲ್ಲವೆ?

ವ್ಯಕ್ತಿದೃಷ್ಟಿಯಿಂದ ನೋಡದೆ ಸಮಾಜದೃಷ್ಟಿಯಿಂದ ನೋಡತೊಡಗಿದರೆ ನಾವು ತಾತ್ಕಾಲಿಕತೆಯಿಂದ ಪಾರಾಗಿ, ತತ್‌ಕ್ಷಣದ ನಮ್ಮ ಅಹಂಕಾರದ ಭಾವಸ್ಥಿತಿಯ ಆವೇಶಕ್ಕೆ ವಶರಾಗಿ ಕೂಗಿಕೊಳ್ಳುವುದಕ್ಕೆ ಬದಲಾಗಿ, ಭೀಮ ಅಥವಾ ದುರ್ಯೋಧನರ ವ್ಯಕ್ತಿತ್ವಗಳಲ್ಲಿ ವಿಲೀನರಾಗಿ ಅವನ ಅಥವಾ ಇವನ ಪಕ್ಷಪಾತಿಗಳಾಗದೆ, ಯಾವುದು ಹೇಗೆ ನಡೆದರೆ ಸಮಾಜದ ಸಮುದಾಯ ಕ್ಷೇಮ ಸಾಧನೆಯಾಗುತ್ತದೆ ಎಂದು ನಿರ್ಣಯಿಸುತ್ತೇವೆಯೊ ಆ ನಿರ್ಣಯಕ್ಕೆ ತಲೆಬಾಗಬೇಕಾಗುತ್ತದೆ, ನಮ್ಮ ಧರ್ಮಾಧರ್ಮ ಬುದ್ಧಿ. ಅಂತಹ ಪೂರ್ವಾಪರಗ್ರಾಹಿಯಾದ ಬುದ್ಧಿಗೆ ಭೀಮನ ವರ್ತನೆ, ಅದಕ್ಕದೆ ಒಂದು ಅಲ್ಪದೋಷವಾಗಿ ತೋರಿದರೂ, ಅದು ಸಾಧಿಸುವ ಲೋಕಕಲ್ಯಾಣಕಾರಿಯಾಗುವ ಒಂದು ಭೂಮ ಪ್ರಯೋಜನದ ಮುಂದೆ ಸಾಧುಕ್ರಿಯೆಯಾಗಿ ತೋರಿ, ಆ ಭೂಮ ಪ್ರಯೋಜನದ ಒಂದು ಅನಿವಾರ್ಯವಾದ ಅಂಗವೂ ಆಗಿಬಿಡುತ್ತದೆ. ಅಂತಹ ಎತ್ತರಕ್ಕೂ ಬಿತ್ತರಕ್ಕೂ ಏರಿ ಹಬ್ಬುವ ಸಮಷ್ಟಿದೃಷ್ಟಿ ಇನ್ನೊಂದು ಹೆಜ್ಜೆ ಮುನ್ನೆಗೆದರೆ ಪೂರ್ಣದೃಷ್ಟಿಯಾಗುತ್ತದೆ.

ಆ ಪೂರ್ಣದೃಷ್ಟಿಗೆ ಪ್ರತಿಮೆಯಾಗಿ ನಿಲ್ಲುತ್ತದೆ, ಶ್ರೀ ಕೃಷ್ಣನ ಬೃಹನ್ ಮಹಾ ಭಗವತ್ ಪಾತ್ರ. ಆ ಪೂರ್ಣದೃಷ್ಟಿ ಸಾರ್ವಕಾಲಿಕ; ಸಾರ್ವದೇಶಿಕ; ಸರ್ವಾಂತರ್ಯಾಮಿ; ಸರ್ವಾತೀತ. ಅದರ ಇಚ್ಛೆ ಋತಚಿದಿಚ್ಛೆ. "ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಮಯನ್ ಸರ್ವಭೂತಾನಿ ಯಂತ್ರಾ ರೂಢಾನಿ ಮಾಯಯಾ॥" ಆ ನಿತ್ಯಶಕ್ತಿ ತನ್ನ ಲೀಲಾರ್ಥವಾಗಿ, ತನಗೆ ಮಾತ್ರ ಪೂರ್ಣಗೋಚರವಾಗಿರುವ ತನ್ ಅಚಿಂತ್ಯೋದ್ದೇಶಕ್ಕಾಗಿ, ಮನೋಮಯ ಮಾತ್ರ ನಿಷ್ಠವಾಗಿರುವ ಮಾನವ ವಿಚಾರಾವಲೋಕನಕ್ಕೆ ಅಗಮ್ಯವಾಗಿರುವ ಸಚ್ಚಿದಾನಂದ ಪ್ರಯೋಜನಕ್ಕಾಗಿ, ನಮಗೆ ಅರ್ಥವಾಗದ ಅಥವಾ ಅನರ್ಥವಾಗಿ ತೋರುವ ಅನೇಕಾನೇಕ ರೀತಿಗಳಲ್ಲಿ ಪ್ರವರ್ತಿಸುತ್ತದೆ. "ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ" ಅದನ್ನರಿಯದೆ ಅಹಂಕಾರಭ್ರಾಂತವಾದ ಮನುಷ್ಯಚೇತನ 'ನಾನೆ ಅದನ್ನೆಲ್ಲ ಮಾಡುತ್ತಿದ್ದೇನೆ' ಎಂದು ಸಂಸಾರ

ಭಾರವನ್ನೆಲ್ಲ ತನಗೆ ತಾನೆ ಆರೋಪಿಸಿಕೊಳ್ಳುತ್ತಾ ತಲೆಯ ಮೇಲೆ ಹಾಕಿಕೊಂಡು ದಿಗ್ಭ್ರಾಂತವಾಗುತ್ತದೆ. ಅಂತಹ ದಿಗ್‌ಭ್ರಾಂತಿ ಅಹಂದೃಷ್ಟಿಗೆ ಅತ್ಯಂತ ಸತ್ಯವಾದುದಾದರೂ ಪೂರ್ಣದೃಷ್ಟಿಗೆ ಶಶವಿಷಾಣಸದೃಶವಾದ ಒಂದು ಮಿಥ್ಯೆ. ಅಹಂದೃಷ್ಟಿಯ ಮುಂದೆ ಭಯಂಕರವಾಗಿ ನಿಂತು, ಪರಿಹಾರ ನೀಡು ಎಂದು ಉಗ್ರವಾಗಿ ಒರಲುವ ಯಕ್ಷಪ್ರಶ್ನೋಪಮವಾದ ಆ ಸಮಸ್ಯೆಯ ಬೂತು ಪೂರ್ಣದೃಷ್ಟಿಯ ಮುಂದೆ ಸಂಪೂರ್ಣವಾಗಿ ನಿರಸನ ಹೊಂದುತ್ತದೆ.

ಅಂತಹ ಪೂರ್ಣದೃಷ್ಟಿ ಲೋಕದಲ್ಲಿಯೂ ಕಾವ್ಯಲೋಕದಲ್ಲಿಯೂ ಅಜ್ಞಾನವಶವಾದ ಅವಿದ್ಯಾಭೂಮಿಕೆಗಳಿಗೆ ಅನುರೂಪವಾದ ರೂಪರೀತಗಳಲ್ಲಿ ಪ್ರತಿಮವಿಧಾನದಲ್ಲಿ ಪ್ರಕಟವಾಗಲು ಪ್ರಯತ್ನಿಸಿರುವುದನ್ನು ನಾವು ನೋಡುತ್ತೇವೆ. ಬದುಕಿನಲ್ಲಿ ಸದ್ಧರ್ಮಿಗೊ ಸಜ್ಜನಕ್ಕೊ ಕೇಡೊದಗಿದಾಗ, ಆ ಕೇಡಿಗೆ ಈ ಜನ್ಮದ ಅಥವಾ ಈ ಲೋಕದ ಕಾರಣಗಳನ್ನು ಒಡ್ಡಲು ಅಸಮರ್ಥವಾದ ನಮ್ಮ ಬುದ್ಧಿ ಜನ್ಮಾಂತರದ ಕರ್ಮಕಾರಣಗಳನ್ನೊ ಅನ್ಯಲೋಕ ದೇವತಾ ಪ್ರಭಾವಗಳನ್ನೊ ತಂದೊಡ್ಡುತ್ತದೆ.**[3]** ಜರಾ ಎಂಬ ವ್ಯಾಧನು ಅರಣ್ಯದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ಶ್ರೀಕೃಷ್ಣನ ಪಾದವನ್ನೆ ಪಕ್ಷಿ ಎಂಬುದಾಗಿ ಭ್ರಮಿಸಿ, ಬಾಣಪ್ರಯೋಗ ಮಾಡಿ, ಆತನ ದೇಹತ್ಯಾಗಕ್ಕೆ ನಿಮಿತ್ತನಾದ ಸನ್ನಿವೇಶದಲ್ಲಿ, ಶ್ರೀರಾಮನು ವಾಲಿಯನ್ನು ಅಡಗಿನಿಂತು ಹೊಡೆದು ಕೊಂದ ಕರ್ಮಕ್ಕಾಗಿ ಶ್ರೀಕೃಷ್ಣ ಜನ್ಮದಲ್ಲಿ ವ್ಯಾಧಜನ್ಮವೆತ್ತಿ ಜರನಾಗಿ ಬಂದ ವಾಲಿಯ ಬಾಣದಿಂದಲೆ ಸಾಯಬೇಕಾಯಿತು ಎಂಬ ಕರ್ಮ ಸಿದ್ಧಾಂತದ ಅದಮ್ಯತೆಯನ್ನು ಸ್ಥಾಪಿಸಿ ಸಮಾಧಾನ ಪಡೆಯುತ್ತದೆ, ನ್ಯಾಯಪಕ್ಷಪಾತಿಯಾದ ಜನಮೋಧರ್ಮಬುದ್ಧಿ.

ಆಚಾರ್ಯ ಭೀಷ್ಮನಂತಹ ಮಹಾನ್ ದೇವಾಂಶ ವ್ಯಕ್ತಿಯ ವರ್ತನೆಯನ್ನು ಸಮಾಜದ ಸಾಮಾನ್ಯ ವ್ಯಕ್ತಿಯ ಲೌಕಿಕ ಮಾತ್ರವಾದ ವ್ಯವಹಾರವನ್ನು ಎಂತೊ ಅಂತೆ ಪರಿಶೀಲಿಸಿದರೆ ತಪ್ಪಾಗುತ್ತದೆ. ಲೋಕದಲ್ಲಿ ನಮಗೆ ಪೂರ್ಣದೃಷ್ಟಿ ಸಿದ್ಧಿಸುವುದು. ಅತ್ಯಪೂರ್ವವಾದರೂ ಮಹಾಭಾರತದಂತಹ ಮಹಾ ಕಾವ್ಯಲೋಕದಲ್ಲಿ ವ್ಯಾಸಮಹರ್ಷಿಯ ಕೃಪೆಯಿಂದ, ಪ್ರತಿಮಾರೂಪದಿಂದಲಾದರೂ, ಒಂದು ರೀತಿಯ ಪೂರ್ಣದೃಷ್ಟಿ ನಮಗೆ ಸಾಧ್ಯವಾಗುತ್ತದೆ. ಆ ಪೂರ್ಣದೃಷ್ಟಿಗೆ ಭೀಷ್ಮನು ಬರಿಯ ಒಂದು ಲೌಕಿಕ ರಾಜ್ಯದಲ್ಲಿ ಹೆಚ್ಚು ಸಂಬಳ ತೆಗೆದುಕೊಳ್ಳುವ ಒಬ್ಬ ಸೇನಾಪತಿ ಮಾತ್ರನಾಗುವುದಿಲ್ಲ. ಅವನು ಅಷ್ಟವಸುಗಳಲ್ಲಿ ಒಬ್ಬನಾಗುತ್ತಾನೆ. ಅವನ ಜೀವನ ಚರಿತ್ರೆ ನರತ್ವದಿಂದ ಮಾತ್ರವೆ ಮೊದಲಾಗುವುದಿಲ್ಲ. ಅದು ಊರ್ಧ್ವಲೋಕಗಳಲ್ಲಿ ಅವಿರ್ಭವಿಸಿ ಇಲ್ಲಿಗೆ ಅವತರಿಸುತ್ತದೆ. ಇಲ್ಲಿಯ ಅವನ ಅವಸಾನ ಅವನ ಪರ್ಯವಸಾನವಲ್ಲ. ಆ ಜೀವನ ರೇಖೆ ದಿವ್ಯಲೋಕಗಳಲ್ಲಿ, ಅನಂತವಾಗಿ, ದಿವ್ಯತರ ರೀತಿಗಳಿಂದ ಮುಂದುವರಿಯುತ್ತದೆ. ಅದಕ್ಕೆ ಒಂದಲ್ಲ ಅನೇಕ ರೀತಿಯ ಉದ್ದೇಶಗಳಿವೆ; ಅನೇಕ ಪ್ರಕಾರದ ಪ್ರಯೋಜನಗಳಿವೆ. ಅದರ ಒಂದೊಂದೂ ವರ್ತನೆಯ ಹೃದಯದಲ್ಲಿರುವ ಧರ್ಮಸೂಕ್ಷ್ಮತೆ ಅತ್ಯಂತ ಜಟಿಲ ಭೀಷ್ಮನಂತಹನನ್ನು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ, ಒಂದು ಸಾಹಿತ್ಯಗ್ರಂಥದ ಒಂದು ಮನುಷ್ಯಮಾತ್ರವಾದ 'ಪಾತ್ರ' ಎಂದು ಪರಿಗಣಿಸಿದರೆ ಸಾಲದು, ಮ್ಯಾಕ್‌ಬೆತ್‌ನ ದುರಂತ ಪಾತ್ರಗಳನ್ನು ಪರಿಶೀಲಿಸುವಂತೆ. ಪಾಶ್ಚಾತ್ಯ ಸಾಹಿತ್ಯವಿಮರ್ಶೆ ಕ್ರಿಸ್ತಮತದ ತತ್ತ್ವಗಳ ಮೇಲೆ ನಿಲ್ಲುತ್ತದೆ. ಆ ತತ್ತ್ವಗಳ ಎಲ್ಲ ಉಪಾಧಿಗಳಿಂದಲೂ ಅದು ಬದ್ಧವಾಗಿ, ಅತ್ಯಂತ ಪರಿಮಿತವೂ ಸಂಕುಚಿತವೂ ಆಂಶಿಕವೂ ಆಗುತ್ತದೆ. ಅದರ ಆ ನ್ಯೂನತೆಯಿಂದ ನಾವು ಪಾರಾಗಿ, ಸರ್ವತೋಮುಖವೂ ಸರ್ವಗ್ರಾಸಿಯೂ ಆಗಿರುವ ನಮ್ಮ ಋಷಿದರ್ಶನದ ಪೂರ್ಣದೃಷ್ಟಿಯ ಮೇಲೆ ನಿಲ್ಲಬೇಕಾಗುತ್ತದೆ. ಜನ್ಮಾಂತರ, ಕರ್ಮ, ದೇವತಾಂಶ, ಅವತಾರ, ವಿಭೂತಿ, ರಹಸ್ಯವಾಗಿರುವ ಅಲೋಕವೆ ಅಥವಾ ಲೋಕಾಂತರಗಳೆ ಪ್ರಕಟವಾಗಿರುವ ಲೋಕದ ವ್ಯಾಪಾರಗಳಿಗೆಲ್ಲ ಮೂಲಶಕ್ತಿ, ಮುಖ ಕಾರಣ ಮತ್ತು ಪ್ರಧಾನಪ್ರಚೋದನೆ-ಇತ್ಯಾದಿ ತತ್ತ್ವಗಳನ್ನೂ ಶ್ರದ್ಧೆಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲಿಸಿದರೆ ಭೀಷ್ಮನ ವರ್ತನೆ

ಅರ್ಥಪೂರ್ಣವಾಗುತ್ತದೆ, ಮಹೋದ್ದೇಶಪೂರ್ವಕವಾಗುತ್ತದೆ. ಪಾಶ್ಚಾತ್ಯ ಸಾಹಿತ್ಯ ಕೃತಿಗಳಲ್ಲಿ ಎಲ್ಲಿಯೂ ಕಾಣಬರದ ಅದ್ಭುತ ಪಾತ್ರಸೃಷ್ಟಿಯ ಕಲಾವೈಭವವನ್ನು ಸಂದರ್ಶಿಸಿ ರಸಾನಂದ ಪುಲಕಿತರಾಗುತ್ತೇವೆ.

ನಮ್ಮ ಪುರಾಣಕಾವ್ಯಗಳ ವಿರಾಟ್‌ಪಾತ್ರಗಳನ್ನೂ ದಿವ್ಯಚೈತನ್ಯಾವತರಣ ಪ್ರವಾಹಪಾತ್ರಗಳಾಗಿರುವ ಆ ದೇವಪಾತ್ರಗಳ ವರ್ತನೆಗಳನ್ನೂ ಲೋಕಸಾಮಾನ್ಯ ಜೀವನದ ಲೋಕವಾಸ್ತವಿಕ ಮನುಷ್ಯ ಪಾತ್ರಗಳ ವರ್ತನೆಯನ್ನು ಪರಿಶೀಲಿಸುವಂತೆ ಸಮೀಕ್ಷಿಸಿದರೆ ಸಾಹಿತ್ಯ ಮಾತ್ರವಾದ ಆಂಶಿಕ ಪ್ರಯೋಜನವನ್ನು ಪಡೆಯುತ್ತೇವೆಯೆ ಹೊರತು ಅಖಂಡ ಜೀವನದೃಷ್ಟಿಯ ಮಹತ್ತರ ಭವ್ಯವಾದ ಪೂರ್ಣ ಪ್ರಯೋಜನದಿಂದ ವಂಚಿತರಾಗುತ್ತೇವೆ. ಯಾವುದಾದರೂ ಒಂದು ಸಮಾಜಕ್ಕೆ ಅಥವಾ ಒಂದು ಜನಾಂಗಕ್ಕೆ, ಒಂದು ಕಾಲಕ್ಕೆ ಅಥವಾ ಒಂದು ಪ್ರದೇಶಕ್ಕೆ ಅಥವಾ ಒಂದು ಮಾನವ ವರ್ಗಕ್ಕೆ ಸಮ್ಮತವಾದ ನೀತಿ ದೃಷ್ಟಿಯ ಪರಿಪೂರ್ಣತೆಯನ್ನೆ ಅವರಲ್ಲಿ ಕಾಣಬೇಕೆಂದಾಗಲಿ ಅಥವಾ ಅವರು ಅದನ್ನೆ ಆದರ್ಶಿಸಬೇಕೆಂದಾಗಲಿ ಹಟ ಹಿಡಿದು ಹೊರಡುವ ವಿಮರ್ಶೆಗೆ ಆ ದಿವ್ಯಪಾತ್ರಗಳ ಶಕ್ತಿಯೆ ದೌರ್ಬಲ್ಯದಂತೆ ತೋರುತ್ತದೆ' ಅವರ ಜ್ಞಾನವೆ ಅಜ್ಞಾನದಂತೆ ಭಾಸವಾಗುತ್ತದೆ; ಅವರ ವರ್ತನೆಗಳ ಅಂತಃಸ್ವರೂಪವಾಗಿರುವ ಸ್ವಾತಂತ್ರ್ಯವೆ ಅವರ ಮನಸ್ಸಿನ ಅನಿಶ್ಚಯತೆಯ, ಚಿತ್ತದ ಚಂಚಲತೆಯ ಅಥವಾ ಹೃದಯದ ಅವಶತೆಯ ಪಾರತಂತ್ರ್ಯವೆಂಬಂತೆ ತೋರುತ್ತದೆ; ಅವರ ಪೂರ್ಣ ಪ್ರಜ್ಞಾರೂಢವಾದ ಧರ್ಮಬುದ್ಧಿ ಕೈಕೊಳ್ಳುವ ಕರ್ಮಗಳನ್ನೆ ನಮ್ಮ ಅಪೂರ್ಣ ದೃಷ್ಟಿಯ ಅಲ್ಪಬುದ್ಧಿ ಅಧರ್ಮವರ್ತನೆಗಳೆಂದು ಭ್ರಮಿಸುತ್ತದೆ.

ಆದರೆ ಪ್ರತಿಮಾವಿಧಾನದ ಕಲಾರಹಸ್ಯವನ್ನರಿತ ಪೂರ್ಣದೃಷ್ಟಿಗೆ ಅವರ ವರ್ತನೆಗಳ ಬಹು ಪ್ರಕಾರಾಂತರವಾದ ಜಟಿಲತೆಯ ನಿಜಸ್ವರೂಪ ಗೋಚರವಾಗಿ, ಅವರ ಅಲ್ಪ 'ಅನ್ಯಾಯ'ದ ಹೃದಯದಲ್ಲಿರುವ ಭೂಮನ್ಯಾಯವನ್ನೂ ಅವರ ಅಲ್ಪ 'ಅಧರ್ಮ'ದ ಹಿಂದಿರುವ ಮತ್ತು ಮುಂಬರುವ ಭೂಮಧರ್ಮವನ್ನೂ ಗ್ರಹಿಸುವ ಧೀಚೇತನೆ ತೃಪ್ತವಾಗುತ್ತದೆ: ಏಕೆಂದರೆ ಎಲ್ಲಿಯಂತೆ ಇಲ್ಲಿಯೂ

*" ಯೋ ವೈ ಭೂಮಾ ತತ್‌ಸುಖಂ ನಾಲ್ಪೇ ಸುಖಮಸ್ತಿ!"*
*"ಅಲ್ಪದೊಳ್ ಸೊಗಮಿಲ್ಲಮಾ ಭೂಮವೊಂದೆಯೆ ಸೊಗಂ!"*

* * *

---

[1] ಕವಿಕೃತಿಯಲ್ಲಿ ಅನನ್ಯಪರತಂತ್ರತೆ' ಎಂಬ ಲೇಖನದಲ್ಲಿ ವಿವರಣೆ ದೊರೆಯುತ್ತದೆ.
[2] Letters of Sri Aurobindo (Second series) Section Fourteen-'Avatarhood and Evolution' ಅಲ್ಲಿ ಈ ವಿಚಾರವಾಗಿ ಪತ್ರವ್ಯವಹಾರರೂಪದಲ್ಲಿರುವ ತಲಸ್ಪರ್ಶಿಯಾದ ಜಿಜ್ಞಾಸೆಯನ್ನು ಆಸಕ್ತಿಯಿರುವ ವಾಚಕರು ಓದಬಹುದು.
[3] ಜೈನಕಾವ್ಯಗಳಲ್ಲಂತೂ ಇದಕ್ಕೆ ಉದಾಹರಣೆಗಳು ಯಥೇಚ್ಛವಾಗಿ ದೊರೆಯುತ್ತವೆ.

# ಕವಿಕೃತಿಯ ಅನನ್ಯ ಪರತಂತ್ರತೆ

*" ನಿಯತಿಕೃತನಿಯಮರಹಿತಾಂ ಹ್ಲಾದೈಕಮಯೀಮನನ್ಯಪರತಂತ್ರಾಂ*
*ನವರಸರುಚಿರಾಂ ಇರ್ಮಿತಿಮಾದಧತೀ ಭಾರತೀ ಕರ್ವೇರ್ಜಯತಿ"*
*– ಕಾವ್ಯಪ್ರಕಾಶ*

ಆಂಗ್ಲೇಯ ಸಾಹಿತ್ಯದ ವಿಮರ್ಶಕರಲ್ಲಿ ಹಿರಿಯ ಹೆಸರಾದ ಎ.ಸಿ. ಬ್ರಾಡ್ಲೆಯವರು ಕವಿಕೃತಿಯ ಸ್ವರೂಪವನ್ನು ಕುರಿತು ಚರ್ಚಿಸುತ್ತಾ ಹೀಗೆ ಹೇಳುತ್ತಾರೆ: **'Its nature is to be not a part, nor yet a copy of the real world (as we commonoly understand that phrase) but to be a real world by itse**lf independent, complete, auronomous.'

[1] ಎಂದರೆ ಅವರ ಅಭಿಪ್ರಾಯದಂತೆ ಕವಿಕೃತಿ ವಾಸ್ತವವೆಂದು ನಮ್ಮಿಂದ ಪರಿಗಣಿತವಾಗಿ ಸತ್ಯವೆಂಬ ವಿಶೇಷಣದಿಂದ ಕರೆಯಿಸಿಕೊಳ್ಳುವ ಬಾಹ್ಯ ಜಗತ್ತಿನ ಒಂದು ಭಾಗವೂ ಅಲ್ಲ, ಅದರ ಒಂದು ಪ್ರತಿ ಅಥವಾ ನಕಲೂ ಅಲ್ಲ; ಏಕೆಂದರೆ ಅದು ತನಗೆ ತಾನೆ ಒಂದು ಲೋಕ; ಅನ್ಯಾಶ್ರಯ ನಿರಪೇಕ್ಷವಾದದ್ದು' ಸ್ವಸಂಪೂರ್ಣವಾದುದು ಸ್ವತಂತ್ರವಾದದ್ದು.
ಸೌಂದರ್ಯತತ್ತ್ವ ಸಮಾಲೋಚಕರಾದ ಇನ್ನೊಬ್ಬ ಆಂಗ್ಲೇಯ ವಿದ್ವಾಂಸರು ಎಸ್.ಅಲೆಗ್ಸಾಂಡರ್ ಎಂಬುವರು ಕಲಾಪ್ರಪಂಚೆ ಸ್ವರೂಪವನ್ನು ಕುರಿತು ಹೀಗೆ ಬರೆಯುತ್ತಾರೆ: **("We create an autonomous world, a blending of the physical with ourselves, and therefore a** new reality within the so-called real world[2] ಎಂದರೆ ಇವರ ಅಭಿಪ್ರಾಯದಂತೆ ಕಲಾಜಗತ್ತು, ಕಲಾಸೃಷ್ಟಿ, ಸಂಪೂರ್ಣವಾಗಿ, **'independent'**ಅಥವಾ ಅನ್ಯಾಧಾರದೂರವಾದದ್ದಲ್ಲ. ನಾವು **(Ourselves)** ಮತ್ತು ಲೋಕ **(Physical)** ಎರಡರ ಸಂಯೋಗದಿಂದ ಅದು ಹುಟ್ಟುತ್ತದೆ. ಸತ್ಯವೆಂದು ನಾವು ವಿಶೇಷಿಸುವ ಬಾಹ್ಯಜಗತ್ತಿನೊಳಗೆ ಅದೊಂದು ಹೊಸ ಸತ್ಯವಾಗುತ್ತದೆ; ಅಥವಾ ಹೊಸ ಸತ್ಯದ ಒಂದು ಲೋಕವಾಗುತ್ತದೆ.

ಸಾಹಿತ್ಯವಿಮರ್ಶೆಯ ಮೂಲತತ್ತ್ವಗಳನ್ನು ನವೀನ ವೈಜ್ಞಾನಿಕ ವಿಧಾನದಿಂದ ಪರೀಕ್ಷಿಸುವ ಮತ್ತು ಪ್ರಾಯೋಗಿಕವಾಗಿ ಸಮೀಕ್ಷಿಸುವ ಪ್ರಯತ್ನ ನಡೆಸಿರುವ ಮತ್ತೊಬ್ಬ ವಿಮರ್ಶಕರು**[3]** ಬ್ರಾಡ್ಲೆಯವರ ಮತವನ್ನು ಚಿಕಿತ್ಸೆಗೆ ಗುರಿಮಾಡಿ ಅದನ್ನು ಖಂಡಿಸಿದ್ದಾರೆ. **"This doctrine insists upon a severance between poetry and what, in oppsition, may be called life; a complete severance, allowing however, as Dr. Bradley goes on to insist-an 'underground' connection. But this 'underground' connection is all important**. What ever there is in the poetic experience has come through it. The world of poetry has in no sense any different reality from the rest of the world and it has no special laws and no other-worldly peculiarities. It is made up of experiences of exactly the same kinds as those that come to us in other ways" ಕಾವ್ಯಕ್ಕೂ ಜೀವನಕ್ಕೂ ಭಿನ್ನತೆಯನ್ನು ಕಲ್ಪಿಸುವುದಾಗಲಿ, ಒಂದಕ್ಕೊಂದನ್ನು ಎದುರುಮಾಡುವುದಾಗಲಿ ಬಹುಮಟ್ಟಿಗೆ ಲೋಕಾಯತ್ತವಾಗಿರುವ ಈ ದೃಷ್ಟಿಗೆ ಸಕಾರಣವಾಗಿ ತೋರುವುದಿಲ್ಲ. ಲೋಕಾನುಭವಕ್ಕೂ ಕಾವ್ಯಾನುಭವಕ್ಕೂ ಅಂತಹ ಸ್ವರೂಪವ್ಯತ್ಯಾಸವೇನೂ ಇಲ್ಲ. ಕಾವ್ಯಾನುಭವದಲ್ಲಿ ಏನಿದ್ದರೂ ಅದೆಲ್ಲ ಲೋಕಾನುಭವದಿಂದಲೇ ಬಂದದ್ದು. ಕಾವ್ಯಪ್ರಪಂಚದ ಸತ್ಯತೆ ವಾಸ್ತವಜಗತ್ತಿನ ಸತ್ಯದಿಂದ ಯಾವ ಅರ್ಥದಲ್ಲಿಯೂ ಪ್ರಭಿನ್ನವಾದುದಲ್ಲ. ಕಾವ್ಯಜಗತ್ತಿಗೇ ವಿಶೇಷವಾದ ಯಾವ ನಿಯಮಗಳೂ ಇಲ್ಲ. ನಿಯತಿಕೃತವಾದ ನಿಯಮಗಳಲ್ಲದೆ ಅನ್ಯ ಪ್ರಕಾರದ ನಿಯಮಗಳಾವುವೂ ಅಲ್ಲಿಲ್ಲ. ಎಲ್ಲ

ಕಾವ್ಯಾನುಭವಗಳೂ ಲೋಕಾನುಭವಗಳ ಜಾತಿಗೇ ಸೇರುತ್ತವೆ. ಸಮಲಕ್ಷಣವಾಗಿರುತ್ತವೆ. ಆ ಅನುಭವಕ್ಕೆ ರಸಾನುಭವಗಳ ಎಂದು ಹೆಸರಿಟ್ಟ ಮಾತ್ರಕ್ಕೆ ಅದರ ಸ್ವರೂಪ ಬದಲಾಯಿಸುವುದಿಲ್ಲ. ಆದ್ದರಿಂದ ರಸಾನುಭವಕ್ಕೆ ಅಲೌಕಿಕತೆಯನ್ನು ಆರೋಪಿಸುವುದರಲ್ಲಿ ಸ್ವಲ್ಪವೂ ಅರ್ಥವಿಲ್ಲ.

ಒಂದು ದೃಷ್ಟಿಗೆ ಕಾವ್ಯಲೋಕ ತನಗೆ ತಾನೆ ಸ್ವತಂತ್ರವಾದದ್ದು; ಸಂಪೂರ್ಣವಾಗಿ ಲೋಕಭಿನ್ನವಾದದ್ದು. ಮತ್ತೊಂದು ದೃಷ್ಟಿ ಅದಕ್ಕೆ ವಿರುದ್ಧವಾಗಿ ನಿಂತು ಕಾವ್ಯಲೋಕಕ್ಕೂ ಲೋಕಕ್ಕೂ ಯಾವ ಪ್ರಭಿನ್ನತೆಯೂ ಇಲ್ಲ ಎಂದು ವಾದಿಸುತ್ತದೆ. ಒಂದು ದೃಷ್ಟಿ ಕಲೆಯ ಅನುಭವವನ್ನು ಲೋಕದ ಅನುಭವಕ್ಕೆ ಭಿನ್ನವಾದ ಸ್ವರೂಪವುಳ್ಳ ಅನುಭವವೆಂದು ಸಾರಿ, ಅದಕ್ಕೆ 'ರಸಾನುಭವ' ಎಂದು ಹೆಸರಿಡುತ್ತದೆ.[4] ವಿರುದ್ಧದೃಷ್ಟಿ ಆ ಎರಡು ಅನುಭವಗಳಿಗೂ ಯಾವ ಪ್ರಭೇದವೂ ಇಲ್ಲ ಎಂದು ವಾದಿಸಿ. ಕಾವ್ಯಾನುಭವವೂ ಸಂಪೂರ್ಣವಾಗಿ ಲೌಕಿಕವೇ ಎಂಬ ಸಿದ್ಧಾಂತಕ್ಕೆ ಬರುತ್ತದೆ. ಇವೆರಡಕ್ಕೂ ನಡುವಣ ದೃಷ್ಟಿ ಕಾವ್ಯಲೋಕವೂ ಈ ಲೋಕಸತ್ಯದಿಂದಲೆ ಹೊಮ್ಮಿ ಈ ಲೋಕಸತ್ಯದ ಅಂತರದಲ್ಲಿಯೆ ಇರುವ ಒಂದು ಅಂಶಸತ್ಯ ಎನ್ನುತ್ತದೆ.

ಈ ವಿಚಾರವಾಗಿ ಭಾರತೀಯ ಕಾವ್ಯಮೀಮಾಂಸೆಯೂ ಅನೇಕ ಶತಮಾನಗಳ ಹಿಂದೆಯೇ ತನ್ನ ಮತವನ್ನು ಸೂಚಿಸಿದೆ. ಅದರ ಸೂತ್ರಪ್ರಾಯವಾದ ರೀತಿ, ಮೀಮಾಂಸೆಯನ್ನೂ ಛಂದೋಬದ್ಧವಾಗಿ ಕಾವ್ಯಪ್ರಾಯವಾಗಿ ಮಂಡಿಸುವ ಪದ್ಧತಿ, ಭಿನ್ನಭಿನ್ನವ್ಯಾಖ್ಯಾನಗಳಿಗೆ ಅವಕಾಶ ಕೊಡುವಂತೆ ಫಲವತ್ತಾಗಿದೆ. ಕಾವ್ಯ ಮತ್ತು ರಸಾನುಭವ ಇವುಗಳ ಲಕ್ಷಣ ಮತ್ತು ಸ್ವರೂಪಗಳ ವಿಚಾರವಾದ ಬರವಣಿಗೆಗಳನ್ನು ಓದುವಾಗ ನಾವು ಸಂಧಿಸುವ ಈ ಪದಗುಂಫನಗಳನ್ನು ಗಮನಿಸಬಹುದು: 'ನಿಯತಿಕೃತನಿಯಮರಹಿತ', 'ಅನನ್ಯ ಪರತಂತ್ರ', 'ಅಲೌಕಿಕ', 'ಲೋಕಾತಿಶಯ', 'ಲೋಕೋತ್ತರ', 'ಲೋಕಾತಿ ಕ್ರಾಂತ', ಇತ್ಯಾದಿ.

ಕಾವ್ಯಕ್ಕೂ ಲೋಕಕ್ಕೂ, ಕಾವ್ಯಾನುಭವ ಅಥವಾ ರಸಾನುಭವಕ್ಕೂ ಲೋಕಾನುಭವಕ್ಕೂ ಇರುವ ಸಂಬಂಧದ ಲಕ್ಷಣಗಳನ್ನು ಮತ್ತು ಸ್ವರೂಪವನ್ನು ಅರಿಯಲು ಈ ಮೇಲಣ ಪದಗಳು ಸೂಚಿಸುವ ತತ್ತ್ವದಿಂದ ನಮಗೇನಾದರೂ ಸಹಾಯ ಒದಗುತ್ತದೆಯೆ? ಅದರಲ್ಲಿಯೂ 'ಅನನ್ಯಪರತಂತ್ರ' ಎಂಬ ಪದಗುಂಫನದ ತತ್ತ್ವದೀಪ್ತಿಯಿಂದ ಈ ಸಮಸ್ಯೆ ಹೇಗೆ ಪರಿಹರವಾಗುತ್ತದೆ ಎಂಬುದನ್ನು ಸಮಾಲೋಚಿಸುವುದೆ ಈ ಲೇಖನದ ಮುಖ್ಯ ಲಕ್ಷ್ಯ.

'ಅನನ್ಯಪರತಂತ್ರ' ಎಂದರೇನು? ಕವಿಕೃತಿ ಹೇಗೆ 'ಅನನ್ಯಪರತಂತ್ರ'ವಾಗುತ್ತದೆ?

'ಸ್ವತಂತ್ರ', 'ಪರತಂತ್ರ', 'ಅನ್ಯಪರತಂತ್ರ''ಅನನ್ಯಪರತಂತ್ರ'-ಈ ಪದಗಳ ಅರ್ಥವೇನೆಂಬುದನ್ನು ಪರಿಶೀಲಿಸಿ, ಅದರಲ್ಲಿ ಯಾವುದು ಕವಿಕೃತಿಯ ಸ್ವರೂಪ ಲಕ್ಷಣಗಳನ್ನು ತಿಳಿಸುವುದರಲ್ಲಿ ಕೃತಕೃತ್ಯವಾಗುತ್ತದೆ, ನೋಡೋಣ.

ಸ್ವತಂತ್ರ ಎಂದರೆ ತನಗೆ ತಾನೆ ತಂತ್ರ[5]ವಾದದ್ದು. ತಂತ್ರ ಎಂದರೆ ಯಾವ ವಿಧಾನವನ್ನು ಅನುಸರಿಸಿದರೆ ಇಚ್ಛೆ ಕ್ರಿಯೆಯಾಗುತ್ತದೆಯೋ ಆ ವಿಧಾನ ಅಥವಾ ಆ ವಿಧಾನದ ಜ್ಞಾನ ಅಥವಾ ಆ ವಿಧಾನದ ಶಕ್ತಿಜ್ಞಾನ. ಸಾಧನೆಯ ಒಂದು ಕ್ರಮ ಅಥವಾ ಉಪಾಯ ಎಂದೂ ಅರ್ಥವಾಗುತ್ತದೆ. ಸ್ವತಂತ್ರ ಎಂದರೆ ಇಚ್ಛಾಸಾಧನೆಯ ಆ ಕ್ರಮ ಅಥವಾ ಉಪಾಯ ಅಥವಾ ವಿಧಾನ ಅನ್ಯೇಚ್ಛೆಯದಾಗಿ. ಅಜ್ಞಾನಸ್ವರೂಪದ್ದಾಗಿ, ಅನ್ಯಾಶ್ರಯ ಸಾಪೇಕ್ಷಣೀಯವಾಗಿ, ಬಲಾತ್ಕಾರರೂಪದ್ದಾಗಿ, ಅವಶವಾಗಿ ತಾನು ಮಾಡತಕ್ಕದ್ದಲ್ಲ; ಸ್ವವಶವಾಗಿ, ಸ್ವೇಚ್ಛವಾಗಿ,

ಸ್ವಸಂತೋಷಕಾರಣೋದ್ದೇಶ ಪ್ರಯೋಜನದ್ದಾಗಿ, ಅನ್ಯಾಶ್ರಯ ನಿರಪೇಕ್ಷಣೀಯವಾಗಿ ತನಗೆ ತಾನೆ ಕೈಕೊಳ್ಳುವ ತಂತ್ರವುಳ್ಳದ್ದು. ಈ ಅರ್ಥದಲ್ಲಿ ಕವಿಕೃತಿಯನ್ನು ಸ್ವತಂತ್ರ ಎಂದು ವರ್ಣಿಸುವ ಹಾಗಿಲ್ಲ. ಏಕೆಂದರೆ ಈ ಅರ್ಥದಲ್ಲಿ ಕವಿಯೇ 'ಸ್ವತಂತ್ರ'ನಲ್ಲ. ಇನ್ನು ಅವನ ಕೃತಿಗೆಲ್ಲಿಂದ ಬಂದೀತು ಈ ಸ್ವಾತಂತ್ರ್ಯ? ಅಲ್ಲದೆ ಕಲಾಕೃತಿ ಲೋಕವಸ್ತು ಲೋಕಾನುಭವ ಲೋಕಭಾವ ಇತ್ಯಾದಿಗಳನ್ನೆಲ್ಲ ತನಗೆ ಬಂಡವಾಳವಾಗಿ ಮೂಲಾಧಾರವಾಗಿ ಇಟ್ಟುಕೊಳ್ಳದೆ ಗತಿಯಿಲ್ಲ. ಅನೇಕ ಕವಿಕೃತಿಗಳು ನೂರಕ್ಕೆ ನೂರು ಪಾಲೂ ಲೋಕಕ್ಕೆ ಋಣಿಗಳಾಗಿರುತ್ತವೆ. ಎಲ್ಲಿಯೋ ಅತ್ಯಪೂರ್ವವಾಗಿ ಯಾವನಾದರೊಬ್ಬ ಕವಿ ಯೋಗಿಯೂ ಆಗಿ ಅನ್ಯಲೋಕಾನುಭವಗಳನ್ನು ಪಡೆದಿದ್ದರೂ ಅವನ ಮಾನುಷವಾದ ಕಲ್ಪನೆ ಅವುಗಳನ್ನು ಗ್ರಹಿಸುವಾಗಲೇ ಅವುಗಳಿಗೆ ಅನಿವಾರ್ಯವಾಗಿ ಲೋಕತ್ವವನ್ನು ಆರೋಪಿಸಿ, ಲೋಕಧರ್ಮಿಯಾಗಿ, ಪ್ರತಿಮಾ ವಿಧಾನದಿಂದ ಅವುಗಳಿಗೆ ರೂಪಧಾರಣೆ ಮಾಡಿಸುವುದರಿಂದ 'ಕೃತಿ'ಯಾಗುವಾಗಲೆ ತನ್ನ 'ಸ್ರತಂತ್ರತೆ'ಯನ್ನೂ ಬಿಟ್ಟುಕೊಡಲೇ ಬೇಕಾಗುತ್ತದೆ. ಆದ್ದರಿಂದ ಯಾವ ದೃಷ್ಟಿಯಿಂದ ಪರಿಶೀಲಿಸಿದರೂ ಕವಿಕೃತಿ ಈ ಅರ್ಥದಲ್ಲಿ 'ಸ್ವತಂತ್ರ'ಎಂಬ ವಿಶೇಷಣಕ್ಕೆ ಅರ್ಹವಾಗಲಾರದು. ಬಹುಶಃ ಈ ಅರ್ಥದಲ್ಲಿ ಸರ್ವೇಶ್ವರನೊಬ್ಬನಿಗೆ ಹೊರತು ಇನ್ನಾರಿಗೂ 'ಸ್ವತಂತ್ರ' ಎಂಬ ಬಿರುದು ಸಲ್ಲುವುದಿಲ್ಲ.

ಹಾಗಾದರೆ 'ಕವಿಕೃತಿ'ಯನ್ನು 'ಪರತಂತ್ರ' ಎಂಬ ವಿಶೇಷದಿಂದ ಕರೆಯಬಹುದೆ? ಕೆಲವು ಕಾರಣಗಳಿಗಾಗಿ ಹಾಗೆ ಕರೆಯಬಹುದಾಗಿ ತೋರಿದರೂ ಅದು ಸಂಪೂರ್ಣವಾಗಿ 'ಪರತಂತ್ರ'ವಲ್ಲ. ಲೋಕಕ್ಕೂ ಲೋಕಾನುಭವಕ್ಕೂ ಲೋಕವಸ್ತುವಿಗೂ ಅದು ಋಣಿ ಎನ್ನುವುದರಿಂದ ಹಾಗೆ ಕರೆಯಬಹುದಾದರೂ ಹೆಸರಿಗಾಗಿಯೋ ಹಣಕ್ಕಾಗಿಯೋ ರಾಜದಾಕ್ಷಿಣ್ಯಕ್ಕಾಗಿಯೋ ಶ್ರೀಮಂತದಕ್ಷಿಣೆಗಾಗಿಯೋ ಕವಿ ತ್ನ ಕೃತಿಯನ್ನು ರಚಿಸುತ್ತಾನೆ ಎನ್ನುವ 'ಪರತಂತ್ರ'ತೆ ನಮಗಿಲ್ಲಿ ಪ್ರಕೃತವಲ್ಲ. ಆದರೆ ನಿಜವಾದ ಕವಿಯ ಉತ್ತಮಕೃತಿ ಯರ ಬಲಾತ್ಕಾರದಿಂದಲೂ ಹೊಮ್ಮುವುದಿಲ್ಲ. ಯಾರ ಆಜ್ಞೆಯಿಂದಲೂ ಅದು ಸಿದ್ಧವಾಗುವುದಿಲ್ಲ. ಹಿಂದೆ ಹೇಳಿದ ಕೇವಲವಾದ ಸ್ವಾತಂತ್ರ್ಯದ ಒಂದು ಛಾಯೆ ಇರುವಂತೆ ತೋರುತ್ತದೆ. ಅಷ್ಟೇ ಅಲ್ಲ, ಕವಿಕೃತಿ ಲೋಕಾನುಕೃತಿಯಾದರೂ ಲೋಕದ ಪ್ರತಿಕೃತಿ ಆಗಿರುವುದಿಲ್ಲ. ಚರಿತ್ರೆ ಒಂದು ಘಟನೆಯನ್ನು ವರ್ಣಿಸುವುದಕ್ಕೂ ಅದೇ ಘಟನೆಯನ್ನು ಒಂದು ಕಾವ್ಯ ಚಿತ್ರಿಸುವುದಕ್ಕೂ ಎಷ್ಟು ತಾರತಮ್ಯ! ಚರಿತ್ರೆ ಎಷ್ಟು ಪ್ರತಿಕೃತಿ ಆಗಿದ್ದರೆ ಅಷ್ಟೂ ಶ್ರೇಷ್ಠ, ಅಷ್ಟೂ ವೈಜ್ಞಾನಿಕ. ಆದರೆ ಕಾವ್ಯಕಾರ ಇತಿಹಾಸಕಾರನನ್ನು ಅನುಕರಿಸುವುದಿಲ್ಲ. ಸ್ವಕಲ್ಪಿತವಾದ ಘಟನೆಗಳನ್ನೂ ಸನ್ನಿವೇಶಗಳನ್ನೂ ವ್ಯಕ್ತಿಗಳನ್ನೂ ಕಡೆಗೆ ಸ್ಥಳವಿಶೇಷಗಳನ್ನೂ ಚಿತ್ರಿಸಿ ಕಥೆ ಕಟ್ಟುತ್ತಾನೆ. ಈ ದೃಷ್ಟಿಯಿಂದ ಕವಿ ಇತಿಹಾಸಕಾರನಷ್ಟು 'ಪರತಂತ್ರ'ನಲ್ಲ. ಅಷ್ಟೇ ಅಲ್ಲ, ರಾಮಾಯಣ ಮಹಾಭಾರತದಂತಹ ಪ್ರಸಿದ್ಧ ಕಾವ್ಯವಿಷಯಗಳನ್ನು ತೆಗೆದುಕೊಂಡು ಕವಿ ತನ್ನ ಕಾವ್ಯಗಳನ್ನು ಸೃಷ್ಟಿಸುವಾಗಲೂ ಅವನು ತನ್ನದೆ ಆದ ವ್ಯತ್ಯಾಸಗಳನ್ನು ಮಾಡಿಕೊಂಡು ಮೂಲಕ್ಕಿಂತಲೂ ಉತ್ತಮತರ ಕೃತಿಗಳನ್ನು ನಿರ್ಮಿಸಿದ ನಿದರ್ಶನಗಳು ಬೇಕಾದಷ್ಟಿವೆ. ಆದ್ದರಿಂದ ಕವಿಕೃತಿ ಸಂಪೂರ್ಣವಾಗಿ 'ಪರತಂತ್ರ'ವೂ ಅಲ್ಲ; ಸಂಪೂರ್ಣವಾಗಿ 'ಸ್ವತಂತ್ರ'ವೂ ಅಲ್ಲ.

ಹಾಗಾದರೆ ಅದನ್ನು 'ಅನ್ಯಪರ ತಂತ್ರ' ಎಂದು ಕರೆಯಬಹುದೆ? 'ಅನ್ಯಪರ ತಂತ್ರ' ಎಂದರೆ ಯಾವ ಕಾವ್ಯದ ತಂತ್ರವು ಇನ್ನೊಬ್ಬರ ಪರವಾಗಿ ಮಾತ್ರ ಎಂದರೆ ಇನ್ನೊಬ್ಬರು ಇಟ್ಟ ಹೆಜ್ಜೆಯಲ್ಲಿ, ಹಾಕಿಕೊಟ್ಟ ಹಾದಿಯಲ್ಲಿ, ಗುರುತು ಮಾಡಿದ ಗೆರೆಯಲ್ಲಿ ಒಂದಿನಿತೂ ಅತ್ತ ಇತ್ತ ಅಲುಗದೆ ಚಲಿಸುವುದು ಎಂದರ್ಥ. ಇಲ್ಲಿ ನಿರ್ಬಂಧವನ್ನು ಒಪ್ಪಿಕೊಳ್ಳುವ ಮುನ್ನ ಯಾವ ಬಲಾತ್ಕಾರವೂ ಇರುವುದಿಲ್ಲ. ಅಂತಹ ಒಪ್ಪಿಗೆ ಕೊಡುವುದಕ್ಕೂ ಬಿಡುವುದಕ್ಕೂ ವ್ಯಕ್ತಿ ಸ್ವತಂತ್ರನೆ. ಆದರೆ ಒಪ್ಪಿಗೆ ಕೊಟ್ಟಮೇಲೆ ಆ ನಿರ್ಬಂಧದಂತೆ ನಡೆಯುವುದು ಅವಶ್ಯಕರ್ತವ್ಯವಾಗುತ್ತದೆ. ಸೇನೆಗೆ ಸೇರಿದ ಸೈನಿಕನ ಕವಾತಿನಂತೆ. ಕಾವ್ಯಗಳಲ್ಲಿ ಬಹುಭಾಗಕ್ಕೆ ಈ 'ಅನ್ಯಪರತಂತ್ರ' ಲಕ್ಷಣ ಅನ್ವಯಿಸುತ್ತದೆ,

ನಿಜ. ಆದರೂ ನಾವು ಉತ್ತಮ ಕೃತಿಯ ಉತ್ತಮತೆಯನ್ನು ಗುರುತಿಸುವುದು ಕಾವ್ಯದ 'ಅನ್ಯಪರ ತಂತ್ರ'ವಾದ ಭಾಗದಿಂದಲ್ಲ. ಪ್ರತಿಕೃತಿಯ ಕಾವ್ಯಗಳು ಬಹುಮಟ್ಟಿಗೆ 'ಅನ್ಯಪರ ತಂತ್ರ'ವಾಗಿದ್ದರೂ ಪ್ರತಿಭಾಶಾಲಿಯಾದ ಯಾವ ಕವಿಯ ಸ್ವತಂತ್ರ ಕೃತಿಗಳನ್ನಾಗಲಿ ಪ್ರತಿಮಾವಿಧಾನದ ಮಹಾಕಾವ್ಯಗಳಾನ್ನಗಲಿ ಹಾಗೆ ಕರೆಯಲಾಗುವುದಿಲ್ಲ. ಒಂದು ಕಾವ್ಯದ ಭಾಷಾಂತರವನ್ನಾಗಲಿ ಅಥವಾ ಅದರ ಸಂಪೂರ್ಣವಾದ ಅನುಕರಣೆಯನ್ನಾಗಲಿ 'ಅನ್ಯಪರ ತಂತ್ರ'ಕ್ಕೆ ಮೀರಬಹುದು. ಆದ ಕಾರಣ ಕವಿಕೃತಿಯನ್ನು 'ಅನ್ಯಪರ ತಂತ್ರ'ವಲ್ಲದುದು ಎಂದು ಕರೆದಿದ್ದಾರೆ. ಅದು ಕೇವಲ 'ಸ್ವತಂತ್ರ'ವೂ ಅಲ್ಲ, ಕೇವಲ 'ಪರತಂತ್ರ'ವೂ ಅಲ್ಲ; ಸಂಪೂರ್ಣವಾಗಿ 'ಅನ್ಯಪರತಂತ್ರ'ವೂ ಅಲ್ಲ, ಅದು 'ಅನನ್ಯಪರ ತಂತ್ರ'.

'ಅನನ್ಯಪರ ತಂತ್ರ' ಎಂದರೆ 'ತನ್ನತನ'ದ ತಂತ್ರವುಳ್ಳದ್ದು ಅಥವಾ ಆತ್ಮತಂತ್ರವಾದದ್ದು. ಆ 'ತನ್ನತನ'ದಲ್ಲಿ ಅಸ್ವತಂತ್ರತೆ ಇರಬಹುದು; ಅಂದರೆ, ಅನ್ಯಮೂಲಗಳಿಂದ ಆಹಾರ ಪಡೆದು, ಅನ್ಯಾಧಾರಗಳಿಂದ ಪುಷ್ಟಿಹೊಂದಿ, ನರರೂಪದ ಲೋಕರೂಪದ ಕೃತಿರೂಪದ ಅನೇಕ ಗುರುಗಳಿಂದ ದೀಕ್ಷೆವೆತ್ತು ಎನಿತೆನಿತೊ ಕೃಪೆಗೆ ಋಣಿಯಾಗಿ ಆ 'ತನ್ನತನ' ಸಿದ್ಧವಾಗಿರಬಹುದು. ಆದರೆ ಕೃತಿಯ ತಂತ್ರ ಕವಿಯ ಆ 'ತನ್ನತನ'ಕ್ಕೆ ಮಾತ್ರ ಒಳಪಟ್ಟದು; 'ಸ್ವಪರ ತಂತ್ರ'ವಾದದ್ದು. ವಿಷಯ, ಕಥೆ, ವಸ್ತು, ಭಾವ ಇವು ಪ್ರಕೃತಿ ಲೋಕದಿಂದಲೊ ಇತರ ಕೃತಿಲೋಕಗಳಿಂದಲೊ ಬಂದಿರಬಹುದು. ಆದರೆ ಅವೆಲ್ಲವೂ ಕವಿಯ 'ತನ್ನತನದ'ದ ಶಕ್ತಿರಸಗಳಲ್ಲಿ ಜೀರ್ಣವಾಗಿ, ಅವನ ಹೃದಯ ಸಂವೇದನದಿಂದ ಆರ್ದ್ರವಾಗಿ, ಅವನ ರಸಾನುಭವದಿಂದ ಪರಿವರ್ತಿತವಾಗಿ, ನವೋನವವಾಗಿ, ಆ ಹೊಸತನಕ್ಕೆ ತಕ್ಕಂತೆ, ಅದರ ಶಕ್ತಿ ಸೌಂದರ್ಯ ರಸ ಸತ್ಯ ಇವುಗಳ ಅಭಿವ್ಯಕ್ತಿಗೆ ಸಮರ್ಥವೂ ಸಮರ್ಪಕವೂ ಆದ ಮುಖಪಾತ್ರಗಳಾಗಿ, ನೂತನವೂ ವಿವಿಧವೂ ಆಗಿರುವ ಅಂಗ ಉಪಾಂಗ ಅವಯವಗಳನ್ನು ಮೊಳೆಯಿಸಿ, ಬಳೆಯೆಸಿ, ಅರಳಿಸಿ, ಹೊಸ ರೂಪಧಾರಣೆಮಾಡಿ ಹೊಸ ಜನ್ಮವೆತ್ತಬೇಕಾಗುತ್ತದೆ**[6]** ಕವಿಯ ನವೀನ 'ದರ್ಶನ' ಪ್ರಕಾಶನಕ್ಕಾಗಿಯೆ ಹೊಮ್ಮುವ ನವೋನವ ಪ್ರತಿಮೆಯಾಗಬೇಕಾಗುತ್ತದೆ. ಉತ್ತಮಕವಿಯ ಯಾವ ಕೃತಿಯನ್ನು ತೆಗೆದುಕೊಂಡರೂ ಅದು 'ಅನನ್ಯಪರ-ತಂತ್ರತೆ'ಗೆ ನಿದರ್ಶನವಾಗುತ್ತದೆ.**[7]**

ಕವಿಕೃತಿ ಸಂಪೂರ್ಣವಾಗಿ ಲೋಕಭಿನ್ನವಾದುದೂ ಅಲ್ಲ; ಸಂಪೂರ್ಣವಾಗಿ ಲೋಕಾಶ್ರಯವಾದುದೂ ಅಲ್ಲ; ಸಂಪೂರ್ಣವಾಗಿ ಲೋಕಾನುಕೃತಿಯೂ ಅಲ್ಲ. ಅದೊಂದು ಅನನ್ಯಪರ-ತಂತ್ರವಾದ ಪ್ರತಿಮಾ.**[8]**

ಈ ಅರ್ಥದಲ್ಲಿ ಮಾತ್ರ ಕವಿಕೃತಿಯನ್ನೂ ಅದರಿಂದೊದಗುವ ರಸಾನುಭವವನ್ನೂ 'ಅಲೌಕಿಕ' ಎಂಬ ವಿಶಾಲಾರ್ಥದ ವಿಶೇಷಣದಿಂದ ವರ್ಣಿಸಬಹುದು; ಲೋಕಕ್ಕೆ ಸಂಪೂರ್ಣವಾಗಿ ಭಿನ್ನವಾದುದು ಎಂಬ ಅರ್ಥದಲ್ಲಿ ಅಲ್ಲ. ಬಹುಶಃ 'ಲೋಕಾತಿಶಯ', 'ಲೋಕೋತ್ತರ', 'ಲೋಕಾತಿಕ್ರಾಂತ' ಎಂಬ ಪದಗಳಿಂದ ಈ ವಿಷಯದಲ್ಲಿ ನಮಗೆ ಹೆಚ್ಚು ಬೆಳಕು ದೊರೆಯಬಹುದೆಂದು ತೋರುತ್ತದೆ.**[9]**

* * *

---

[1] "Oxford Lectures on Poetry" ಎಂಬ ಗ್ರಂಥದ' **'Poetry for Poetry's Sake'**ಎಂಬ ಪ್ರಬಂಧದಲ್ಲಿ.
[2] "Beauty and Other forms of Value" ಎಂಬ ಗ್ರಂಥದಲ್ಲಿ.

[3] I.A.Richards-‘Principles of Literary Criticism’

[4] To appreciate a work of art we need bring with us nothing from life, no knowledge of its ideas and affairs, no familiarity with its emotions.” ಕ್ಲೈವ್ ಬೆಲ್ **(Clive Bell)** ವಿಮರ್ಶಕರ ಈ ವಾದದಲ್ಲಿರುವ ಅತಿರೇಕ ಆ ದೃಷ್ಟಿಯ ಒಂದು ತುತ್ತತುದಿ ಎಂದು ಹೇಳಬಹುದು.

[5] ‘ವಿಭೂತಿ ಪೂಜೆ’ ಎಂಬ ಗ್ರಂಥದಲ್ಲಿ ‘ನವಭಾರತಕ್ಕೆ ವಿವೇಕಾನಂದರ ಸಂದೇಶ’ ಎಂಬ ಪ್ರಬಂಧವನ್ನು ನೋಡಿ.

[6] “The poet who borrows his ‘idea’ borrows only a subject, the whole work of expressing the impressions it has stirred in him remains to be done. A bad poet may confine himself to a description of the material detail of a picture, a good one may do what Keats did with the Greecian Urn.”-A.E.Powell.

[7] ಈ ಅನನ್ಯಪರತಂತ್ರತೆಗೂ ಒಂದು ಮಿತಿ ಇದೆ ಎಂಬುದನ್ನು ಉತ್ತಮ ಕವಿ ನಿರ್ಲಕ್ಷಿಸುವುದಿಲ್ಲ. ಅನನ್ಯಪರತಂತ್ರತೆ ಔಚಿತ್ಯಕ್ಕೆ ಒಳಗಾಗದಿದ್ದರೆ ‘ವಿಕಲ್ಪನೆಯಾಗುತ್ತದೆ. ‘ಕಲ್ಪನೆ’ಗೆ ಇರುವ ಸ್ವಾತಂತ್ರ್ಯ ‘ಉಚಿತ’ವನ್ನು ಮೀರಿದರೆ ರಸಭಂಗಕ್ಕೆ ಕಾರಣವಾಗುತ್ತದೆ; ‘ಅನುಚಿತ’ಕ್ಕೆ ಕಾಲಿಟ್ಟರೆ ವಿಕಲ್ಪನಾಸೃಷ್ಟಿಗೂ ರಸಾಭಾಸಕ್ಕೂ ಎಡೆಗೊಡುತ್ತದೆ. ಉದಾಹರಣೆಗಾಗಿ ಕನ್ನಡದ ಒಬ್ಬ ಕಾದಂಬರಿಕಾರನ ಕಲ್ಪನೆ ತನ್ನ ಕಥಾನಾಯಕನನ್ನು ಚಾಮುಂಡಿಬೆಟ್ಟದ ಬುಡದಲ್ಲಿ ಹರಿಯುವಂತೆ ವರ್ಣಿತವಾದ ಗಂಗಾ ನದಿಯಲ್ಲಿ ಮೀಯಿಸಿ. ಅದರ ನೆತ್ತಿಯ ಮೇಲಿರುವಂತೆ ವರ್ಣಿತವಾದ ಮಂಜುಗಡ್ಡೆಯಿಂದ ಉತ್ಪನ್ನವಾದ ಶೀತಲ ಜಲಪಾನದಿಂದ ಅವನ ಬಾಯಾರಿಕೆಯನ್ನು ತಣಿಸಿತೆಂದು ಇಟ್ಟುಕೊಂಡರೆ ಎಂತಹ ‘ವಿಕಲ್ಪನೆ’ಗೂ ‘ಅಭಾಸ’ಕ್ಕೂ ಕಾರಣವಾದೀತು? ಆದ್ದರಿಂದಲೆ ‘ಪ್ರತಿಕೃತಿಯ’ಸಾಹಿತ್ಯ ಬಾಹ್ಯಲೋಕಸತ್ಯಕ್ಕೆ ಕಟ್ಟುಬೀಳುವ ಪಾರತಂತ್ರ್ಯವನ್ನು ತನ್ನ ಕ್ಷೇಮಕ್ಕಾಗಿಯೆ ಒಪ್ಪಿಕೊಳ್ಳುತ್ತದೆ.

ಹೀಗೆ ಪ್ರತ್ಯಕ್ಷಸಿದ್ಧವಾದ ಭೌಗೋಲಿಕದಂತಹ ಸತ್ಯಕ್ಕೆ ಭಂಗತರುವುದು ಎಷ್ಟು ಅನುಚಿತವೋ ಅಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಅನುಚಿತವಾಗುತ್ತದೆ ಒಂದು ದೇಶ ಅಥವಾ ಜನಕೂಟದ ಸಮಷ್ಟಿಮನೋಭೂಮಿಕೆಯಲ್ಲಿ ಬಾಹ್ಯಜಗತ್ತಿನ ಭೌಗೋಲಿಕ ಸತ್ಯಕ್ಕಿಂತಲೂ ಸುಸ್ಥಿರವಾಗಿ ಸುಪ್ರತಿಷ್ಠಿತವಾಗಿ ಶಾಶ್ವತರೂಪವಗಿ, ಐತಿಹಾಸಿಕ ಘಟನೆ ವ್ಯಕ್ತಿ ಚಾರಿತ್ರಗಳಿಗಿಂತಲೂ ಸುವ್ಯಕ್ತವೂ ಸುಸ್ಪಷ್ಟವೂ ಸುಪರಿಚಿತವೂ ಅನುಲಂಘನೀಯವೂ ಆಗಿ ಸಂಸ್ಥಾಪಿತವಾಗಿರುವ ಪ್ರತಿಮಾರೂಪವಾದ ಸತ್ಯಗಳಿಗೆ ಭಂಗವೊದಗಿದಾಗ, ವಿಕಾರವುಂಟಾದಾಗ ಅಥವಾ ಕಾವ್ಯಸತ್ತೆಯಲ್ಲಿ ಖತಪಲ್ಲಟ ಸಂಭವಿಸಿದಾಗ.

‘ಅಶ್ವತ್ಥಾಮನ್’ ನಾಟಕ ಹೊರಬಿದ್ದಾಗ ಜನಮನಸ್ಸು ಕನಲಿ ಆಲೋಡಿತವಾದದ್ದು ನಿಜವಾಗಿಯೂ ಖತಪಲ್ಲಟದ ಕಾರಣಕ್ಕಾಗಿಯೆ ಹೊರತು ಚಿರಂಜೀವಿ ಸತ್ತನೆಂಬುಷ್ಟಕ್ಕೇ ಅಲ್ಲ. ನಮ್ಮ ಪೌರಾಣಿಕ ಮಹಾವ್ಯಕ್ತಿಗಳಾರೂ ‘ಆತ್ಮಹತ್ಯೆ’ಯ ಅಗೌರವಕ್ಕೆ ಕೈಯಿಟ್ಟವರಲ್ಲ. ಇಂತಹ ಒಂದು ಸಂಸ್ಕೃತಿಯ ಮನೋಧರ್ಮಕ್ಕೇ ಅಸಂಭವನೀಯವಾದ, ಅಸಾಧ್ಯವಾದ, ಅಸ್ವಾಭಾವಿಕವಾದ, ವಿಕೃತವಾದ ಕಾರ್ಯವು ದ್ರೋಣಾಚಾರ್ಯರ ಪುತ್ರನೂ ರುದ್ರಾವತಾರಿಯೂ ಜ್ಞಾನಿಯೂ, ಸಾಲದ್ದಕ್ಕೆ ಬೇರೆ ಚಿರಂಜೀವಿಯೂ ಆಗಿರುವ ಅಶ್ವತ್ಥಾಮನಿಂದ ನಡೆಯಿತೆಂದು ಚಿತ್ರಿಸುವುದು ಚಾಮುಂಡಿಬೆಟ್ಟದ ಬುಡದಲ್ಲಿ ಗಂಗೆಯನ್ನು ಹರಿಸುವುದಕ್ಕಿಂತಲೂ ವಿಕೃತವಾದದ್ದು. ಏಕೆಂದರೆ ಅದು ಸಮಷ್ಟಿಮನೋಧರ್ಮದ ಒಂದು ಶಾಶ್ವತ ನಿಯತಿನ್ಯಾಯಕ್ಕೇ ವಿರುದ್ಧವಾಗುತ್ತದೆ. ಈ ವಿರೋಧವು

ಅತಿ ‘ಊರ್ಧ್ವಗಾಮಿ’ಯಾಗುವ ಅನನ್ವಯದಿಂದ ಒದಗುವುದಕ್ಕಿಂತಲೂ ಹೆಚ್ಚಾಗಿ ಅತಿ ‘ಅಧೋಗಾಮಿ’ಯಾಗುವ ಅನನ್ವಯದಿಂದ ಉಲ್ಬಣಿಸುತ್ತದೆ.

*ಈ ಅನನ್ವಯ ದೋಷದಿಂದ ಉಂಟಾಗುವ ರಸಾಭಾಸದ ವಿಚಾರವಾಗಿ ಬ್ರಾಡ್ಲೆ ಹೀಗೆ ಬರೆದಿದ್ದಾರೆ:* “I f an artist alters a reality (e.g. awell-known scene or historical character) so much that his product clashes violently with our familiar ideas, he may be making a mistake; not because his product is untrue to the reality (this by itself is perfectly irrelevant), but because the ‘untruth’ may make it difficult or impossible for others to appropriate his product, or because this product may be aesthetically inferior to the reality even as it exists in the general imagination.” *ವಾಲ್ಮೀಕಿ ರಾಮಾಯಣದ ಕಥೆಯಲ್ಲಿಯೇ ಬೆಳೆದ ಮನೋಧರ್ಮಕ್ಕೆ ಪಂಪರಮಾಯಣದ ಜೈನಕಥೆಯನ್ನೋದಿದಾಗ ಆಗುವ ಆಘಾತದ ಪರಿಣಾಮವನ್ನು ಇಲ್ಲಿ ಗಮನಿಸಬಹುದು.*

[8] ‘ತಪೋನಂದನ’ ಗ್ರಂಥದ ‘ಪ್ರತಿಮಾ ಮತ್ತು ಪ್ರತಿಕೃತಿ’ಎಂಬ ಪ್ರಬಂಧವನ್ನು ನೋಡಿ.
[9] ‘ರಸೋ ವೈ ಸಃ’ ಗ್ರಂಥದ ‘ಕವಿನಿರ್ಮಿತಿಯಲ್ಲಿ ಇಯತಿಕೃತಿಯಮರಾಹಿತ್ಯ’ ಮತ್ತು ‘ರಸಾನುಭವದ ಅಲೌಕಿಕತೆ’ ಎಂಬ ಪ್ರಬಂಧಗಳಲ್ಲಿ ದೊರೆಯುತ್ತದೆ.

# ಭಾಷೆ: ಲೋಕೋಪಯೋಗಿ ಮತ್ತು ಭಾವೋಪಯೋಗಿ

*ಅರ್ಥಃ ಸಹೃದಯ ಶ್ಲಾಘ್ಯಃ ಕಾವ್ಯಾತ್ಮಾ ಯೋ ವ್ಯವಸ್ಥಿತಃ*
*ವಾಚ್ಯ ಪ್ರತೀಯಮಾನಾಖ್ಯೌ ತಸ್ಯ ಭೇದಾವುಭೌ ಸ್ಮೃತೌ*
– *ಧ್ವನ್ಯಾಲೋಕ*

A statement may be used for the sake of the reference, true or false, which it causes. This is the scientific use of language. But it may also be used for the sake of the effects in emotion and attitude produced by the reference it occasions. This is the emotive use of language.
– I.A. Richards

ಭಾಷೆಯ ಬೇರೆ ಬೇರೆಯ ಉಪಯೋಗಗಳೂ ಪ್ರಯೋಜನಗಳೂ ಗುರುತಿಸದೆ ಲೆಕ್ಕಿಸದೆ ಕಾವ್ಯ ಅಥವಾ ಶಾಸ್ತ್ರದ ಬರವಣಿಗೆಗಳನ್ನು ಓದತೊಡಗಿದರೆ ಸ್ವಲ್ಪದೂರ ಮುಂದುವರಿಯುವುದರೊಳಗಾಗಿ ನಾವು ಭಾವದ ಅಥವಾ ಬುದ್ಧಿಯ ತೊಡಕುಗಳಿಗೆ ಅನಿವಾರ್ಯವಾಗಿ ಒಳಗಾಗಬೇಕಾಗುತ್ತದೆ. ಶಾಸ್ತ್ರಕ್ಷೇತ್ರದಲ್ಲಿ ಪದ, ಪದಪುಂಜ ಮತ್ತು ವಾಕ್ಯಗಳಿಗಿರುವ ವ್ಯಾಪಾರ ವ್ಯಾಪ್ತಿಗಳನ್ನು ಕಾವ್ಯಕ್ಷೇತ್ರಕ್ಕೂ ವಿಸ್ತರಿಸಿ, ಒಂದನ್ನು ಮತ್ತೊಂದರಿಂದ ಅಳೆದು ತೂಗಿ, ಒಂದರ ಉದ್ದೇಶವನ್ನು ಮತ್ತೊಂದರಲ್ಲಿ ಕಾಣಬಯಸಿ, ಆ ಎರಡರ ನಿಜವಾದ ಪ್ರಯೋಜನದಿಂದಲೂ ವಂಚಿತರಾಗುತ್ತೇವೆ.

ಒಂದು ಉದಾಹರಣೆ. ಕುಮಾರವ್ಯಾಸ ಭಾರತದ ಕರ್ಣಪರ್ವದ ಮೊದಲನೆಯ ಸಂಧಿಯ ಪ್ರಾರಂಭದಲ್ಲಿ ಕುರುಕ್ಷೇತ್ರದ ಕೌರವರಣದ ಸರ್ವಸೇನಾನಿಯಾಗಿದ್ದ ಆಚಾರ್ಯ ದ್ರೋಣನು ಮಡಿದ ರುದ್ರವಾರ್ತೆಯನ್ನು ಸಂಜಯ ದೃತರಾಷ್ಟ್ರನಿಗೆ ತಿಳಿಸುತ್ತಾನೆ. ಅಲ್ಲಿ ಕವಿವಕ್ರೋಕ್ತಿ ಹೀಗಿದೆ:

*ಕೋಲಗುರುವಿನ ಮರಣವಾರ್ತಾಕಾಲಸರ್ಪನ ತಂದು ಸಂಜಯ*
*ಹೇಳಿಗೆಯನೀಡಾಡಿದನು ದೃತರಾಷ್ಟ್ರನಿದಿರನಲಿ.*

ಭಯಂಕರವಾದ ಆ ಸುದ್ದಿಯನ್ನು ಕೇಳಿ ಆಸ್ಥಾನದವರಿಗೂ ದೃತರಾಷ್ಟ್ರನಿಗೂ ಇತರರಿಗೂ ಏನಾಯಿತೆಂಬುದನ್ನು ಕವಿವಾಣಿ ಹೀಗೆ ವರ್ಣಿಸುತ್ತದೆ:

*ಬೆದಱಿತಾ ಆಸ್ಥಾನ. ಧಿಗಿಲೆಂದುದು ಧರಾಧಿಶ್ವರನ ತಂದೆಯ*
*ಹೃದಯದಲಿ. ಹುರಳೇನು ಬಳಿಕುಳಿದವರ ಮೋಱೆಗಳ?*
*ಕದಡಿತಂತಃಕರಣ. ಅರಸನ ಕದವು ಕೈಯಲಿ ಕೀಲಿಸಿತು. ಹೇ*
*ಳಿದನು ಸಂಜಯ ಮತ್ತೆ ಮೇಲಣ ರಣದ ವಾರ್ತೆಯನು.*

*ಗುಡಿಯ ಕಟ್ಟಿಸು ಜೀಯ. ಬಱತುದು ಕಡಲು, ಮುಱಿದುದು ಮೇರು; ತಿರುಗಿತು*
*ಪೊಡವಿ; ಬಿದ್ದುದು ಭಾನುಮಂಡಲವಹಹ ವಿತಳದಲಿ!*
*ಮಡಿದುದೈ ನಿನ್ನನೆ. ನಿನ್ನುಗ್ಗಡದ ಭಟ ಬೀಳ್ಕೊಂಡನೈ; ಕಡಿ*
*ವಡೆದನೈ! ಜಲಿ ಕರ್ಣಬೊಸಗೆಯ ಮಾಡಹೇಳೆಂದ.*

ಲೋಕವ್ಯಾಪಾರದ ರೀತಿಯಲ್ಲಿ ಆ ವಾರ್ತೆಯನ್ನು ತಿಳಿಸುವುದಾಗಿದ್ದರೆ ಸಂಜಯ ದೃತರಾಷ್ಟ್ರನ ಮುಂದೆ ಕೈಮುಗಿದು ನಿಂತು'ಸ್ವಾಮಿ, ದ್ರೋಣಾಚಾರ್ಯರು ತೀರಿಕೊಂಡರು' ಎಂದಿದ್ದರೆ ಸಾಕಿತ್ತು. ನಡೆದ ವಿಷಯ ಏನು ಎಂಬುದು ದೃತರಾಷ್ಟ್ರನಿಗೆ ಗೊತ್ತಾಗುತ್ತಿತ್ತು. ಆದರೆ ಕುಮಾರವ್ಯಾಸನ ಸಂಜಯ ಮಾಡಿದ್ದೇನು? ನ್ಯಾಯವಾಗಿ 'ಹೇಳಿದ್ದೇನು?' ಎಂದು ಪ್ರಶ್ನೆ ಹಾಕಬೇಕಿತ್ತು. ಅದರೆ ಕುಮಾರವ್ಯಾಸನ ಸಂಜಯ ಏನನ್ನೂ ಹೇಳಿದಂತೆ ವರ್ಣಿತವಾಗಿಲ್ಲ. ಇನ್ನೇನನ್ನೊ ಮಾಡಿದಂತೆ ವರ್ಣಿತವಾಗಿದೆ: 'ಮರಣವಾರ್ತಾ ಕಾಲಸರ್ಪ'ವನ್ನು ತಂದು ಅದನ್ನು ಇಟ್ಟಿದ್ದ ಬುಟ್ಟಿಯ ಬಾಯಿ ತೆರೆದು ಬೀಳುವಂತೆ ಧೃತರಾಷ್ಟ್ರನ ಮುಂದೆ ಬೀಸಾಡಿಬಿಟ್ಟನು. ಭಾಷೆಗೆ ನಿಷ್ಕೃಷ್ಟವಾದ ಶಾಸ್ತ್ರ ವ್ಯಾಪಾರವನ್ನು ಆರೋಪಿಸುವ ಲೋಕಸಂವಾದಾಪೇಕ್ಷಿಯಾದ ಬುದ್ದಿ 'ಇಲ್ಲಿ ಸರ್ಪ ಎಲ್ಲಿಂದ ಬಂತು? ಬುಟ್ಟಿ ಏನು? ಹಾವನ್ನು ತಂದು ದೊರೆಯ ಎದುರಿಗೆ ಎಸೆದಿದ್ದೇಕೆ? ಸಂಜಯನಿಗೇನು ಹುಚ್ಚು? ಅಥವಾ ಕವಿಗೊ!' ಎಂದು ಅಂತಹ ಅಪ್ರಸಂಗ ಅಧಿಕಪ್ರಸಂಗ ಮಿಥ್ಯಾಪ್ರಸಂಗಗಳನ್ನು ತಿರಸ್ಕರಿಸುತ್ತದೆ.

ಆದರೆ ಮುಂದಿನ ಪದ್ಯದಲ್ಲಿ ಆ ಸುದ್ದಿ ಯಾರಯಾರ ಮೇಲೆ ಏನೇನು ಪರಿಣಾಮ ಉಂಟುಮಾಡಿತು ಎಂದು ಹೇಳುವಾಗ ಅಲ್ಲಿ ಕವಿವರ್ಣನೆಯಲ್ಲಿ ಲೋಕಸಂವಾದವಿರುವುದರಿಂದ ಸತ್ಯವೆಂದು ಒಪ್ಪುತ್ತೇವೆ. ಆಸ್ಥಾನ ಬೆದರಿತು, ಧೃತರಾಷ್ಟ್ರನ ಎದೆ ದಿಗಿಲೆಂದಿತು, ಇತ್ಯಾದಿಯಾಗಿ, ಬಹುಶಃ ಇಲ್ಲಿಯೂ ಆ ಲೋಕನಿಷ್ಠೆಯ ನಿಷ್ಕೃಷ್ಟ ಬುದ್ದಿ 'ಆಸ್ಥಾನ ಬೆದರಿತು' ಎಂದರೆ ಏನರ್ಥ? ಆಸ್ಥಾನಕ್ಕೇನು ಜೀವವಿದೆಯೆ? ಆಸ್ಥಾನದಲ್ಲಿದ್ದ ಜನರು ಎಂದು ಹೇಳಬೇಕು' ಎಂದೆಲ್ಲ ಕೊಂಕುಮಾತೆತ್ತಬಹುದಿತ್ತು! ಸದ್ಯಕ್ಕಿರಲಿ.

ಮುಂದೆ ಸಂಜಯ ಮತ್ತೂ ಹೇಳುತ್ತಾನೆ: 'ಬರತುದು ಕಡಲು: ಮುರಿದುದು ಮೇರು! ಬಿದ್ದುದು ಭಾನುಮಂಡಳವಹಹ ವಿತಳದಲಿ' ಇತ್ಯಾದಿಯಾಗಿ. ಅದನ್ನಾಲಿಸಿ ಲೋಕಸಂವಾದಾಪೇಕ್ಷಿಯಾದ ವೈಜ್ಞಾನಿಕ ಬುದ್ಧಿ ತತ್ತರಿಸುತ್ತದೆ. ಕಂಗಾಲಾಗುತ್ತದೆ; ಇದೇನು ಹೇಳುತ್ತಾನೆ. ಈ ಸಂಜಯ? ಸುಳ್ಳಿನ ಮೇಲೆ ಸುಳ್ಳು! ಸುಳ್ಳಿನ ಮೇಲೆ ಸುಳ್ಳು! ಅಪ್ರಕರತ! ಅಪ್ರಸಂಗ: 'ದ್ರೋಣಸತ್ತ' ಎಂದು ಹೇಳುವುದನ್ನು ಬಿಟ್ಟು "ಸಮುದ್ರ ಬತ್ತಿತ್ತು! ಮೇರು ಮುರಿದು ಹೋಯ್ತು! ಸೂರ್ಯ ಪಾತಾಳಕ್ಕೆ ಬಿದ್ದುಬಿಟ್ಟ!" ಎಂದೆಲ್ಲ ಒದರುತ್ತಿದ್ದಾನಲ್ಲಾ ತಲೆಕೆಟ್ಟು! ಇವನೇನು ಸಮುದ್ರವನ್ನು ನೋಡಿಕೊಂಡು ಬಂದಿದ್ದಾನೆಯೆ! ಅದರ ನೀರೆಲ್ಲ ಬತ್ತಿಹೋಗಿದ್ದು ನಿಜವೇ? ಮೇರು ಮುರಿಯಿತಂತೆ? ಮುರಿಯುವುದಿರಲಿ, ಮೇರು ಎನ್ನುವುದಾದರೂ ಎಲ್ಲಿದೆ? ಯಾರು ನೋಡಿದ್ದಾರೆ? ಬರಿಯ ಸುಳ್ಳು! ಮೊಲದ ಕೊಂಬು ತಿವಿದು ದ್ರೋಣ ಸತ್ತ ಎಂದಿದ್ದರೂ ಎನ್ನಬಹುದಾಗಿತ್ತಲ್ಲವೆ? ಸುಳ್ಳಿನ ಮೇಲೆ ಸುಳ್ಳನ್ನು ಪೇರಿಸಿದ್ದಲ್ಲದೆ ಅದಕ್ಕೊಂದು ಕಲಶ ಬೇರೆ ಇಡುತ್ತಾನೆ: ಸೂರ್ಯಮಂಡಲ ಪಾತಾಳಕ್ಕೆ ಬಿದ್ದುಹೋಯಿತು ಎಂದು ಹಾಗೇನಾದರೂ ನಡೆದಿದ್ದರೆ ಅದನ್ನು ಹೇಳುವುದಕ್ಕಾದರೂ ಸಂಜಯ ಇರುತ್ತಿದ್ದನೆ? ನಾವಾದರೂ ಅದನ್ನು ಓದುವುದಕ್ಕೆ ಇರುತ್ತಿದ್ದೆವೆ? ಇತ್ಯಾದಿಯಾಗಿ.

ಆದರೆ ಸಹೃದಯನ ಹೃದಯ ಕವಿಯ ಆ ವರ್ಣನೆಯನ್ನು ಓದಿದಾಗ ಒಂದು ರಸಾನುಭವವನ್ನು ಅಸ್ವಾದಿಸಿ ಹಿಗ್ಗುತ್ತದೆ. ಆ ಸಂದರ್ಭದಲ್ಲಿ ಕವಿಯ ಉಕ್ತಿಯೇ ಸತ್ಯತಮ; 'ದ್ರೋಣ ಸತ್ತ' ಎಂಬ ವಾರ್ತಾಸತ್ಯ ಅತ್ಯಂತ ಅಲ್ಪಸತ್ಯ ಅಥವಾ ಸತ್ಯದ ಅತ್ಯಂತ ಕನಿಷ್ಠಾಂಶ' ರಕ್ತ ಮಾಂಸ ಹೃದಯ ಪ್ರಾಣ ಮನಸ್ಸು ಚೇತನ ಸಹಿತವಾದ ಜೀವಂತ ಮನುಷ್ಯನ ವ್ಯಕ್ತಿತ್ವಕ್ಕೂ ಅವನ ಅಸ್ಥಿಪಂಜರಕ್ಕೂ ಇರುವಷ್ಟು, ವ್ಯತ್ಯಾಸ, ಅಂತರ, ಕವಿ ಹೇಳಿರುವ ಪೂರ್ಣ ಸತ್ಯಕ್ಕೂ 'ದ್ರೋಣ ಸತ್ತ' ಎಂಬ ವರದಿಯ ಅಂಶಸತ್ಯಕ್ಕೂ ಎಂಬುದು ಸುಸ್ಪಷ್ಟವಾಗಿ ಅನುಭವಗೋಚರವಾಗುತ್ತದೆ.

ಏಕೆ ಹೀಗಾಗುತ್ತದೆ? ಲೋಕಸಂವಾದಾಪೇಕ್ಷಿಯಾದ ವೈಜ್ಞಾನಿಕದೃಷ್ಟಿಗೂ ಸಹೃದಯನ ದೃಷ್ಟಿಗೂ ಈ ಅಂತರ ಒದಗುವುದಕ್ಕೆ ಕಾರಣವೇನು? ಯರ ದೃಷ್ಟಿ ತಪ್ಪು? ಯಾರದ್ದು ಸರಿ?

ಇಬ್ಬರದ್ದೂ ಸರಿ: ಏಕೆಂದರೆ ಒಬ್ಬೊಬ್ಬರದೂ ಬೇರೆ ಬೇರೆಯ ಗುರಿ ಪ್ರಯೋಗದಲ್ಲಿ ಭಾಷೆ ಒಂದೆ ಆಗಿ ತೋರಿದರೂ ಅದರ ಉಪಯೋಗಗಳು ಬೇರೆ ಬೇರೆ. ಒಂದು ಲೋಕೋಪಯೋಗಿ; ಇನ್ನೊಂದು ಭಾವೋಪಯೋಗಿ. ಭಾಷೆಯ ಒಂದು ಉಪಯೋಗವನ್ನು ಅದರ ಇನ್ನೊಂದು ಉಪಯೋಗದಲ್ಲಿ ಕಾಣಬಯಸಿದರೆ ದಿಕ್ಕೆ ತಪ್ಪಿದಂತಾಗಿ ಸೇರಬೇಕಾದ ಗುರಿಯನ್ನೆ ನಾವು ಸೇರುವುದಿಲ್ಲ.

ಭಾಷೆ ಲೋಕೋಪಯೋಗಿಯಾದಾಗ ಅದು ಲೋಕಸಂವಾದವನ್ನು ನಿರೀಕ್ಷಿಸುತ್ತದೆ, ಅಪೇಕ್ಷಿಸುತ್ತದೆ; ಭಾವೋಪಯೋಗಿಯಾದಾಗ ಅದು ಮುಖ್ಯವಾಗಿ ಭಾವಸಂವಾದವನ್ನೆ ಅಪೇಕ್ಷಿಸುತ್ತದೆ. ಭಾಷೆಯ ಈ ಉಪಯೋಗ ಸಾಹಿತ್ಯದಲ್ಲಿ ಮಾತ್ರವಲ್ಲ, ಲೋಕದಲ್ಲಿಯೂ ಅನ್ವಯವಾಗುತ್ತದೆ. ಈ ರಹಸ್ಯವನ್ನು ನಾವು ಸ್ಪಷ್ಟವಾಗಿ ಗ್ರಹಿಸದಿದ್ದರೆ, ಅರ್ಥಮಾಡಿಕೊಳ್ಳದಿದ್ದರೆ, ವೈಜ್ಞಾನಿಕ ಮನೋಧರ್ಮದ ಹೆಸರಿನಲ್ಲಿ ನಾವು ಪರಿಪೂರ್ಣವಾಗಿ ವಂಚಿತರಾಗುತ್ತೇವೆ, ಸಾಹಿತ್ಯವೀಯುವ ರಸಾನುಭವದ ಪುರುಷಾರ್ಥವನ್ನು ಅಸತ್ಯವೆಂಬ ಕಾರಣದಿಂದ ತಿರಸ್ಕರಿಸಿ.

ಭಾಷೆಯ ಲೋಕೋಪಯೋಗದ ಮತ್ತು ಭಾವೋಪಯೋಗದ ಭೇದವನ್ನು ಗ್ರಹಿಸುವುದು ಅಷ್ಟೇನೂ ಕ್ಲಿಷ್ಟವಿಷಯವಲ್ಲ. ಲೋಕದಲ್ಲಿರುವ ಒಂದು ವಸ್ತುವಿನ 'ಸಂವಾದ'ಕ್ಕಾಗಿಯೆ ನಾವು ಪದಗಳನ್ನು ಉಪಯೋಗಿಸಬಹುದು; ಅಥವಾ ಆ ಪದಗಳು ನಮ್ಮಲ್ಲಿ ಪ್ರಚೋದಿಸುವ 'ಭಾವ'ಕ್ಕಾಗಿಯೊ 'ಚಿತ್ತಭಂಗಿ'ಗಾಗಿಯೊ ಅವುಗಳನ್ನು ಉಪಯೋಗಿಸಬಹುದು. ಎಷ್ಟೋ ಸಾರಿ ನಾವು ಯಾವ ಲೋಕ

ಸಂವಾದವನ್ನೂ ನಿರೀಕ್ಷಿಸದೆ ಅವು ನಮ್ಮಲ್ಲಿ ಪ್ರಚೋದಿಸುವ 'ಚಿತ್ತಭಂಗಿ'ಅಥವಾ 'ಭಾವ'ವನ್ನು ಮಾತ್ರ ಅಪೇಕ್ಷಿಸಿ ಮಾತುಗಳನ್ನು ಬಳಸುತ್ತೇವೆ.

ಉರಿಬಿಸಿಲಲ್ಲಿ ಬಂದವನು 'ಉಃಫ್ ಏನು ಬಿಸಿಲಪ್ಪಾ? ಬೆಂದೇ ಹೋದೆ? ಸುಟ್ಟು ಬೂದಿಯಾದೆ? ಎಂದಾಗ ತನಗಾಗಿರುವ ಬೇಗೆಯ 'ಅನುಭವ ನಿಜತ್ವ'ವನ್ನು ಅದರ ಪೂರ್ಣಪ್ರಮಾಣದಲ್ಲಿ ನಮಗೆ ಹೃದ್ಗೋಚರವನ್ನಾಗಿ ಮಾಡುವ ವಿವಕ್ಷೆ ಅವನಿಗೆ ಇರುತ್ತದೆಯೆ ವಿನಾ ತನ್ನ ಮಾತಿಗೆ ಲೋಕಸಂವಾದವಿರಬೇಕೆಂಬ ಉದ್ದೇಶವಿರುವುದಿಲ್ಲ. ಅವನ ಮಾತನ್ನು ಕೇಳಿ ಯಾರಾದರೂ ಅವನು ಬೆಂದಿದ್ದಾನೆಯೊ ಇಲ್ಲವೊ ಬೂದಿಯಗಿದ್ದಾನೆಯೊ ಇಲ್ಲವೊ ಎಂದು ವೈಜ್ಞಾನಿಕವಾಗಿ ಪರೀಕ್ಷಿಸಿದರೆ? ಆ ಮಾತಿಗೆ ಲೋಕಸಂವಾದವೇನೂ ಕಾಣದೆ ಅದು ಅಸತ್ಯವಾಗಿ ತೋರುತ್ತದೆ. ಆದರೆ ಹಾಗೆ ಪರೀಕ್ಷಿಸುವುದಾಗಲಿ, ಅದನ್ನು ಅಸತ್ಯವೆಂದು ವೈಜ್ಞಾನಿಕವಾಗಿ ತೀರ್ಮಾನಿಸುವುದಾಗಲಿ ಅಪ್ರಕೃತವಾಗಿ ಹಾಸ್ಯಾಸ್ಪದವಾಗುತ್ತದೆ. ಆ ಮಾತಿನ ವಿವಕ್ಷೆ ಆಲಿಸಿದವರಲ್ಲಿ ಒಂದು 'ಚಿತ್ತಭಂಗಿ'ಯನ್ನುಂಟು ಮಾಡುವುದಷ್ಟೆ ಆಗಿರುತ್ತದೆ. ಅದು ಸಾಧಿತವಾದರೆ ಸಾಕು, ಆ ಮಾತು ಸಾರ್ಥಕವಾಗುತ್ತದೆ. ಅಂತಹ ಸರ್ಥಕತೆಯಲ್ಲಿಯೆ ಅದರ ಸತ್ಯಸಿದ್ಧಿ, ಅಂದರೆ ಆ ಮಾತು ಲೋಕಸಂವದಾಪೇಕ್ಷಿಯಾದುದಲ್ಲ; ಭಾವಸಂವಾದಾಪೇಕ್ಷಿಯಾದುದು. ಆ ಭಾವದ ಸಂವಾದ ಒದಗಿತೆಂದರೆ ಅದರ ಕೆಲಸ ತೀರಿತು. ಅದು ಸಾರ್ಥಕವಾಯಿತು. ಸತ್ಯವೂ ಆಯಿತು.

[1]
ಭಾರತೀಯ ಕಾವ್ಯಮೀಮಾಂಸೆ ಬಹು ಪ್ರಾಚೀನಕಾಲದಲ್ಲಿಯೆ ಶಬ್ದಾರ್ಥ ಸ್ವರೂಪ ವಿಚಾರವಾದ ಈ ಸತ್ಯವನ್ನು ಕಂಡುಕೊಂಡಿದೆ, ಶಬ್ದಕ್ಕೆ ಅರ್ಥ ಎರಡು ವಿಧವಾಗಿದೆ ಎಂದು. ಒಂದು 'ವಾಚ್ಯ' ಮತ್ತೊಂದು 'ಪ್ರತೀಯಮಾನ'. ಶಬ್ದಕ್ಕೆ ಅರ್ಥವನ್ನು ಕೊಡುವ ಸಾಮರ್ಥ್ಯಕ್ಕೆ 'ವೃತ್ತಿ' ಎಂದು ಹೆಸರು. ಶಬ್ದಕ್ಕೆ ವಾಚ್ಯವಾದ ಅಥವಾ ಲೋಕೋಪಯೋಗಿಯಾದ[2] ನೇರವಾದ ಅರ್ಥವನ್ನು ಕೊಡುವ ವೃತ್ತಿ 'ಅಭಿಧಾ':ಪ್ರತೀಯಮಾನವಾದ (ಭಾವೋಪಯೋಗಿಯಾದ) ಅಥವಾ ಗಮ್ಯವಾದ ಅರ್ಥವನ್ನು ಕೊಡುವ ವೃತ್ತಿ ಕವಲೊಡೆದು ಎರಡಾಗಿದೆ. ಒಂದು 'ಲಕ್ಷಣಾ' ಮತ್ತೊಂದು 'ವ್ಯಂಜನಾ; ಕೊಡುವ ವೃತ್ತಿ ಕವಲೊಡೆದು ಎರಡಾಗಿದೆ. ಒಂದು 'ಲಕ್ಷಣಾ' ಮತ್ತೊಂದು 'ವ್ಯಂಜನಾ', ಶಬ್ದದ ಅಭಿಧಾವೃತ್ತಿಯಿಂದ ನೇರವಾದ ವಾಚ್ಯಾರ್ಥ ಸ್ಫುರಿಸುತ್ತದೆ. ಲಕ್ಷಣೆಯಿಂದ ಲಕ್ಷ್ಯಾರ್ಥವೂ ವ್ಯಂಜನೆಯಿಂದ ವ್ಯಂಗ್ಯಾರ್ಥವೂ ಸ್ಫುರಿಸುತ್ತದೆ. ಈ ಅರ್ಥ ಒಂದು ಶಬ್ದದಲ್ಲಿ ವ್ಯವಹರಿಸಬಹುದು; ಒಂದು ಕಾವ್ಯ ಭಾಗವನ್ನೆಲ್ಲ ಆಕ್ರಮಿಸಬಹುದು; ಕೊನೆಗೆ ಇಡಿಯ ಕಾವ್ಯವನ್ನೂ ತುಂಬಿ ಹರಿಯಬಹುದು.

ಅಂದರೆ ಒಂದು ಪದಕ್ಕೆ ಇರುವುದು ಒಂದೇ ಅರ್ಥ ಅಲ್ಲ; ಅಲ್ಲದೆ ಅರ್ಥ ಎಂಬ ಪದಕ್ಕೂ ಅನೇಕಾರ್ಥಗಳಿವೆ.

ಶ್ರೀಕೃಷ್ಣನು ಕರ್ಣನಿಗೆ ಅವನ ಜನನವೃತ್ತಾಂತವನ್ನೆಲ್ಲ ವಿವರಿಸಿ, ಅವನು ಪಾಂಡವರ ಅಗ್ರಜಾದುದರಿಂದ ಆ ಪಕ್ಷಕ್ಕೆ ಬರಬೇಕೆಂದು ಸೂಚಿಸಿದಾಗ ಕರ್ಣ ತುಂಬ ಸಂಕಟಪಟ್ಟುಕೊಂಡು 'ಕೌರವೇಂದ್ರನ ಕೊಂದೆ ನೀನು' ಎನ್ನುತ್ತಾನೆ. ಅಲ್ಲಿ 'ಕೊಂದೆ' ಎನ್ನುವ ಪದಕ್ಕೆ ಅಭಿಧಾವೃತ್ತಿಯಿಂದ ಒದಗುವ ನೇರವಾದ ವಾಚ್ಯಾರ್ಥ 'ಸಾಯಿಸಿಬಿಟ್ಟೆ' ಅದಲ್ಲ ಕರ್ಣನ ಉದ್ದೇಶ. ಅಲ್ಲಿಯ ಅರ್ಥ 'ಕೊಂದೆ' ಎಂಬ ಪದದ ವಾಚ್ಯಾರ್ಥದಲ್ಲಿಲ್ಲ; ಆ ಅರ್ಥದ ಉದ್ದೇಶ ಲೋಕಸಂವಾದವನ್ನು ಅಪೇಕ್ಷಿಸುವುದರಲ್ಲಿಲ್ಲ. ಭಾವಸಂವಾದವೆ ಅದರ ಪ್ರಯೋಜನ; ಅದರ ಉದ್ದೇಶ

ಸಾರ್ಥಕವಾಗುವುದು ನಾವು ಸಂದರ್ಭೋಚಿತವಾಗಿ ಲಕ್ಷ್ಯವೂ ವ್ಯಂಗ್ಯವೂ ಆಗುವ ಅದರ ಪ್ರತೀಯಮಾನಾರ್ಥವನ್ನು ಗ್ರಹಿಸಿದಾಗ.

'ಕೋಲಗುರುವಿನ ಮರಣವಾರ್ತಾ ಕಾಲಸರ್ಪನ ತಂದು ಸಂಜಯ ಹೇಳಿಗೆಯನೀಡಾಡಿದನು ಧೃತರಾಷ್ಟ್ರನಿದಿರಿನಲಿ' ಎಂಬ ಕವಿಯ ಉಕ್ತಿಯ ಪ್ರಯೋಜನ ಲೋಕಸತ್ಯದಲ್ಲಿಲ್ಲ; ಅದಕ್ಕೆ ಲೋಕಸಂವಾದವಿಲ್ಲ. ಸಂಜಯನ ಬಳಿ ಹಾವೂ ಇಲ್ಲ. ಹಾವಿನ ಬುಟ್ಟಿಯೂ ಇಲ್ಲ; ಹಾವಿರುವ ಹಾವಿನ ಬುಟ್ಟಿಯನ್ನು ತಂದು ದೊರೆಯ ಮುಂದೆ ಅದರ ಬಾಯಿ ಕಳಚಿ ಎಸೆದು ಅವನನ್ನು ದಿಗಿಲುಗೊಳಿಸುವ ಪ್ರಸಂಗವೂ ಅನುಚಿತವಾಗಿ ತೋರಿ ನಗೆಗೀಡಾಗುತ್ತದೆ. ಆದ್ದರಿಂದ ಆ ಉಕ್ತಿಯ ಪ್ರಯೋಜನ ಅದರ ಪ್ರತೀಯಮಾನಾರ್ಥದಲ್ಲಿ ಮಾತ್ರ ನಿಹಿತವಾಗುತ್ತದೆ. ಅದು ಸಂಜಯನ ಭಾವ ಅಥವಾ ಚಿತ್ತಭಂಗಿ ಅದನ್ನಾಲಿಸುವ ಸಹೃದಯ ಹೃದಯದಲ್ಲಿ ಸಂಚಾರವಾದರೆ ಅಥವಾ ಮನಸ್ಸಿನಲ್ಲಿಯೆ ಮೂಡಿದರೆ ಸಫಲವಾದಂತೆಯೆ ಕವಿಯ ಉಕ್ತಿ ಅಥವಾ ಭಣಿತಿ. ಅಂತಹ ಭಾವದ ಇಲ್ಲವೆ ಭಂಗಿಯ 'ಅನುಭವಸಂವಾದ'ವೆ ಕವಿಯ ಉಕ್ತಿಯ ಉದ್ದೇಶ; 'ವಸ್ತು ಸಂವಾದ'ವಲ್ಲ. ಆ ಅನುಭವಸಂವಾದ ಒದಗಿತೆಂದರೆ ಅದು 'ಸತ್ಯ'ವಾದಂತೆಯೆ ಅಲ್ಲಿ ಭಾಷೆ ಭಾವೋಪಯೋಗಿಯೆ ಹೊರತು ಲೋಕೋಪಯೋಗಿ ಅಲ್ಲ.

ಹಾಗಾದರೆ ಭಾಷೆಯ ಲೋಕೋಪಯೋಗ, ಅಭಿಧಾವೃತ್ತಿ, ವಾಚ್ಯಾರ್ಥ ಇವುಗಳ ಪ್ರಯೋಜನವೆ ಇಲ್ಲವೆ ಅದರ ಭಾವೋಪಯೋಗದಲ್ಲಿ, ಲಕ್ಷಣಾ ವ್ಯಂಜನಾ ವೃತ್ತಿಗಳಲ್ಲಿ, ವ್ಯಂಗ್ಯಾರ್ಥದಲ್ಲಿ? ಕಾಲಸರ್ಪ, ಹೇಳಿಗೆ, ಈಡಾಡು ಈ ಪದಗಳ ಲೋಕೋಪಯೋಗದದಿಂದಲೆ ಹೊಮ್ಮುತ್ತದೆ. ಆ ಭಾವೋಪಯೋಗ. ಅವುಗಳ 'ವಾಚ್ಯಾರ್ಥವಿಮುಖತ್ವ'ದಿಂದಲೆ ಸ್ಫುರಿಸುತ್ತದೆ ಆ ವ್ಯಂಗ್ಯಾರ್ಥ ಅಥವಾ ಧ್ವನಿ.**[3]** ಸರ್ಪ ಎಂಬ ಪದಕ್ಕೆ ಸರ್ವರಿಗೂ ಸಮಾನವಾದ ಒಂದು ನಿಘಂಟಿನ ಅರ್ಥವಿರುವಂತೆಯೆ ಒಬ್ಬೊಬ್ಬರಿಗೂ ಸರ್ಪವಿಷಯಕವಾದ ಅವರವರ ಅನುಭವಗಳಿಂದ ಸಿದ್ಧವಾಗಿ ಸಂಸ್ಕಾರರೂಪದಲ್ಲಿರುವ ವಿಶಿಷ್ಟವಾದ ಒಂದು 'ಭಾವಕೋಶ'ವಿರುತ್ತದೆ. ಭಾಷೆಯ ಭಾವೋಪಯೋಗವೆಲ್ಲ ಈ 'ಭಾವಕೋಶ'ದ ಆಧಾರದ ಮೇಲೆ ನಿಲ್ಲುತ್ತದೆ. ಕಾವ್ಯದ ಭಾಷೆಯ ಪ್ರಯೋಜನವಂತೂ ಈ 'ಭಾವಕೋಶ'ವನ್ನೆ ಸಂಪೂರ್ಣವಾಗಿ ಅವಲಂಬಿಸುತ್ತದೆ. ಸರ್ಪ ಎಂಬ ಮಾತು ಕಿವಿಗೆ ಬಿದ್ದೊಡನೆ ಅದರ ಅಭಿಧಾವೃತ್ತಿಯಿಂದ ಹಾವು ಎಂಬ ವಾಚ್ಯಾರ್ಥ ಸಿದ್ಧಿಸುತ್ತದೆ. ಒಡನೆಯೆ ಲಕ್ಷಣಾವೃತ್ತಿ ಬೆನ್ನಟ್ಟುತ್ತದೆ: ಹಾವಿನ ವಿಷ, ಹಾವಿನ ಹೆದರಿಕೆ, ಹಾವು ಕಚ್ಚಿ ಸತ್ತವರು, ಹಾವಿನ ನೀಳ್ಪನುಣ್ಪಿನ ಭೀತ, ಜುಗುಪ್ಸೆ ಇತ್ಯಾದಿ ಇತ್ಯಾದಿ. ಅದರಿಂದ ಒಂದು ಲಕ್ಷ್ಯಾರ್ಥ ಸ್ಫುರಿಸಿ ಭಾವಸಂಚಾರವಾಗುತ್ತದೆ; 'ಭಾವಕೋಶ' ಕಣ್ದೆರೆಯುತ್ತದೆ. ಆ ವ್ಯಾಪಾರ ಅಲ್ಲಿಗೇ ನಿಲ್ಲಬೇಕಾಗಿಲ್ಲ. ವ್ಯಂಜನಾವೃತ್ತಿಯ ಮಿಂಚು ತಟ್ಟಿ ಭಾವಕೋಶವೆ ಆಸ್ಫೋಟಿಸಿದಂತಾಗಿ, ಒಂದು ನಿಸ್ಸೀಮವೂ ನೇಮಿರಹಿತವೂ ಆದ ರಸಪರಿವೇಷದ ಅನುಭವಾಕಾಶದಲ್ಲಿ ಅದು ಪರ್ಯವಸಾಯಿಯಾಗಬಹುದು. ಅಂತಹ ವ್ಯಂಗ್ಯಾರ್ಥ ದ್ಯೋತನವೆ ಕವಿಯ ಉಕ್ತಿಯ ಪರಮೋದ್ದೇಶ ಮತ್ತು ಚರಮಫಲ.

'ಸಂಜಯನು ದ್ರೋಣನ ಮರಣವಾರ್ತೆಯನ್ನು ತಂದು ಧೃತರಾಷ್ಟ್ರನಿಗೆ ಹೇಳಿದನು' ಎಂದು ಕವಿ ಹೇಳಿದ್ದರೆ ಅದು ಬರಿಯ 'ವಾರ್ತೆ'ಯಾಗುತ್ತಿತ್ತು. ದ್ರೋಣನ ಮರಣ ಸಂಜಯನ ಮೇಲೆ ಏನು ಪರಿಣಾಮ ಮಾಡಿತು? ಆಚಾರ್ಯರ ಮರಣವಾರ್ತೆಯನ್ನು ಕೇಳಿದ ಧೃತರಾಷ್ಟ್ರನಿಗೆ ಏನು ಅನುಭವವಾಯಿತು? ಅದರ ಭಯಂಕರತೆ ಏನು? ಅದರ ಸಂಕಟವೇನು? ಅದರಿಂದ ಒದಗಿದ ವಿಪತ್ತಿನ ಭಯಾನಕ ಸ್ವರೂಪ ಎಷ್ಟು ಭೀಕರವಾದದ್ದು? ಆ ಸಂದರ್ಭದ ಗಂಭೀರತೆ ಎಷ್ಟು? ಮೊದಲಾದ ವಿವಿಧ ಜನರ ವಿವಿಧ ಹೃದಯಗಳ ವಿವಿಧಾನುಭವಗಳೂ ಭಾವಗಳೂ ಆ ಹೇಳಿಕೆಯ ಹೊರಗುಳಿಯುತ್ತಿದ್ದವು. ಸಂಜಯನ ಆ ಹೇಳಿಕೆ ನಡೆದ ಬಹಿರ್ಘಟನೆಯನ್ನು ಮಾತ್ರ, ಎಂದರೆ

ಲೋಕಸಂಗತಿಯನ್ನು ಮಾತ್ರ ತಿಳಿಸುತ್ತಿತ್ತು. ಅದಕ್ಕಿಂತಲೂ ಸಾವಿರಮಡಿ ನಿಜವಾದ ಅಂತರ್ಘಟನಾಕೋಟಿಗಳನ್ನು ಮುಚ್ಚಿಬಿಡುತ್ತಿತ್ತು; ಮರೆಮಾಚುತ್ತಿತ್ತು. ಅಂದರೆ ಭಾವಸತ್ಯದ ದೃಷ್ಟಿಯಿಂದ ಅದು ಸುಳ್ಳಾಡಿದಂತೆಯೆ ಆಗುತ್ತಿತ್ತು. ಆದ್ದರಿಂದಲೆ ಕವಿಯ ವಕ್ರೋಕ್ತಿ ತಿಳಿಸುತ್ತಿರುವುದೆ ಹೆಚ್ಚಿನ ಸತ್ಯ.[4] ಅದಕ್ಕೆ ಲೋಕಸಂವಾದಕ್ಕಿಂತಲೂ ಅತ್ಯತಿಶಯವಾದ ಭಾವಸಂವಾದವಿದೆ. ಈ ವಿಮರ್ಶೆಯ ಬೆಳಕಿನಲ್ಲಿ ಮತ್ತೊಮ್ಮೆ ಆಲಿಸಿ, ಅನುಭವಿಸಿ, ಸಮೀಕ್ಷಿಸಿ.

*" ಕೋಲಗುರುವಿನ ಮರಣವಾರ್ತಾ ಕಾಲಸರ್ಪನ ತಂದು ಸಂಜಯ*
*ಹೇಳಿಗೆಯನೀಡಾಡಿದನು ಧೃತರಾಷ್ಟ್ರನಿದಿರನಲಿ!"*

ಆಯಿತು; ಇದೇನೊ ಸರಿಹೋಯ್ತು. ಆದರೆ ಆ 'ಬರತುದು ಕಡಲು; ಮುರಿದುದು ಮೇರು; ತಿರುಗಿತು ಪೊಡವಿ; ಬಿದ್ದುದು ಭಾಮಮಂಡಲವಹಹ ವಿತಳದಲಿ! 'ಇದಕ್ಕೇನು ಹೇಳುತ್ತೀರಿ! 'ಮರಣವಾರ್ತಾ ಕಾಲಸರ್ಪ' ಎಂಬಲ್ಲಿ 'ಭಾವೋಪಯೋಗಿ'ಗೆ ಮರಣವಾರ್ತೆ'ಎಂಬ 'ಲೋಕೋಪಯೋಗಿ'ಯ ಸಂಬಂಧವಾದರೂ ಇದೆ. ಇಲ್ಲಿ 'ಬರತುದು ಕಡಲು' ಎಂಬುವುದಕ್ಕೆ ಯಾವ 'ಲೋಕೋಪಯೋಗಿ'ಯ ಸಂಬಂಧವೂ ಇಲ್ಲವಲ್ಲ! ಸಂಜಯ ಏನು ಹೇಳುತ್ತಿದ್ದಾನೆಯೊ ಅದು ಪೂರ್ತಿ ಸುಳ್ಳು! ಅವನು ತಿಳಿಸಬೇಕಾದುದಕ್ಕೂ ಹೇಳುತ್ತಿರುವುದಕ್ಕೂ ಏನಾದರೂ ಸಂವಾದವಿದೆಯೆ?

'ಸಂವಾದ'ವೇನೊ ಇದೆ. ಆದರೆ ಅದನ್ನು ನಾವು ಲೋಕವಾಸ್ತವದಲ್ಲಿ ಅರಸಬಾರದು. ಏಕೆಂದರೆ ಅಲ್ಲಿಯ ಭಾಷೆ ಸಂಪೂರ್ಣವಾಗಿ ಭಾವೋಪಯೋಗಿ. ಸಂಜಯ ತನ್ನ ಭಾವಾನುಭವದ ಅಭಿವ್ಯಕ್ತಿಗೆ 'ಭಣತಿ ಪ್ರತಿಮೆ'ಗಳನ್ನೊಡ್ಡುತ್ತಿದ್ದಾನೆ. ಅವನ ಭಾವಾತಿಶಯದ 'ಚಿತ್ತಭಂಗಿ'ಯ ಸತ್ಯ ಆಲಿಸಿದವರ ಹೃದಯಗಳಲ್ಲಿ ಅಪರೋಕ್ಷವಾಗಿ ಸ್ಫುರಿಸುವಂತೆ, ಜಲಕ್ಕನೆ ಅನುಭವವೇದ್ಯವಾಗುವಂತೆ, ಪ್ರತಿಮಾವಿಧಾನದಿಂದ ಭಾಷಿಸುತ್ತಿದ್ದಾನೆ. ಇಲ್ಲಿಯ ಭಾಷೆಗೆ ಲೋಕ ಸಂವಾದ ಪ್ರಯೋಜನವಿಲ್ಲ; ಅದು ಭಾವಸಂವಾದಮಾತ್ರ ಪ್ರಯೋಜನವಾದದ್ದು. ದ್ರೋಣರ ಸಾವಿನಿಂದಾದ ಅನಾಹುತ ಎಷ್ಟು ಅಗಾಧವಾದದ್ದು, ಅಪಾರವಾದದ್ದು ಎಂದರೆ ಅದನ್ನು ಬೇರೆ ಯಾವ ರೀತಿಯಿಂದಲೂ ಒಕ್ಕಣಿಸಲು ಆಗುವುದಿಲ್ಲ. ಅಕಸ್ಮಾತ್ತಾಗಿ ಸಮುದ್ರವೆ ಬತ್ತಿಹೋಗಿದ್ದರೆ! ಭೂಮಿ ಕಂಡಾಬಟ್ಟೆ ಪಥಕ್ರಮ ತಪ್ಪಿ ಉರುಳಿಬಿದ್ದರೆ! ಸೂರ್ಯಮಂಡಲವೆ ಕಳಚಿಕೊಂಡು ಪಾತಾಳಕ್ಕೆ ಕೆಡೆದಿದ್ದರೆ! ಏನು ಅನುಭವವಾಗುತ್ತಿತ್ತು. ಊಹಿಸಿಕೊಳ್ಳಿ: ಏನು ಹಾಹಾಕಾರ! ಏನು ರೋದನ! ಏನು ಓಡಾಟ! ಏನು ಗಡಿಬಿಡಿ! ಏನು ದಿಗಿಲು! ಏನು ಏನು....ಏನು....ಏನು....! ಅಯ್ಯೋ ಹೇಳಿ ಪೂರೈಸುವುದಕ್ಕಾಗುತ್ತದೆಯೆ? ಆ ಭಾವಾನುಭವ ಸಮಷ್ಟಿಗೆಲ್ಲಕ್ಕೂ ಪ್ರತಿಮಾ ಪಂಕ್ತಿಗಳನ್ನೆಸೆಯುತ್ತಿದೆ ಸಂಜಯನ ಹೃದಯಭಾಷೆ! ಅವನ ಭಾಷೆಯ ಉದ್ದೇಶ ಸಂಪೂರ್ಣವಾಗಿ ಸಾರ್ಥಕವಾಗಿ ಸತ್ಯವಾಗುತ್ತದೆ. ಏಕೆಂದರೆ ಆ ಭಾಷೆಗೆ 'ಲೋಕಸತ್ಯ'ವನ್ನು ಹೇಳುವ ಉದ್ದೇಶವೆ ಇಲ್ಲ. 'ಭಾವಸತ್ಯ'ವನ್ನು ನೀಡುವುದೆ ಅದರ ಕರ್ತವ್ಯ. ಅದನ್ನು ಸಹೃದಯ ಹೃದಯಕ್ಕೆ ಸರಿಯಾಗಿ 'ಹೇಳಿದರೆ' 'ನೀಡಿದರೆ' ಅದು ಸತ್ಯವಾಗುತ್ತದೆ. ಆ ಭಾವಸಂವಾದ ಸರಿಯಾಗಿ ಆಗದಿದ್ದರೆ ಮಾತ್ರ ವಿಫಲವಾಗಿ ಅಸತ್ಯವಾಗುತ್ತದೆ. 'ಮುಱಿದುದು ಮೇರು' ಎಂದಾಗ ಮೇರು ಎಂಬ ದೇವಲೋಕ ಪರ್ವತ ವಾಸ್ತವಾಗಿ ಇದೆಯೊ ಇಲ್ಲವೊ ಎನ್ನುವುದೂ ಇಲ್ಲಿ ಅಪ್ರಕೃತ.[5] ಮೇರು ಇದೆ ಎಂದಿಟ್ಟುಕೊಳ್ಳಿ! ಅದು ಮುರಿದುಬೀಳುವ ಧಿಗಿಲ್ಲೆನಿಸುವ ದೃಶ್ಯವನ್ನು ಕಲ್ಪಿಸಿಕೊಳ್ಳಿ. ಆ ಭೀಷಣ ಭೂಮಾನುಭವದಿಂದ ಉಂಟಾಗುವ ಭಾವ ಸಂಚಾರ ಸಹೃದಯಹೃದಯಗೋಚರವಾಗುವಂತೆ ಮಾಡಿ, ಅದನ್ನು ರಸವಿದ್ಯುತ್ ಕ್ರಿಯೆಯಿಂದ ದ್ರೋಣನ ಮರಣದಿಂದಾಗದ ಭಯಂಕರಾನುಭವಕ್ಕೆ ಜಲಕ್ಕನೆ ತಗುಳ್ಚುವುದೆ ಕುಮಾರವ್ಯಾಸನ ವಿವಕ್ಷೆ. ಆ ಭಾಷೆ ಸಿಡಿಮದ್ದಿನ ಸಜೀವಬೀಜ ಸೂತ್ರದಂತೆ

ಸಿಡಿದು ಕೆಲಸಮಾಡಿ ಕವಿಯ ವಿವಕ್ಷೆ ಸಹೃದಯಾನುಭವದಲ್ಲಿ ಸಂಪೂರ್ಣವಾಗಿ ಸಾರ್ಥಕವಾಗುವಂತೆ ಮಾಡುವುದಿಲ್ಲವೆ? ಮತ್ತೊಮ್ಮೆ ಓದಿ ಅನುಭವಿಸಿ ಪರೀಕ್ಷಿಸಿ ನೋಡಿ.

ಕೋಪಗೊಂಡ ತಂದೆ ತುಂಬ ತಂಟೆಮಾಡಿದ ಹುಡುಗನಿಗೆ 'ನೀನೆಲ್ಲಾದರೂ ಇನ್ನೊಮ್ಮೆ ಹೀಗೆ ಮಾಡು, ನಿನ್ನನ್ನು ಸೀಳಿ ತೋರಣ ಕಟ್ತೇನಿ!' ಎಂದಾಗ ಆ ಭಾಷೆ ಬರಿಯ ಭೋವೋಪಯೋಗಿ. ತಂದೆಯ ಅಸಮಾಧಾನದ ಪ್ರಮಾಣವನ್ನೂ ತೀಕ್ಷ್ಣತೆಯನ್ನೂ ಭಾವೋದ್ರೇಕವನ್ನೂ ವೇದ್ಯವಾಗುವಂತೆ ಮಾಡುವ ಒಂದು 'ಪ್ರತಿಮೆ'ಯಾಗುತ್ತದೆ. ತಂದೆಯಾಗಲಿ ಮಗುವಾಗಲಿ ಅದನ್ನು ಆಲಿಸಿದವರಾಗಲಿ ಅದಕ್ಕೆ ಲೋಕಸಂವಾದ ಒದಗುತ್ತದೆ ಒಂದು ಕನಸಿನಲ್ಲಿಯೂ ನಂಬುವುದಿಲ್ಲ. ಜನರು ಒಬ್ಬರನ್ನೊಬ್ಬರು ಬೈದಾಡುವಾಗಲೂ ಭಾಷೆ ಬಹು ಮಟ್ಟಿಗೆ ಭಾವೋಪಯೋಗಿಯಾಗಿರುವುದನ್ನು ಕಾಣುತ್ತೇವೆ. 'ಸೂಳೆಯ ಮಗನೆ ಎಂದು ಬಯ್ಯುವವನಿಗೆ ಚೆನ್ನಾಗಿ ಗೊತ್ತು, ಎದುರಾಳಿ ನಿಜವಾಗಿಯೂ ಸೂಳೆಯ ಮಗನಲ್ಲ ಎಂದು. ಬಯ್ಯಿಸಿಕೊಳ್ಳುವವನಿಗೂ ಅದು ಗೊತ್ತು. ಅವನು ತನ್ನನ್ನು ಬಯ್ದವನಿಗೆ ತಣ್ಣಗೆ 'ನೀನು ಹೇಳುತ್ತಿರುವುದು ಅಜ್ಞಾನಜನ್ಯವಾದದ್ದು. ಅದಕ್ಕೆ ಸೋಕಸಂವಾದವಿಲ್ಲ; ಆದ್ದರಿಂದ ಸುಳ್ಳು! ನಿನಗೆ ಯಾರೋ ತಪ್ಪುಸುದ್ದಿ ಕೊಟ್ಟಿರಬೇಕು. ನಾನು ವಾಸ್ತವವಾಗಿಯೂ ಇಂಥವರ ಮಗ, ನನ್ನ ತಾಯಿ ಸದ್‌ಗೃಹಿಣಿಯಾದ ಇಂಥವರು' ಎಂದು ತಿದ್ದಲು ಹೋಗುವುದಿಲ್ಲ. ಹಾಗೇನಾದರೂ ಮಾಡಿಬಿಟ್ಟರೆ ಬಯ್ದವ ಭಾಷೆಯ ಉಪಯೋಗವೆ ನಿರರ್ಥಕವಾಗಿ, ಅವನ ಉದ್ದೇಶ ವಿಫಲವಾಗುತ್ತದೆ. ಅವನ ಆ ಭಾಷೆಯ ಉದ್ದೇಶ, ಎದುರಾಳಿಯಲ್ಲಿ ಉಂಟಾಗಬೇಕಾದ ಒಂದು 'ಭಾವಸಂವಾದ'. ಎದುರಾಳಿ ಆ ಭಾವಕ್ಕೆ ಅವಕಾಶ ಕೊಡದಿದ್ದರೆ ಅವನ ಬೈಮಾತಿಗೆ ಪ್ರಯೋಜನವೆ ಇರುವುದಿಲ್ಲ. ಆದರೆ ಸಾಧಾರಣವಾಗಿ ನಮ್ಮ ಜನ ತುಂಬ ಸಹೃದಯರಾದುದರಿಂದ ಭಾಷೆಯ ಭಾವೋಪಯೋಗ ನಿರರ್ಥಕವಾಗಬಿಡುವುದಿಲ್ಲ. ಬೈದವನ ಉದ್ದೇಶ ಒಂದಿನಿತೂ ವಿಫಲವಾಗದಂತೆ ಭಾವವನ್ನು ಅನುಭವಿಸಿ, ಭಾವಸಂವಾದವನ್ನೂ ಒದಗಿಸಿ, ಅದಕ್ಕೆ ಪ್ರತಿಯಾಗಿ ತಾನೂ ಭಾವೋಪಯೋಗಿಯಾದ ಭಾಷೆಯನ್ನೆ, ಅದಕ್ಕೆ ಲೋಕಸಂವಾದವಿನಿತೂ ಇಲ್ಲ ಎಂದು ತಿಳಿದೂ ತಿಳಿದೂ, ಎದುರಾಳಿಯ ಸಹೃದಯತೆಯಲ್ಲಿ ಸಂಪೂರ್ಣವಾಗಿ ಶ್ರದ್ಧೆಯಿಟ್ಟು, ದ್ವಿಗುಣಪರಿಣಾಮಕಾರಿಯಾಗುವಂತೆ ಪ್ರಯೋಗಿಸುತ್ತಾನೆ: "ಮುಂಡೆಮಗನೆ, ನಾನಲ್ಲ, ನಿನ್ನಪ್ಪ!"

ಶೃಂಗಾರರಪ್ರಮುಖವಾದ ಪ್ರಣಯಸಂದರ್ಭಗಳಲ್ಲಿಯೂ ಭಾಷೆಯ ಈ ಭಾವೋಪಯೋಗ ತನ್ನ ಪರಾಕಾಷ್ಠೆಯನ್ನು ಮುಟ್ಟುತ್ತದೆ. ಪ್ರಣಯಿ ಪ್ರೇಯಸಿಯ ಕಿವಿಯಲ್ಲಿ ಉಸುರುವ ಮಾತುಗಳಿಗೆ ಲೋಕಸಂವಾದವಿರುವುದು ಅಪೂರ್ವ. ಇರಬೇಕೆಂಬ ವಿಚಾರಪೂರ್ವಕ ವಿವಕ್ಷೆಯಂತೂ ಸ್ವಲ್ಪವೂ ಇರುವುದಿಲ್ಲ. ಆದರೆ ಕಾಪಟ್ಯ, ಪಶುತ್ವ ಮತ್ತು ಇಚ್ಛಾಪೂರ್ವಕ ವಂಚನೆ ಇವು ಇರದಿರುವ ಪಕ್ಷದಲ್ಲಿ ಪ್ರಣಯಿಯ ಭಾಷೆಗೆ ಅನುಗುಣವಾದ ಚಿತ್ತಸಂವಾದ ಹೃದಯಸಂವಾದಗಳು ತತ್ಕಾಲದಲ್ಲಿಯಾದರೂ ಅವನಲ್ಲಿ ಇದ್ದೇ ಇರುತ್ತವೆ.

ಹೀಗೆ ಮಹಾಜನರಿಂದ ಪ್ರಾರಂಭವಾಗಿ ಭಾಷೆಯ ಈ ಭಾವೋಪಯೋಗ ಮಹಾಕವಿ ಪ್ರಯೋಗದವರೆಗೂ ವ್ಯಾಪಿಸುತ್ತದೆ. ಅಭಿಮನ್ಯುವಿನ ನಿಧನಾನಂತರ ಸಮಸಪ್ತಕರೊಡನೆ ಯುದ್ಧಕ್ಕೆ ಹೋಗಿದ್ದ ಅರ್ಜುನನು ಪಾಂಡವರ ಬೀಡಿಗೆ ಹಿಂತಿರುಗಿ ಬಂದ ಸಂದರ್ಭದಲ್ಲಿ, ಪಾಳಯದಲ್ಲಿದ್ದವರ ಮನಃಸ್ಥಿತಿಯನ್ನೂ ಭಯದ ವಾತಾವರಣವನ್ನೂ ನಿಜವಾರ್ತೆ ತಿಳಿದೊಡನೆ ಪಾರ್ಥನಿಗೊದಗಲಿರುವ ದುಃಖ ಸಂಕಟ ಕ್ರೋಧ ರೋಷಾದಿಗಳ ಉನ್ಮತ್ತಪ್ರಮಾಣವನ್ನೂ ಕುಪಿತಗಾಂಡೀವಿಯ ಭಯಂಕರ ಬಲದ ರೌದ್ರಭೀಷಣತೆಯನ್ನೂ ಏಕಕಾಲದಲ್ಲಿ ಸಹೃದಯಸಂವೇದ್ಯವಾಗುವಂತೆ ಮಾಡುತ್ತದೆ ಕವಿವಾಣಿ:

*ಸುರನಗರಿ ನಡುಗಿತ್ತು; ಸುರಪತಿ ಹರನ ನೆನೆದನು; ಯಮನ ಪಟ್ಟಣ*
*ಸರಕುದೆಗೆಯಿತು; ಮೃತ್ಯು ಮರೆಹೊಕ್ಕಳು ಮಹೇಶ್ವರನ!*

ಕರ್ಣನ ರಣರೌದ್ರಕ್ಕೆ ತತ್ತರಿಸಿದ ಪಾಂಡವರ ಸೇನೆ ಮತ್ತೆ ಮೇಲ್ವಾಯ್ದು ಅವನ ರಥವನ್ನು ಮುತ್ತಿ ತರುಬಿದುದನ್ನು ಹೀಗೆ ವರ್ಣಿಸುತ್ತಾನೆ ಕವಿ:

*ಒದೆವ ಮಂದರವನು ತರಂಗದಲುದಧಿ ಹೊಯ್ವಂದದಲಿ*
*ಹೊಕ್ಕವು ಕುದುರೆ, ತೂಳಿದವಾನೆ, ಕವಿದರು ರಥಿಕರೊಳಬಿದ್ದು!*

ಹಾಗೆಯೆ, ಕರ್ಣನನ್ನು ಕೊಲ್ಲಲಾರದೆ ಸಂಕಟಕ್ಕೆ ಸಿಕ್ಕಿದ ಅರ್ಜುನನನ್ನು ಮೂದಲಿಸುತ್ತಾ ಅವನ ಪೌರುಷವನ್ನು ಕೆರಳಿಸುವುದಕ್ಕಾಗಿ ಶ್ರೀ ಕೃಷ್ಣ ಹೀಯಾಳಿಸುತ್ತಾನೆ:

"ಕಲಿತನಕೀಸು ಮೊಲೆಗಳು ಮೂಡಿದವಲಾ ಪಾರ್ಥ ಸಮರದಲಿ!"

ಇಲ್ಲಿ ಎಲ್ಲೆಡೆಗಳಲ್ಲಿಯೂ ಭಾವೋಪಯೋಗಿ ಭಾಷೆ ವಿವಿಧಪ್ರಕಾರಗಳಿಂದ ತನ್ನ ಉದ್ದೇಶಸಾಧನೆಯಲ್ಲಿ ಹೇಗೆ ಜಯಹೊಂದಿದೆ ಎಂಬುದನ್ನು ಕಾಣುತ್ತೇವೆ. ಸುರನಗರಿ ಇದೆಯೊ ಇಲ್ಲವೊ? ಒಂದು ವೇಳೆ ಇದ್ದರೂ ಅದು ಹೆದರಿ ನಡುಗಿತೊ ಇಲ್ಲವೊ? ಸುರಪತಿ ಹರರಾಗಲಿ ಯಮನ ಪಟ್ಟಣವಾಗಲಿ ಯಾವ ಭೂಪಟ ಖಪಟಗಳಲ್ಲಿಯೂ ಜನಗಣತಿಯಲ್ಲಿಯೂ ಸೇರಿರದಿರಬಹುದು. ಮೃತ್ಯು ಎಂಬುವಳು ಒಬ್ಬಳು ಇದ್ದು, ಮಹೇಶ್ವರ ಎಂಬುವನೊಬ್ಬನಿದ್ದು, ಇವಳು ಓಡಿಹೋಗಿ ಅವನನ್ನು ಮರೆಹೊಕ್ಕಳೆ? ವಾಸ್ತವವಾಗಿ? ಎಂಬೆಲ್ಲ ಲೋಕಸಂವಾದಾಪೇಕ್ಷೆ ಇಲ್ಲಿ ನಿರರ್ಥಕ. 'ಮೃತ್ಯು ಮರೆಹೊಕ್ಕಳು ಮಹೇಶ್ವರನ' ಎಂದು ಹೇಳುವಲ್ಲಿ ಕವಿಯ ವಿವಕ್ಷೆ ಸಹೃದಯನಲ್ಲಿ ಒಂದು 'ಚಿತ್ತಭಂಗಿ'ಯನ್ನು ಪ್ರಚೋದಿಸಿ ಅವನಲ್ಲೊಂದು ಸಮರ್ಪಕಪ್ರಮಾಣದ ಭಾವಸಂಚಾರವನ್ನುಂಟುಮಾಡುವುದೆ ಆಗಿದೆ; ಯಾವ ಐತಿಹಾಸಿಕ ಘಟನೆಯನ್ನೂ ಅದು ನಿರ್ದೇಶಿಸುವುದಿಲ್ಲ.

ಹಾಗೆಯೆ ತನ್ನನ್ನು ಕಡೆದ ಮಂದರ ಮಹಾಪರ್ವತವನ್ನು ಸಂಕ್ಷುಬ್ಧ ಮಹಾಸಾಗರವೊಂದು ತನ್ನ ಕ್ರುದ್ಧ ಮಹಾತರಂಗಗಳಿಂದ ಅಪ್ಪಳಿಸಿತು ಎಂಬುದಾಗಲಿ, ಮಂದರ ಎಂಬ ಪರ್ವತ ವಾಸ್ತವವಾಗಿ ಇದೆಯೊ ಇಲ್ಲವೊ ಎಂಬ ವಿಚಾರವಾಗಲಿ ಭಾಷೆಯ ಭಾವೋಪಯೋಗಕ್ಕೆ ಅಪ್ರಕೃತ. ಒಂದು ಗಿರಿ ಒಂದು ಸಮುದ್ರವನ್ನು ಕಡೆದರೆ ಎಂತಹ ಹೇರಲೆಗಳು ಏಳಬಹುದು! ಆ ಅಲೆಗಳು ಅದನ್ನು ಅಪ್ಪಳಿಸಿದರೆ ಎಂತಹ ಪರಿಣಾಮವಾಗಬಹುದು! ಆ ಮಹಾದೃಶ್ಯವನ್ನು ಕಲ್ಪನೆಯಲ್ಲಿ ಕಟ್ಟಿಕೊಂಡು ಅನುಭವಿಸಿದಾಗ ಎಂತಹ ಭವ್ಯಭಾವ ಸಂಚಾರವಾಗಬಹುದು. ಎಂತಹ ರಸಾನುಭವವಾಗಬಹುದು! ಅಂತಹ ವಿರಾಟ್‌ಸ್ಪರ್ಶಿಯಾದ ವೀರ ರೌದ್ರಾದಿ ರಸಾನುಭವ ಸಹೃದಯ ಹೃದಯದಲ್ಲಿ ಧ್ವನಿಸುವಂತೆ ಮಾಡುವ 'ಭಣಿತಿ ಪ್ರತಿಮೆ' ಮತ್ತು 'ರಸ ಬೀಜಸೂತ್ರ'ವಾಗುತ್ತದೆ ಕವಿವಕ್ರೋಕ್ತಿ. ಆ ರಸಾನುಭವದ ಸೌಂದರ್ಯವೆ ಆ ಉಕ್ತಿ ಸಾಧಿಸಬೇಕಾಗಿರುವ ಸತ್ಯ. ಆ ಸೌಂದರ್ಯ ಸಿದ್ಧಿಯೆ ಅದರ ಸತ್ಯ ಸಂಸ್ಥಾಪನೆ.

ಭಾವೋಪಯೋಗಿ ಭಾಷೆಯ ಸತ್ಯ 'ಭಾವಸಂವಾದ'ಇಲ್ಲವೆ 'ಚಿತ್ತಭಂಗಿ ಪ್ರಚೋದನೆ'ಯಲ್ಲಿ ಮಾತ್ರವೆ ಯಾವಾಗಲೂ ಅನಿವಾರ್ಯವಾಗಿ ಪರ್ಯವಸಾನ ಹೊಂದುತ್ತದೆಯೆ ಅಥವಾ ಅಂತಹ ಭಾವಸಂವಾದಕ್ಕೂ ಚಿತ್ತ ಭಂಗಿಗೂ, ಈ ಲೋಕದಲ್ಲಲ್ಲದಿದ್ದರೆ ಅನ್ಯಲೋಕಕ್ಕೆ ಅಥವಾ ಬೇರೆ ಭೂಮಿಕೆಗೆ ಸಂಬಂಧಪಟ್ಟ ವಸ್ತುಸಂವಾದವೇನಾದರೂ ಇರುತ್ತದೆಯೆ ಇರಬಹುದೆ

ವಿಚಾರಿಸಬೇಕಾಗುತ್ತದೆ. ಏಕೆಂದರೆ ಅಂತಹ ವಸ್ತುಸಂವಾದವೇನೂ ಯಾವ ಸಂದರ್ಭದಲ್ಲಿಯೂ ಇಲ್ಲವೆ ಇಲ್ಲ; ಬರಿಯ ಭಾವವಿಲಾಸವೆ ಮತ್ತು ರಸಾನುಭವವೆ ಪರಮಪ್ರಯೋಜನ ಮತ್ತು ಕಾವ್ಯದ ಪರಮಪುರುಷಾರ್ಥ; ಭಾವವನು ಅನುಭವಿಸಿ, ಅದರ ಸ್ವಾರಸ್ಯದಿಂದ ಮೋಹಿತರಾಗಿ ಅದನ್ನು ಒಂದು ರೀತಿಯಿಂದ ಸತ್ಯಗೈಯ್ಯಲೂ ಶಾಶ್ವತಗೊಳಿಸಲೂ ಪ್ರಯತ್ನಿಸಿ, ಅದಕ್ಕೆ ಇಲ್ಲಿ ಅಲ್ಲದಿದ್ದರೆ ಎಲ್ಲಿಯೋ ವಸ್ತುಸಂವಾದವಿರಬೇಕೆಂದು ಬಾಲಿಶಕಲ್ಪನೆ ಮಾಡಿ ಊಹಿಸಿದರೆ, ಅದು ವೈಜ್ಞಾನಿಕವಿಚಾರವಾಗುವುದಿಲ್ಲ, ಆಶಾನುವರ್ತಿ ಚಿಂತನಮಾತ್ರವಾದ ಒಂದು ಮಧುಭ್ರಮೆಯಾಗುತ್ತದೆ – ಎಂದು ಸಿದ್ಧಾಂತ ಮಾಡಿದರೆ ಕಾವ್ಯದ ಸ್ಥಾನ ಬದುಕಿಗೆ ಅವಶ್ಯಕವಾಗಿ ಪರಿಣಮಿಸಿರುವ ಇತರ ಮನರಂಜನೆಯ ಅಥವಾ ಹೃದ್ವಿಲಾಸಮಾತ್ರದ ಸಾಮಾಗ್ರಿ ಸಲಕರಣೆಗಳ ಮಟ್ಟಕ್ಕೆ ಇಳಿಯಬೇಕಾಗುತ್ತದೆ; ಅದಕ್ಕಿಂತಲೂ ಹೆಚ್ಚಿನ ಬೆಲೆಕಟ್ಟಲು ಸಾಧ್ಯವಾಗುವುದಿಲ್ಲ.

ಇಲ್ಲಿ ಒಂದು ಸಂದೇಹ ತಲೆಹಾಕುತ್ತದೆ. ಭಾವೋಪಯೋಗಿಯಾದ ಈ ಭಾಷೆಯ ಪ್ರಯೋಜನ ನಮ್ಮಲ್ಲಿ ಒಂದು ಭಾವವನ್ನೊ ಚಿತ್ತಭಂಗಿಯನ್ನೊ ಪ್ರಚೋದಿಸುವುದು ಮಾತ್ರವಾಗಿದ್ದರೆ, ಅದಕ್ಕಿಂತಲೂ ಹೆಚ್ಚಿನದೇನನ್ನೂ ಅದು ನೀಡಲಾರದುದಾಗಿದ್ದರೆ, ಎಲ್ಲ ಕಾವ್ಯದ ಪ್ರಯೋಜನವೂ ಒಂದು ಹೃದಯವಿಲಾಸ ಅಥವಾ ಚಿತ್ತೋಲ್ಲಾಸದಲ್ಲಿ ಮಾತ್ರ ಕೊನೆಗೊಳ್ಳುತ್ತದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಬರಿಯ ಭಾವವಿಲಾಸದಿಂದ ನಮಗೊದಗುವ ತೃಪ್ತಿಯೆ ಅದರ ಪರಮಪ್ರಯೋಜನ ಮತ್ತು ಪುರುಷಾರ್ಥ. ನಮ್ಮ ನಮ್ಮ ಭಾವವಿಲಾಸವಲ್ಲದೆ ಇನ್ನಾವ ವಿಧವಾದ ವಸ್ತುಸಂವಾದವೂ ಅದಕ್ಕಿರುವುದೂ ಇಲ್ಲ, ಅದರಿಂದೊದಗುವುದೂ ಇಲ್ಲ. ಸಾಧ್ಯವಾಗುವುದೂ ಇಲ್ಲ.

ಪ್ರಾಯೋಗಿಕ ಮನಃಶಾಸ್ತ್ರಜ್ಞರಾಗಿರುವ ಇತ್ತೀಚಿನ ಪಾಶ್ಚಾತ್ಯ ಸಾಹಿತ್ಯ ಮೀಮಾಂಸಕರಲ್ಲಿ ಕೆಲವರು ಇದನ್ನೆ ಸಿದ್ಧಾಂತವಾಗಿ ಪ್ರತಿಪಾದಿಸಿದ್ದಾರೆ. ಅದರ ಜಿಜ್ಞಾಸೆ ಇನ್ನೂ ಅನೇಕ ತಾತ್ತ್ವಿಕವಾದ ಪ್ರಶ್ನೆಗಳಿಗೆ ಎಡೆಗೊಡುವುದರಿಂದ ಅದರ ಕೂಲಂಕಷ ವಿಮರ್ಶೆಗೆ ಮತ್ತೊಂದು ಪ್ರತ್ಯೇಕ ಪ್ರಬಂಧವೆ ಮೀಸಲಾಗಬೇಕಾಗುತ್ತದೆ.

* * *

---

[1] We may either use words for the sake of the refereces they promote, or we may use them for the sake of the attitude and emotions which ensue. – I.A.Richards

[2] 'ವಾಚ್ಯ' ಮತ್ತು 'ಪ್ರತೀಯಮಾನ'ಗಳು 'ಲೋಕೋಪಯೋಗಿ' ಮತ್ತು 'ಭಾವೋಪಯೋಗಿ' ಎಂಬ ಪದಗಳಿಗೆ ಸಂಪೂರ್ಣವಾಗಿ ಪರ್ಯಾಯಪದಗಳಾಗುವುದಿಲ್ಲ. ಈ ವಿಚಾರವಾದ ಜಿಜ್ಞಾಸೆ ಬೇರೊಂದು ಪ್ರಬಂಧದಲ್ಲಿ ದೊರೆಯುತ್ತದೆ.

[3] ಯಥಾ ಪದಾರ್ಥದ್ವಾರೇಣ ವಾಕ್ಯಾರ್ಥಃ ಸಂಪ್ರತೀಯತೇ। ವಾಚ್ಯಾರ್ಥಪೂರ್ವಿಕಾ ತದ್ವತ್ ಪ್ರತಿಪತ್ತಸ್ಯ ವಸ್ತುನಃ ||...ತದ್ವತ್ ಸಚೇತಸಾಂ ಸೋऽರ್ಥೋ ವಾಚ್ಯಾರ್ಥ ವಿಮುಖಾತ್ಮನಾಮ್। ಬುದ್ಧೌ ತತ್ತ್ವಾರ್ಥದರ್ಶಿನ್ಯಾಂ ಝುಟಿತ್ಯೇವಾವಭಾಸತೇ || -ಧ್ವನ್ಯಾಲೋಕ

[4] But usually references are involved as conditions for, or stages in, the ensuing development of attitudes. yet it is still the attitudes not the references which are important. -I.A.Richards

[5] It matters not at all in such cases whether the references are true or false. Their sole function is to bring about and support the attitudes which are the further response. The questioning, verificatory way of handling is irrelevant, and in a competent reader it is not allowed to interfere. – I.A.Richards

# ಮುಂದಿನ ಸಾಹಿತ್ಯದಲ್ಲಿ ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ

ಮುಂಬರುವ ಸಾಹಿತ್ಯದ ಸ್ವರೂಪವೇನು? ಅದು ಯಾವ ಯಾವ ರೂಪಗಳಿಗೆ ತಿರುಗುತ್ತದೆ? ಯಾವ ಭಾವಗಳು, ಎಂತಹ ಶಕ್ತಿಗಳು ಅದಕ್ಕೆ ಪ್ರೇರಕವಾಗುತ್ತವೆ? ಅದರ ಉದ್ದೇಶಗಳೇನು? ಅದರ ಗುರಿಯೇನು? ಅದು ಅನುಸರಿಸುವ ವಿಧಾನಗಳೇನು? ಈ ಪ್ರಶ್ನೆಗಳಿಗೆ ಕಣಿ ಹೇಳುವಂತೆ ಉತ್ತರ ಹೇಳುವುದು ದುಃಸಾಧ್ಯವಾದರೂ ಇಂದಿನ ಮತ್ತು ಹಿಂದಿನ ಪ್ರಪಂಚದ ಮತ್ತು ಸಾಹಿತ್ಯದ ಪರಿಸ್ಥಿತಿಯನ್ನು ಪರ್ಯಾಲೋಚಿಸಿದಲ್ಲಿ ಮುಂದೆ ಏನಾಗಬಹುದು? ಏನು ಬರಬಹುದು? ಎಂಬ ಕ್ರಾಂತದರ್ಶನ ಸ್ವಲ್ಪಮಟ್ಟಿಗಾದರೂ ಕಲ್ಪನಾಗೋಚರವಾಗಬಹುದೆಂದು ತೋರುತ್ತದೆ.

ಲೋಕದ ಇತರ ಕ್ಷೇತ್ರಗಳಲ್ಲಿರುವಂತೆ ಸಾಹಿತ್ಯದಲ್ಲಿಯೂ ಒಂದು ನಿತ್ಯಾಂಶ, ಒಂದು ಲೀಲಾಂಶ, ಒಂದು ಸ್ಥಾರಾಂಶ, ಒಂದು ಚರಾಂಶ ಇರುತ್ತವೆ. ನಿತ್ಯಾಂಶವೂ ತ್ರಿಕಾಲಾತೀತವಾಗಿರುವುದರಿಂದ ಸಾರ್ವಕಾಲಿಕವೆಂಬಂತೆ ತೋರುತ್ತದೆ; ಲೀಲಾಂಶ ಅಥವಾ ಚರಾಂಶವು ಕಾಲಾಧೀನವಾಗಿರುವುದರಿಂದ ಕಾಲಾತ್ಮಕವಾಗಿ ತಾತ್ಕಾಲಿಕವಾಗಿ ಹೊಮ್ಮುತ್ತದೆ. ಈ ಸತ್ಯ ಮಾನವಜೀವನದಲ್ಲಿರುವಂತೆಯೆ ಆ ಜೀವನ ಮತ್ತು ಜೀವನಾನುಭವಗಳನ್ನು ಪ್ರತಿಬಿಂಬಿಸುವ ಮತ್ತು ಪ್ರತಿಮಿಸುವ ಸಾಹಿತ್ಯದಲ್ಲಿಯೂ ಪ್ರಕಟವಾಗುತ್ತದೆ. ಎಲ್ಲಿಯಾದರೂ ನಿತ್ಯವೂ ನೂತನವಾಗಿ ಹೊಮ್ಮುವ ಆ ಚಿರತತ್ತ್ವವು ಚರತತ್ತ್ವವಾಗಿ ಪ್ರಕಟಗೊಳ್ಳದಿದ್ದರೆ ಆ ಜೀವನ ಮುಗಿದು ಮೃತಸ್ಥಿತಿ ಪ್ರಾಪ್ತವಾಯಿತೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದಲೆ ಎಲ್ಲಿ ಸಾಹಿತ್ಯ ಜೀವಂತವಾಗಿರುತ್ತದೆಯೋ ಅಲ್ಲಿ ಬದಲಾವಣೆ ಪರಿವರ್ತನೆ ಅನಿವಾರ್ಯವಾಗಿ ಸಂಭವಿಸುತ್ತದೆ.

ಆದರೆ ಆ ಪರಿವರ್ತನೆ ಯಾವುದರಲ್ಲಿ ಚರಿಸುತ್ತದೆ? ಯಾವ ರೂಪದಲ್ಲಿ ಹೇಗೆ ಪ್ರಕಟವಾಗುತ್ತದೆ? ಭಾವಾಂಶದಲ್ಲಿಯೆ? ಚಿಂತನಾಂಶದಲ್ಲಿಯೆ? ಕಲ್ಪನಾಂಶದಲ್ಲಿಯೆ? ರೂಪಾಂಶದಲ್ಲಿಯೆ? ವಸ್ತುವಿನಲ್ಲಿಯೆ? ರೀತಿ ಅಲಂಕಾರಾದಿಗಳಲ್ಲಿಯೆ? ರಸದಲ್ಲಿಯೆ?

ಪ್ರಾಣದ ತೀವ್ರ ಅಭೀಪ್ಸೆಯಿಂದ ಪ್ರಾಣಿಯ ಅಂಗಾಂಗವಿರಚನೆಯಲ್ಲಿ ಸನ್ನಿವೇಶಾಧೀನವಾಗಿ ಪರಿವರ್ತನೆಗಳಾಗುತ್ತವೆ ಎಂದು ಜೀವವಿಜ್ಞಾನ ಹೇಳುತ್ತದೆ. ಅಂತಹ ಪರಿವರ್ತನೆಗೆ ಕಾರಣ ವಿವಿಧವೂ ವ್ಯತ್ಯಸ್ತವೂ ನೂತನವೂ ಆಗಿರುವ ಅನುಭವಗಳ ಅಪೇಕ್ಷೆಯಿಂದಾಗಿ ಪ್ರಾಣದ ಅಥವಾ ಪ್ರಾಣಿಯ ಹೃದಯದಲ್ಲಿ ಮೂಡುವ ಉತ್ಕಟ ಅಭೀಪ್ಸೆ ಅಥವಾ ಹಾರೈಕೆ. “ಹಾರೈಸಿ ಹಾರೈಸಿ ಹಾರಿದುದೊ ನೀರಧಿಯ ಮೀನ.” ಕಡಲ ಮೀನಿಗೆ ರೆಕ್ಕೆ ಮೂಡಿ ಅದು ಹಕ್ಕಿಯಾದುದಕ್ಕೆ ಕಾರಣವೇನು? ಸೃಷ್ಟಿಯನ್ನು ಹಿಂದಣಿಂದ ಮುನ್ನೂಂಕಿ ಪ್ರೇರಿಸುತ್ತಿರುವ ‘ಸ್ವಧಾ’ ಶಕ್ತಿಯ

[1] ಮತ್ತು ಅದನ್ನು ಮುಂದಣಿಂದ ಸೆಳೆದು ಊರ್ಧ್ವಾಭಿಮುಖವಾಗಿ ಆಕರ್ಷಿಸುತ್ತಿರುವ "ಪ್ರಯತಿ" ಶಕ್ತಿಯ ಪರಿಣಾಮವಾಗಿ ಮೀನಿನ ಹೃದಯದಲ್ಲಿ ಮೂಡಿದ ಬಾನಲೆತದ ಕಡುಹಾರೈಕೆಯಲ್ಲವೆ? ಅಂತಹ ನವಾನುಭವಮೂಲವಾದ ಅಭೀಪ್ಸೆಯೆ ನೈಸರ್ಗಿಕ ಪರವರ್ತನೆಗೆ ಕಾರಣವಾಗುತ್ತದೆ. ಅನುಭವ, ಅಭೀಪ್ಸೆ, ಅದಕ್ಕೆ ಅನುಗುಣವಾಗಿ ಅಕೃತಕವಾಗಿ ನಿಸರ್ಗಸಹಜವಾಗಿ ಸಂಭವಿಸುವ ರೂಪ ವ್ಯತ್ಯಾಸ – ಈ ಮೂರನ್ನು ನಾವು ಲಕ್ಷ್ಯದಲ್ಲಿಡಬೇಕು. ಏಕೆಂದರೆ ಈ ಮೂರರಲ್ಲಿ ಯಾವುದೊಂದು ಊನವಾದರೂ ವಿಕಾರಸೃಷ್ಟಿಯಾಗುತ್ತದೆ. ಅಂತಹ ವಿಕಾರಸೃಷ್ಟಿ ನೂತನವಾಗಿ ತೋರಿದರೂ ಅದಕ್ಕೆ ಬದುಕುವ ಹಕ್ಕೆ ಇರುವುದಿಲ್ಲ. ಒಂದೆರಡು ದಿನಗಳ ಮಟ್ಟಿಗೆ ಜನರ ಕುತೂಹಲವನ್ನು ಕೆಣಕಿ ಸೆಳೆದು ಕೆರಳಿಸಿ ಸತ್ತುಹೋಗುತ್ತದೆ. ಎರಡು ತಲೆಯ ಕೋಳಿಮರಿ ಅಥವಾ ಎಂಟು ಕಾಲಿನ ಕರು ಹುಟ್ಟಿ ಅಳಿಯುವಂತೆ.
ಪ್ರಪಂಚಜೀವನ ಅನೇಕತೆಯಿಂದ ಏಕತೆಗೆ ಚಲಿಸುತ್ತಿದೆ. ಅನೇಕತೆಯನ್ನು ಇಲ್ಲಗೈಯುವ ಏಕತೆಯ ಕಡೆಗಲ್ಲ; ಅನೇಕತೆಯನ್ನು ಸಮನ್ವಯಗೊಳಿಸುವ ಏಕತೆಗೆ. ಅದರ ಪರಿಣಾಮವಾಗಿ ಅಥವಾ ಮತ್ತೊಂದು ಗೂಢತರದೃಷ್ಟಿಯಿಂದ ಅದಕ್ಕೆ ಕಾರಣವಾಗಿ, ಒಂದು ಪೂರ್ಣದೃಷ್ಟಿ ಸಿದ್ಧವಾಗುತ್ತಿದೆ. ಈ ಪೂರ್ಣದೃಷ್ಟಿಯ ಮತ್ತು ಸಮನ್ವಯಬುದ್ಧಿಯ ಪರಿಣಾಮವಾಗಿ ಅಥವಾ ಮತ್ತೊಂದು ಗೂಢತರದೃಷ್ಟಿಯಿಂದ ಅದಕ್ಕೆ ಕಾರಣವಾಗಿ, ಒಂದು ಪೂರ್ಣದೃಷ್ಟಿ ಸಿದ್ಧವಾಗುತ್ತಿದೆ. ಈ ಪೂರ್ಣದೃಷ್ಟಿಯ ಮತ್ತು ಸಮನ್ವಯಬುದ್ಧಿಯ ಪರಿಣಾಮವಾಗಿ ಒಂದು ಸರ್ವ ಸಮಾನತೆಯ ಸಮತಾಭಾವ ತಲೆದೋರಿ ಸುಪ್ರತಿಷ್ಠಾಪಿತವಾಗಲು ಪ್ರಯತ್ನಿಸುತ್ತದೆ. ರಾಜಕೀಯ ಮತ್ತು ಆರ್ಥಿಕರಂಗಗಳಲ್ಲಿ ಅದು ವರ್ಣಪೂರ್ಣವಾಗಿ ಕಲಹಕೌಲುಗಳಿಂದ ರಂಜಿತವಾಗಿ ಸುಪ್ರಕಟವಾಗಿ ಗೋಚರಿಸುತ್ತದೆ. ಆದರೆ ಸಾಮಾಜಿಕ ರಂಗದಲ್ಲಿ, ಧಾರ್ಮಿಕ ರಂಗದಲ್ಲಿ ಮತ್ತು ಸಾಹಿತ್ಯಾದಿ ಕಲಾರಂಗಗಳಲ್ಲಿಯೂ ಅದು ತನ್ನ ನಿಗೂಢ ಕಾರ್ಯದಲ್ಲಿ ತೊಡಗಿರುವುದನ್ನು ಹೊಕ್ಕು ನೋಡಿದರೆ ಕಾಣುತ್ತೇವೆ.

ಮತ ಧರ್ಮ ದೇವರು ಈ ವಿಚಾರಗಳಲ್ಲಿ ಸಂಕುಚಿತಭಾವಗಳು ವಿಶಾಲವಾಗುತ್ತಿವೆ. ಉಗ್ರರಾಷ್ಟ್ರೀಯತೆಯ ಸ್ವಾರ್ಥತೆ ಸ್ವಪ್ರತಿಷ್ಠೆಗಳು ಅಂತರ ರಾಷ್ಟ್ರೀಯತೆಯ ಕೊಳುಕೊಡೆ ಮೈತ್ರಿಗೆ ಹೆಚ್ಚು ಹೆಚ್ಚು ಶರಣಾದಲ್ಲದೆ ಶಾಂತಿ ಕ್ಷೇಮಗಳು ಯಾವ ಒಂದು ದೇಶಕ್ಕೂ, ಅದು ಎಷ್ಟೇ ದೊಡ್ಡದಾಗಿರಲಿ ಬಲವಾಗಿರಲಿ ಶ್ರೀಮಂತವಾಗಿರಲಿ ಲಭಿಸುವುದಿಲ್ಲ. ದಕ್ಕುವುದಿಲ್ಲ ಎಂಬ ಬುದ್ಧಿ ರಾಜಕಾರಣಿಗಳಲ್ಲಿ ಎಂದಿಗಿಂತಲೂ ಅತಿಶಯವಾಗಿ ಮೂಡುತ್ತಿರುವಂತೆ ತೋರುತ್ತಿದೆ. ಸಂಪತ್ತಿನ ವಿನಿಯೋಗದಲ್ಲಿ 'ಸರ್ವರಿಗೆ ಸಮಪಾಲು' ಸರ್ವರಿಗೆ ಸಮಬಾಳು'ಎಂಬ ಮೂಲತತ್ತ್ವದ ಅನುಷ್ಠಾನ ದಿನದಿನಕ್ಕೂ ಹಬ್ಬಿ ದಿಗ್ವಿಜಯ ಸಾಧಿಸುತ್ತಿದೆ; ಸರ್ವೋದಯ ಸಿದ್ಧಾಂತ ಸಂಸ್ಥಾಪಿತವಾಗುತ್ತಿದೆ.

ಇದನ್ನೆಲ್ಲ ಗಮನಿಸಿದರೆ ಸಮನ್ವಯ, ಸರ್ವೋದಯ, ಪೂರ್ಣದೃಷ್ಟಿ ಈ ಮೂರು ಮಹಾತತ್ತ್ವಗಳು ಜಗತ್ತಿನ ಮುಂದಿನ ಬಾಳಿನ ಮೂಲಮಂತ್ರಗಳಾಗುವುದರಲ್ಲಿ ಸಂದೇಹವಿಲ್ಲ. ಆ ಬಾಳನ್ನು ನಿರೂಪಿಸುವುದರಲ್ಲಿಯೂ ರೂಪಿಸುವುದರಲ್ಲಿಯೂ ಸ್ಥಾಪಿಸುವುದರಲ್ಲಿಯೂ ಆಸಕ್ತವಾಗುವ ಮುಂದಿನ ಸಾಹಿತ್ಯಕ್ಕೂ ಆ ಮೂಲ ಮಂತ್ರತ್ರಯಗಳೆ 'ದರ್ಶನ'ವಾಗಿ ಮಾರ್ಗದರ್ಶಕವಾಗುತ್ತವೆ. ಆ 'ದರ್ಶನ'ದ ಅಭಿವ್ಯಕ್ತಿಗೆ ಅವಶ್ಯಕವಾಗುವ 'ನಿದರ್ಶನ'ವನ್ನು ಸಾಹಿತ್ಯ ಹೊಸದಾಗಿ ಹುಟ್ಟಿಸಿಕೊಳ್ಳಲೂಬಹುದು ಅಥವಾ ಹಳೆಯ ಸಾಮಗ್ರಿಯಿಂದಲೆ ಕಟ್ಟಿಕೊಳ್ಳಲೂಬಹುದು. ಅದರ 'ಪ್ರದರ್ಶನ'ಕ್ಕೆ ಬೇಕಾದ ಕಾವ್ಯಶರೀರವೂ ತನಗೆ ತಾನೆ ಸಿದ್ಧವಾಗುತ್ತದೆ. ಹಳೆಯ ರೂಪಗಳು ಸಾಲದಿದ್ದರೆ ಹೊಸ ರೂಪಗಳನ್ನು ಕಂಡುಕೊಳ್ಳುತ್ತದೆ, ಕಟ್ಟಿಕೊಳ್ಳುತ್ತದೆ. ಆದರೆ ಯಾವ ಶರೀರವಾಗಲಿ ರೂಪವಾಗಲಿ ಅನುಭವ ಅಭೀಪ್ಸೆಗಳ ಒತ್ತಡದಿಂದ ಸಹಜವಾಗಿಯೆ ಮಾಡಬೇಕಾದುದು ಮಾತ್ರ ಅವಶ್ಯಕ. ಏಕೆಂದರೆ ಸಾಹಿತ್ಯ ಶರೀರದಲ್ಲಿ ಎಂದರೆ ಅದರ

ರೂಪಾಂಶದಲ್ಲಿ ಏನೇ ಪರವರ್ತನೆಗಳುಂಟಾದರೂ ಅದು ರಸಾಭಿವ್ಯಕ್ತಿಗೆ ಸಾಧನವಾಗದಿದ್ದರೆ ವ್ಯರ್ಥವಾಗುತ್ತದೆ. ಏಕೆಂದರೆ, ರಸವೆ ನಿತ್ಯಾಂಶ; ಉಳಿದುದೆಲ್ಲವೂ ಅದರ ಹೊಮ್ಮಿಕೆಗೆ ಮೀಸಲಾಗಿರುವ ಲೀಲಾಂಶ.

---

[1] ಸ್ವಧಾ ಅವಸ್ತಾತ್ ಪ್ರಯತಿಃ ಪರಸ್ತಾತ್-ನಾಸದೀಯ ಸೂಕ್ತ.